ರೂ. 2.50
4 ಜುಲೈ 1993

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 15
ಸಂಚಿಕೆ 25 - 26

ಭಾಜಪ ಬೆಂಗಳೂರು ಮೇಳ

ಹಸುವಿನ ಮುಖವಾಡ ಹಾಕುತ್ತಿರುವ ನರಭಕ್ಷಕ

-- ಜಿ.ಎನ್. ನಾಗರಾಜ್

ನಾವು ಅಧಿಕಾರಕ್ಕೆ ಬಂದರೆ ಭಾರತದಲ್ಲಿ ಯಾವುದೇ ಕೋಮುಗಲಭೆ, ದಂಗೆಗಳಾಗದಂತೆ ಭರವಸೆ ನೀಡುತ್ತೇವೆ - ಇದು ಎಲ್.ಕೆ. ಅಡ್ವಾಣಿಯವರ ಉವಾಚ. ಕನ್ನಡದಲ್ಲಿ ಒಂದು ಒಳ್ಳೆಯ ಗಾದೆಯಿದೆ. 'ಕುರಿ ಕಾಯೋ ತೋಳ ಅಂದರೆ ಕೂಲಿನೇ ಬ್ಯಾಡ ಅಂತಂತೆ'. ಹಾಗಾಯಿತು ಅಡ್ವಾಣಿಯವರ ಮಾತು. ರಥಯಾತ್ರೆಯನ್ನು ಆರಂಭಮಾಡಿ ಹೋದ ಹೋದಲ್ಲೆಲ್ಲಾ ನೆತ್ತರ ಚೆಲ್ಲಾಟಕ್ಕೆ ಕಾರಣವಾದ ಈ ವ್ಯಕ್ತಿ, ಕೋಮುಗಲಭೆ, ದಂಗೆಗಳನ್ನುತಮ್ಮ ಅಧಿಕಾರದ ಆಟಕ್ಕೇ ದಾಳವಾಗಿ ಬಳಸುವ ಭಾರತವಲ್ಲೆಲ್ಲಾ ಕೋಮುಗಲಭೆ ದಂಗೆಗಳನ್ನು ದಿನನಿತ್ಯದ ಯಾತನೆಯಾಗಿಸಿದ ಈ ವ್ಯಕ್ತಿಯಿಂದ ಇಂತಹ ಮಾತು!

ಎಲ್ಲಿಂದ ಬಂತು?

ಬೆಂಗಳೂರಿನಲ್ಲಿ ಒಂದು ಅದ್ದೂರಿಯ ಮೇಳ ಹಲವು ಹತ್ತು ಲಕ್ಷಗಳು ಬೆಂಗಳೂರಿನ ಬೀದಿಗಳಲ್ಲಿ ಹರಿದುಹೋದವು. ಎಲ್ಲಿಂದ ಬಂತು? ಅದರಲ್ಲಿ ಕಪ್ಪುಹಣ ಎಷ್ಟು? ಬಿಳಿಎಷ್ಟು? ಈ ಪ್ರಶ್ನೆಗಳು ಜನರ ಮನಸ್ಸಿನಲ್ಲಿ ಉತ್ತರಿಸಬೇಕಾದ್ದು ಈ ಮೇಳ ನಡೆಸಿದ ಭಾ.ಜ.ಪ. ಏಕೆಂದರೆ ಇದೇ ಪ್ರಶ್ನೆಗಳನ್ನು ಇದೇ ಭಾ.ಜ.ಪ. ಕಾಂಗ್ರೆ ಮೇಳಗಳ ಬಗ್ಗೆ ಎಷ್ಟು ಬಾರಿ ಎತ್ತಿಲ್ಲ?

ಅಡ್ವಾಣಿಯವರ ಈ ಮಾತುಗಳನ್ನು ಕೇಳಿ ನಮ್ಮ ಕುಪ್ರಸಿದ್ಧ ಕಾಡುಗಳ್ಳ ವೀರಪ್ಪನ್‌ಗೆ ಬಹಳ ಸ್ಫೂರ್ತಿ ಬಂದಿದೆಯಂತೆ.. ನನ್ನನ್ನು ಕರ್ನಾಟಕ, ತಮಿಳುನಾಡು ರಾಜ್ಯಗಳೆರಡೂ ಏಕಕಾಲಕ್ಕೆ ಅರಣ್ಯ ಮಂತ್ರಿಯನ್ನಾಗಿ ಮಾಡಿದರೆ ಎರಡೂ ರಾಜ್ಯಗಳಲ್ಲಿ ಯಾವುದೇ ಆನೆಯ ಕೊಲೆಯಾಗದಂತೆ, ಯಾವುದೇ ಗಂಧದ ಕಳ್ಳತನವಾಗದಂತೆ ಭರವಸೆ ನೀಡುತ್ತೇನೆ ಎಂದಿದ್ದಾನಂತೆ.

ಹೀಗೆ ಭರವಸೆಗಳ ಸುರಿಮಳೆಯೇ ಆರಂಭವಾಗಿದೆ. ತೀರಾ ಹೊಸ ಹೊಸ ವ್ಯಕ್ತಿಗಳಿಂದ ಹೊಸ ರೀತಿಯ ಭರವಸೆಗಳನ್ನು ನೀಡುವ ಸ್ಪರ್ಧೆಯೇ ಆರಂಭವಾಗಿದೆ. ಕೇಳಿ ಈ ಭರವಸೆಗಳು.

ನನ್ನನ್ನು ಭಾರತದ ಹಣಕಾಸಿನ ಸಚಿವನ್ನಾಗಿ ನೇಮಿಸಿದರೆ ಯಾವುದೇ ಶೇರು ಹಗರಣಗಳಾಗದಂತೆ ಬ್ಯಾಂಕುಗಳಲ್ಲಿ ಐದಾರುಸಾವಿರ ಕೋಟಿರೂಗಳ ಲಪಟಾವಣೆಯಾಗದಂತೆ ನೋಡಿಕೊಳ್ಳುತ್ತೇನೆ.

- ಹರ್ಷದ್ ಮೆಹ್ತಾ

ನನ್ನನ್ನು ಭಾರತದ ಗೃಹಸಚಿವನ್ನಾಗಿ ಮಾಡಿದರೆ ಭಾರತದಲ್ಲಿ ಯಾವುದೇ ಬಾಂಬ್ ಸ್ಫೋಟವಾಗದಂತೆ ನೋಡಿಕೊಳ್ಳುತ್ತೇವೆ.

-ಮುಷ್ತಾಕ್ ಟೈಗರ್ ಮೆಮೋನ್

ಇವನ್ನು ನೋಡಿ ಅಸೂಯೆಪಟ್ಟ ಅಡ್ವಾಣಿಯವರಿಂದ ಹಾಗೂ ಅವರ ಪರಿವಾರದವರಿಂದ ಮತ್ತೆ ಭರವಸೆಗಳ ಸುರಿಮಳೆಯೇ ಸುರಿಮಳೆ ಮತ್ತೆ ಯಾರೂತಮ್ಮೊಂದಿಗೆ ಸ್ಪರ್ಧಿಸುವ ಸಾಹಸವನ್ನೇ ಮಾಡಬಾರದುಬಿಂಬಂತೆ. ವರ್ಣಾಶ್ರಮ ಧರ್ಮ ಪರಿಪಾಲಕರಾದ ನಾವು ಭಾರತದಲ್ಲಿ ಅಸ್ಪೃಶ್ಯತೆಯೇ ಇಲ್ಲದಂತೆ ಮಾಡುತ್ತೇವೆ ಜಾತಿ ಪದ್ಧತಿಯನ್ನು ವಿಜಾತಿ ಮಾಡುತ್ತೇವೆ.

'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದ ಮನುವಿನ ಮಕ್ಕಳಾದ ನಾವು ಸ್ತ್ರೀಯರ ಉದ್ಧಾರಕ್ಕಾಗಿ ಕಂಕಣ ಕಟ್ಟಿದ್ದೇವೆ.

"ಎಲ್ಲಿ ನಾರಿಯರನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ಆನಂದದಲ್ಲಿ ಓಲಾಡುತ್ತಾರೆ" ಎಂಬುದು ನಮ್ಮ ಅಂಬೋಣ. ಅದಕ್ಕಾಗಿ ನಮ್ಮ ಪಕ್ಷದ ಉಪಾಧ್ಯಕ್ಷೆ ವಿಜಯ ರಾಜೆ ಸಿಂಧ್ಯರವರನ್ನೆ ನಾರಿಯರನ್ನು ರೂಪ ಕನ್ವ ಳಂತೆ ಸತಿಗಳನ್ನಾಗಿ ಮಾಡಿ ಪೂಜಾರ್ಹರನ್ನಾಗಿ ಮಾಡುವ ಕೆಲಸಕ್ಕೆ ನಿಯಮಿಸಿದ್ದೇವೆ. ಇತ್ಯಾದಿ,ಇತ್ಯಾದಿ.

ಈ ಭರವಸೆಗಳೊಡನೆ ಸ್ಪರ್ಧಿಸುವ ಧೀರರುಂಟೇ ನಮ್ಮ ನಾಡಲ್ಲಿ. ಹಿಂದೊಮ್ಮೆ ಕಾಂಗ್ರೆಸ್‌ಗೆ ಇದ್ದ ಇಂತಹ 'ಸಾಮಾಜಿಕ ಘೋಷಣೆ'ಗಳೊಡನೆ ಸ್ಪರ್ಧೆ ಮಾಡುವ ಶಕ್ತಿ ಇತ್ತು. ಈಗ ಘೋಷಣೆಗಳೊಡನೆ ಸ್ಪರ್ಧೆಮಾಡುವ ಶಕ್ತಿಯನ್ನೂ ಕಳೆದುಕೊಂಡಿದೆ.

ಭಾರತ ಸ್ವತಂತ್ರವಾದಂದಿನಿಂದ ಇಲ್ಲಿಯವರೆಗೆ ನಾನಾ ಆಟಗಳನ್ನು ಆಡಿ, ನಾನಾವೇಷ ಧರಿಸಿ ಕೊನೆಗೆ ಗಾಂಧಿ ಸಮಾಜವಾದವೂ ವಿಫಲವಾದಾಗ ತಮ್ಮ ಮೂಲಮಂತ್ರವೇ ಸರಿ ಎಂದು ರಾಮಜನ್ಮಸ್ಥಾನದ ಮೊರೆಹೋದ ಭಾಜಪ ಈಗ ಹೊಸ ವೇಷಕ್ಕೆ ಕಾತರಿಸುತ್ತಿರುವುದು ಬೆಂಗಳೂರಿನ ಮೇಳದಲ್ಲಿ ಸ್ಪಷ್ಟವಾಗಿದೆ.

ಭಾರತದ ಎಲ್ಲೆಡೆ ಕೋಮುದಂಗೆಗಳ ಸರಣಿಯನ್ನೇ ಆರಂಭಿಸಿ ಕೋಮುದಂಗೆಯಾದಲ್ಲೆಲ್ಲಾ ಮುಸ್ಲಿಂ ದ್ವೇಷದ ದಳ್ಳುರಿಯ ಫಲವಾಗಿ ಹಿಂದೂಗಳಲ್ಲಿ ಒಂದು ಭಾಗವನ್ನು ಒಲಿಸಿಕೊಂಡ ಭಾಜಪ, ಈ ಯಶಸ್ಸಿನಿಂದ ಹುಮ್ಮಸ್ಸು ತುಂಬಿ ಹಿಂದೂಗಳ ಉಳಿದ ಭಾಗವನ್ನು ಒಲಿಸಿಕೊಳ್ಳಲು ತೀವ್ರಯತ್ನ ಆರಂಭಿಸಿದೆ. ತಮ್ಮಿಂದ ಇನ್ನೂದೂರವೇ ಉಳಿದಿರುವ ಹರಿಜನರನ್ನು, ಹಿಂದುಳಿದ ಜಾತಿಗಳ ಬಹುದೊಡ್ಡ ಭಾಗವನ್ನು, ಮಹಿಳೆಯರನ್ನು ಒಲಿಸಿಕೊಂಡರೆ ಮತ್ತು ಕೋಮುವಾದದ ಫಲವಾಗಿ ಈಗಾಗಲೇ ಗಳಿಸಿದ ಮತಗಳ ಜೊತೆ ಸೇರಿಸಿದರೆ ಮುಂದೆ ನಮಗೆ ಅಧಿಕಾರ ಗ್ಯಾರಂಟಿ ಎಂಬ ಕನಸು ಭಾಜಪದ್ದು.

ಅದರ ಜೊತೆಗೆ ಮುಸ್ಲಿಮರಿಗೆ ಕೋಮುದಂಗೆಗಳಿಲ್ಲದ ನಾಡಿನ ಹಗಲುಗನಸು ಮೂಡಿಸಿದರೆ. ಈಗಾಗಲೇ ಬಾಬರಿಮಸೀದಿ ಕೆಡವಿದ್ದನ್ನೂ, ಅಲ್ಲಿ ರಾಮದೇವಸ್ಥಾನ ಕಟ್ಟುವುದನ್ನೂ ಸಮರ್ಥಿಸುವ ಕೆಲವರು ಮುಸ್ಲಿಂ ಬುದ್ಧಿ ಜೀವಿಗಳ ಜೊತೆ ಕೆಲವರಾದರೂ ಅಂಜುವ, ಶರಣಾಗತರಾಗಬಯಸುವ ಮುಸ್ಲಿಮರು ಮತಗಳು ಸಿಕ್ಕಾವೇನೋ ಎಂಬ ಆಸೆ.

ಇದು ಸಾಧ್ಯವಾಗದೇ ಹೋದರೂ ಅಸಂಖ್ಯರಾದ ಜಾತ್ಯಾತೀತ ಹಿಂದುಗಳನ್ನೂ ಬುದ್ಧಿಜೀವಿಗಳನ್ನು ಜಾತ್ಯಾತೀತ ನಿಲುವು ತಳೆದ ಪತ್ರಿಕೆಗಳನ್ನಾದರೂ ಮೋಸಗೊಳಿಸಬಹುದೇನೋ ಎಂಬ ಲೆಕ್ಕಾಚಾರ ಈ ಸೋಷಿಯಲ್ ಚಾರ್ಟರ್(ಸಾಮಾಜಿಕ ಘೋಷಣೆ)ನ ಹಿಂದಿದೆ.

ಈ ತಂತ್ರಗಾರಿಕೆಯನ್ನು ಬಯಲುಗೊಳಿಸುವ, ಇಂತಹ ಭಯಂಕರ ಕುತಂತ್ರವನ್ನು ಜನರ ಮುಂದೆ ಬಿಚ್ಚಿಡುವ ಹೊಣೆ ದೇಶದ ಎಲ್ಲಾ ಜಾತ್ಯಾತೀತ ಶಕ್ತಿಗಳ ಮೇಲಿದೆ.

ಒಳಪುಟಗಳಲ್ಲಿ

ಬೆಂಗಳೂರಿನಲ್ಲಿ ಕೇಂದ್ರ ಸಮಿತಿ ಸಭೆ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕೇಂದ್ರ ಸಮಿತಿ ಸಭೆ ಬೆಂಗಳೂರಿನಲ್ಲಿ ನಡೆಯಲಿದೆ. ಆಗಸ್ಟ್ 20-24 ರಂದು ಪೊಲಿಟ್‌ಬ್ಯೂರೋ ಸಭೆ ಹಾಗೂ ಆಗಸ್ಟ್ 22-24ರವರೆಗೆ ಕೇಂದ್ರ ಸಮಿತಿ ಸಭೆ ನಡೆಯಲಿದೆ. ಆಗಸ್ಟ್ 24 ರಂದು ಬೃಹತ್ ಸಾರ್ವಜನಿಕ ಸಭೆ ನಡೆಯಲಿದ್ದು ಸಿಪಿಐ(ಎಂ)ನ ಹಿರಿಯ ಮುಖಂಡರೆಲ್ಲಾ ಅದರಲ್ಲಿ ಭಾಗವಹಿಸಲಿದ್ದಾರೆ.

ಕಾಂಗ್ರೆಸಿನಿಂದಾಗಿ ರಾಜ್ಯದಲ್ಲಿ ಆಡಳಿತ ಸ್ತಬ್ಧಗೊಂಡಿದೆ

-- ರಾಜ್ಯಸಮಿತಿ --

ರಾಜ್ಯದಲ್ಲಿ ಕಾಂಗ್ರೆಸ್(ಐ) ಒಳಗಿನ ಸತತವಾದ ಒಳಜಗಳ, ಬಹಿರಂಗ ಟೀಕೆ ಮತ್ತು ಮುಖ್ಯಮಂತ್ರಿಗಳ ಬದಲಾವಣೆ- ವೀರೇಂದ್ರಪಾಟೀಲರನ್ನು ಬದಲಾಯಿಸಿ ಬಂಗಾರಪ್ಪನವರನ್ನು, ಬಂಗಾರಪ್ಪನವರನ್ನು ಬದಲಾಯಿಸಿ ವೀರಪ್ಪಮೊಯಿಲಿಯವರನ್ನು, ಈಗ ವೀರಪ್ಪ ಮೊಯಿಲಿಯವರನ್ನು ಬದಲಾಯಿಸಲು ಹೊರಟಿರುವುದು - ಇವೆಲ್ಲದರ ಪರಿಣಾಮವಾಗಿ ಸರಕಾರದ ದಿನಿತ್ಯ ಚಟುವಟಿಕೆಗಳೇ ನಿಂತುಹೋಗಿದೆ. ಕಾಂಗ್ರೆಸ್(ಐ) ಮಂತ್ರಿಗಳೇ ಬಹಿರಂಗವಾಗಿ ಸರಕಾರದ ಖಜಾನೆ 'ಟೊಳ್ಳು' ಎಂದು ಹೇಳಿರುವುದು ಮಾತ್ರವಲ್ಲ, ರಾಜ್ಯದಾದ್ಯಂತ ಅಭಿವೃದ್ಧಿ ಯೋಜನೆಗಳು, ನೀರಾವರಿ ಯೋಜನೆಗಳು, ನೆರೆಪರಿಹಾರ, ತೊಗರಿ ಬೆಳೆ ನಷ್ಟ ಪರಿಹಾರ ಇವೆಲ್ಲಾ ಏನೇನೂ ನಡೆಯದಂತಾಗಿದೆ. ರಾಜ್ಯದ ಕಾಂಗ್ರೆಸ್(ಐ) ಪಕ್ಷವೇ ನೇರ ಜವಾಬ್ದಾರಿಯೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಟೀಕಿಸಿದೆ.

ರಾಜ್ಯಸಮಿತಿಸಭೆಯು ಜೂನ್ 18-19 ಮತ್ತು 20ನೇ 1993 ರಂದು ಬೆಂಗಳೂರಿನಲ್ಲಿ ಕಾಂ. ಎಸ್.ಕೆ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು.

ಮಠಾಧಿಪತಿಗಳ ಮತ್ತು ಹಲವು ಪ್ರಮುಖ ಜಾತಿಗಳ ಮುಖಂಡರ ಖಾಸಗಿ ಆಡಳಿತದಲ್ಲಿರುವ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಇದೀಗ ಕರ್ನಾಟಕ ರಾಜ್ಯದಲ್ಲಿ ಸುಪ್ರೀಂ ಕೋರ್ಟಿನ "ಕ್ಯಾಪಿಟೇಷನ್ ಫೀ" ರದ್ದು ಮಾಡಿದ ತೀರ್ಪನ್ನು ಸ್ವಲ್ಪ ಮಟ್ಟಿಗಾದರೂ ಜಾರಿ ಮಾಡಲು ಕರ್ನಾಟಕ ಸರ್ಕಾರವು ಹೊರಡಿಸಿರುವ ಆಜ್ಞೆಗಳನ್ನು ನೇರವಾಗಿ ಉಲ್ಲಂಘಿಸಿ ಸದರಿ ಕಾಲೇಜುಗಳನ್ನು ಮುಚ್ಚುವ ಬೆದರಿಕೆ ಹಾಕುವ ಮೂಲಕ ಇಡೀ ರಾಜ್ಯದ ವಿದ್ಯಾರ್ಥಿಗಳ ಮತ್ತು ಹೆತ್ತವರ ಬಗ್ಗೆ [illegible] ವಾದ ನಿಲುವು ತೆಗೆದುಕೊಂಡು, ರಾಜ್ಯದ ವಿದ್ಯಾರ್ಥಿಗಳ ಮತ್ತು ಹೆತ್ತವರ ರಕ್ಷಣೆಗೆ ನಿಲ್ಲುವ ಬದಲು ಈ ಶಿಕ್ಷಣ ದಲ್ಲಾಳಿಗಳ ಕಾಲಿಗೆ ಬಿದ್ದು ಚೌಕಾಸಿ ಮಾಡಲು ಹೊರಟಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದೆ. ಹಾಗೂ ವಿದ್ಯಾರ್ಥಿಗಳು, ಈ ಕುರಿತು ನಡೆಸುವ ಹೋರಾಟಗಳಿಗೆ ತನ್ನ ಸಂಪೂರ್ಣ ಬೆಂಬಲವನ್ನು ಕೊಡಲು ತೀರ್ಮಾನ ಮಾಡಿದೆ.

ರಾಜ್ಯದಲ್ಲಿ ಆಗಸ್ಟ್ 9 ರಿಂದ 14 ವರೆಗೆ ಒಂದು ವಾರ ಕಾಲ "ಕೋಮುಶಕ್ತಿಗಳು ಸತತವಾಗಿ ನಡೆಸುತ್ತಿರುವ ಕೋಮುವಾದಿ ಪ್ರಚಾರದ ವಿರುದ್ಧ ಹಾಗೂ ನರಸಿಂಹರಾಯರ ನೂತನ ಆರ್ಥಿಕ ನೀತಿಯು ರಾಜ್ಯದ ರೈತರನ್ನು ಕಾರ್ಮಿಕರನ್ನು ಸಂಪೂರ್ಣವಾಗಿ ಧೃತಿಗೆಡಿಸುತ್ತಿರುವುದನ್ನು ಪ್ರತಿಭಟಿಸುವ ಸಲುವಾಗಿ ಎಲ್ಲಾ ಸಾಮೂಹಿಕ ಸಂಘಟನೆಗಳ ಬೆಂಬಲದಿಂದ ತೀವ್ರ ಪ್ರಚಾರ ನಡೆಸಬೇಕೆಂದು ಸಿಪಿಐ(ಎಂ) ತನ್ನ ಎಲ್ಲಾ ಘಟಕಗಳಿಗೆ ಕರೆ ಕೊಟ್ಟಿದೆ.

ಜುಲೈ 14 ರಂದು ಅಸಂಘಟಿತ ಕಾರ್ಮಿಕರು ನಡೆಸುವ ರಾಷ್ಟ್ರವ್ಯಾಪಿ ಮುಷ್ಕರವನ್ನು ಕಾಂಗ್ರೆಸ್(ಐ) ಸರ್ಕಾರದ ಹೊಸ ಆರ್ಥಿಕ ನೀತಿಯ ವಿರುದ್ಧವಾಗಿ ಮತ್ತು ಕೋಮುವಾದದ ವಿರುದ್ಧವಾಗಿ ಆಗಸ್ಟ್ 19 ರಂದು ನಡೆಯುವ ಜೈಲ್ ಭರೋ ಹೋರಾಟ, ಸೆಪ್ಟೆಂಬರ್ 9 ರಂದು ನಡೆಯುವ ಅಖಿಲಭಾರತ ಮುಷ್ಕರ ಮತ್ತು ಭಾರತ್‌ಬಂದ್‌ಗಳನ್ನು ಯಶಸ್ವಿಗೊಳಿಸಲು ಶ್ರಮಿಸಬೇಕೆಂದು ರಾಜ್ಯ ಸಮಿತಿಯು ರಾಜ್ಯದಲ್ಲಿರುವ ಪಕ್ಷದ ಎಲ್ಲಾ ಸದಸ್ಯರಿಗೆ, ಒತ್ತೈಷಿಗಳಿಗೆ ಕರೆ ನೀಡಿತು.

ರಾಜ್ಯದಲ್ಲಿ ಜನತಾದಳ ಮತ್ತು ಸಮಾಜವಾದಿ ಜನತಾಪಕ್ಷಗಳು ಒಂದಾಗಲು ನಡೆಯುತ್ತಿರುವ ಪ್ರಯತ್ನಗಳನ್ನು ಸಭೆಯು ಸ್ವಾಗತಿಸಿತು.

ಪ್ರಧಾನಮಂತ್ರಿಗಳು ತಕ್ಷಣ ರಾಜಿನಾಮೆ ನೀಡಬೇಕು

- ಎಡರಂಗ-ರಾಷ್ಟ್ರೀಯರಂಗ ಒತ್ತಾಯ

ಶೇರು ಹಗರಣದ ಪ್ರಮುಖ ಆಪಾದಿತ ಹರ್ಷದ್ ಮೆಹ್ತಾ ನರಸಿಂಹರಾಯರಿಗೆ ಒಂದು ಕೋಟಿ ರೂ. ಕೊಟ್ಟಿರುವೆನೆಂದು ಹೇಳಿರುವುದು ಪ್ರಧಾನಮಂತ್ರಿಗಳ ವಿಶ್ವಾಸಾರ್ಹತೆಯ ಮೇಲೆ ದೊಡ್ಡ ಪ್ರಶ್ನೆ ಚಿಹ್ನೆಯಾಗಿದೆ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆಗೆ ಅನುವು ಮಾಡಿಕೊಡಲು ಪ್ರಧಾನಮಂತ್ರಿಗಳು ತಕ್ಷಣ ರಾಜಿನಾಮೆ ನೀಡಬೇಕು ಎಂದು ಎಡಪಕ್ಷಗಳು ಹಾಗೂ ರಾಷ್ಟ್ರೀಯರಂಗ ಮತ್ತೊಮ್ಮೆ ಒತ್ತಾಯಿಸಿವೆ.

5000 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನೊಳಗೊಂಡ ಇಡೀ ಶೇರು ಹಗರಣದಲ್ಲಿ ಸಾರ್ವಜನಿಕ ಹಣದ ಇಷ್ಟೊಂದು ಅಗಾಧ ಲೂಟಿ ಉಚ್ಚ ಮಟ್ಟದಲ್ಲಿ ರಾಜಕೀಯ ರಕ್ಷಣೆ ಹಾಗೂ ಶಾಮೀಲು ಇರದೆ ಸಾಧ್ಯವಿಲ್ಲ. ಸಿಬಿಐ ತನಿಖೆ ಮಾಡಿದ ರೀತಿಯನ್ನು ನೋಡಿದರೆ ರಾವ್ ಸರಕಾರಕ್ಕೆ ಈ ಹಗರಣದ ಹಿಂದಿರುವ ಸತ್ಯವೇನೆಂದು ತಿಳಿಯುವ ಆಸಕ್ತಿಯಿದೆಯೇ ಎಂಬ ಬಗ್ಗೆಯೂ ಸಂಶಯ ಮೂಡಿಸುತ್ತದೆ. ಹರ್ಷದ್ ಮೆಹ್ತಾರ ವಕೀಲರು ಸಿಬಿಐಗೆ ಬರೆದ ಪತ್ರ ಹಾಗೂ ನವಂಬರ್ 1991ರಲ್ಲಿ 85 ಲಕ್ಷ ರೂಗಳನ್ನು ಹರ್ಷದ್ ಮೆಹ್ತಾ ಏಕೆ ಬ್ಯಾಂಕಿನಿಂದ ತೆಗೆದರು ಎಂಬುದಕ್ಕೆ ವಿವರಣೆ ಪಡೆಯುವಲ್ಲಿ ಸಿಬಿಐ ವಿಫಲಗೊಂಡಿರುವುದು ಸಿಬಿಐನ ಕಾರ್ಯನಿರ್ವಹಣೆಯ ಬಗ್ಗೆ ಆತಂಕ ಹುಟ್ಟಿಸುತ್ತದೆಯಷ್ಟೇ ಅಲ್ಲ, [illegible] ರುವ ಪ್ರಧಾನಿಗಳ ವರ್ತನೆಯ ಬಗ್ಗೆಯೂ ಆತಂಕ ಹುಟ್ಟಿಸುತ್ತದೆ ಎಂದು ಎಡರಂಗ ರಾಷ್ಟ್ರೀಯರಂಗದ ಮುಖಂಡರ ಸಭೆಯ ನಂತರ ನೀಡಲಾದ ಹೇಳಿಕೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಒಂದು ಕೋಟಿ ರೂ. ನೀಡಿದೆನೆಂದು ಹರ್ಷದ್ ಮೆಹ್ತಾ ಹೇಳಿಕೆಯನ್ನು ಪರಿಶೀಲಿಸಬೇಕು ಎಂದಿರುವ ಎಡರಂಗ-ರಾಷ್ಟ್ರೀಯರಂಗ ಮುಖಂಡರು ಈ ಗಂಭೀರ ಆಪಾದನೆಯ ಹಿಂದಿರುವ ಸತ್ಯವನ್ನು ಪೂರ್ಣವಾಗಿ ತಿಳಿಯಬೇಕಾಗಿದೆ ಎಂದಿದ್ದಾರೆ. ಶೇರು ಹಗರಣದ ತನಿಖೆ ನಡೆಸುತ್ತಿರುವ ಜಂಟಿ ಸಂಸದೀಯ ಸಮಿತಿ ವಾಸ್ತವ ಸಂಗತಿಗಳನ್ನು ಕಂಡು ಹಿಡಿಯಬೇಕು, ನರಸಿಂಹರಾವ್‌ರವರು ಸಮಿತಿಗೆ ಇದರಲ್ಲಿ ನೇರವಾಗಿ ತಾನು ನಿರ್ದೋಷಿ ಎಂದು ಸಾಬೀತುಪಡಿಸಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಇವೆಲ್ಲಾ ಕಾರ್ಯಾಂಗ ಸಂಸತ್ತಿಗೆ ಉತ್ತರ ನೀಡುವಂತಹ ಹಾಗೂ ಚುನಾಯಿತ ಪ್ರತಿನಿಧಿ ಜನಗಳಿಗೆ ಒತ್ತಡ ನೀಡುವಂತಹ ಪರಿಣಾಮಕಾರಿ ಕ್ರಮಗಳನ್ನು ರೂಪಿಸುವುದು ತುರ್ತು ಅಗತ್ಯ ಎಂಬುದರತ್ತ ಮತ್ತು ಪೂರ್ಣ ಮಾಹಿತಿ ಪಡೆಯುವ ಜನಗಳ ಹಕ್ಕನ್ನು ಎತ್ತಿ ಹಿಡಿಯುವ ತುರ್ತು ಅಗತ್ಯದತ್ತ ದೇಶದ ಗಮನ ಸೆಳೆದಿವೆ ಎಂದು ಎಡಪಕ್ಷಗಳು-ರಾಷ್ಟ್ರೀಯರಂಗದ ಹೇಳಿಕೆ ಅಭಿಪ್ರಾಯಪಟ್ಟಿದೆ.

ಸ್ವಾತಂತ್ರ್ಯಾ ನಂತರದ ಈ ಅತೀ ದೊಡ್ಡ ಭ್ರಷ್ಟಾಚಾರದ ಹಗರಣದಲ್ಲಿನ ಎಲ್ಲಾ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸಬೇಕು ಎಂದು ಜನ ಬಯಸುತ್ತಾರೆ. ತಪ್ಪಿತಸ್ಥರಿಗೆ ಆಶ್ರಯ ನೀಡಿದ ಅಥವಾ ಅವರೊಂದಿಗೆ ಶಾಮೀಲಾದ ಯಾವುದೇ ಸರಕಾರೀ/ರಾಜಕೀಯ ವ್ಯಕ್ತಿಯನ್ನು ಬಯಲಿಗೆಳೆಯಬೇಕು, ಶಿಕ್ಷಿಸಬೇಕು ಎಂದೂ ಎಡಪಕ್ಷಗಳು ಹಾಗೂ ರಾಷ್ಟ್ರೀಯರಂಗದ ಮುಖಂಡರು ಹೇಳಿದ್ದಾರೆ.

ಈ ಸಭೆಯಲ್ಲಿ ಜನತಾದಳದ ವಿ.ಪಿ. ಸಿಂಗ್, ಶರದ್‌ಯಾದವ್ ಹಾಗೂ ಜೈಪಾಲ್ ರೆಡ್ಡಿ, ಸಿಪಿಐ(ಎಂ)ನ ಸುರ್ಜಿತ್, ಸೀತಾರಾಂ ಯೆಚೂರಿ ಹಾಗೂ ಪ್ರಕಾಶ್ ಕಾರಟ್, ಸಿಪಿಐನ ಇಂದ್ರಜಿತ್ ಗುಪ್ತಾ, ಎಂ.ಫಾರೂಕಿ, ಡಿ.ರಾಜಾ ಹಾಗೂ ಅತುಲ್ ಕುಮಾರ್ ಅಂಜನ್, ತೆಲುಗುದೇಶಂನ ಎಂ.ಪದ್ಮನಾಭಂ ಹಾಗೂ ಜೆ.ಎಂ.ಸಿ. ಬಾಲಯೋಗಿ, ಡಿಎಂಕೆಯ ಮುರಸೋಳಿ ಮಾರನ್, ಆರ್‌ಎಸ್‌ಪಿಯ ತ್ರಿದಿಬ್ ಚೌಧುರಿ ಹಾಗೂ ಫಾರ್ವರ್ಡ್ ಬ್ಲಾಕ್‌ನ ಡಿ.ಡಿ.ಶಾಸ್ತ್ರಿ ಭಾಗವಹಿಸಿದ್ದರು.

ಓದುಗರಲ್ಲಿ ಅರಿಕೆ

ನಿರಂತರ ವಿದ್ಯುತ್ ಅಡಚಣೆಗಳಿಂದಾಗಿ ದಿ.27.6.1993ರ ಸಂಚಿಕೆಯನ್ನು ಪ್ರಕಟಿಸಲಾಗಲಿಲ್ಲ. 4.7.93ರ ಈ ಸಂಚಿಕೆ 12 ಪುಟಗಳೊಂದಿಗೆ ತಮ್ಮ ಕೈ ಸೇರುತ್ತಿದೆ. ನಮ್ಮ ಓದುಗರು, ಏಜೆಂಟರುಗಳಿಗಾಗಿರುವ ತೊಂದರೆಗಾಗಿ ಕ್ಷಮೆ ಕೋರುತ್ತೇವೆ.

-ವ್ಯವಸ್ಥಾಪಕರು

ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಯಲ್ಲಿ ವಿಜಯದ ಮಹತ್ವ ಘಟನೆ

— ಪೊಲಿಟ್‌ಬ್ಯೂರೋ ವಿಶ್ಲೇಷಣೆ —

ಪಶ್ಚಿಮ ಬಂಗಾಳದ ಮೂರು ಹಂತದ ಪಂಚಾಯತ್ ವ್ಯವಸ್ಥೆಯಲ್ಲಿ ಸುಮಾರು ಮೂರರಲ್ಲಿ ಎರಡಂಶ ಸ್ಥಾನಗಳಲ್ಲಿ ಸಿಪಿಐ(ಎಂ) ಹಾಗೂ ಎಡರಂಗವನ್ನು ಗೆಲ್ಲಿಸಿ ಅಲ್ಲಿಯ ಜನತೆ ಒಂದು ನಿರ್ಣಾಯಕ ಮತ ನೀಡಿದ್ದಾರೆ ಎನ್ನುತ್ತಾ ಸಿಪಿಐ (ಎಂ) ಪೊಲಿಟ್‌ಬ್ಯೂರೋ, ಪಶ್ಚಿಮ ಬಂಗಾಳದ ಜನತೆಯನ್ನು ಹಾರ್ದಿಕವಾಗಿ ಅಭಿನಂದಿಸಿದೆ. ಸತತವಾಗಿ ನಾಲ್ಕನೇ ಬಾರಿಗೆ ನಿಯಮಿತ ವೇಳೆಯಲ್ಲಿ ಈ ಚುನಾವಣೆಗಳನ್ನು ಎಡರಂಗ ಸರಕಾರ ನಡೆಸಿದೆ. ಬೇರೆ ಎಲ್ಲಾ ರಾಜ್ಯ ಸರಕಾರಗಳಿಗಿಂತ ಸಂಪೂರ್ಣ ಭಿನ್ನವಾದ ದಾಖಲೆಯಿದು ಎಂದು ಪಿ.ಬಿ. ಹೇಳಿದೆ.

ಸಿಪಿಐ(ಎಂ) ಹಾಗೂ ಎಡರಂಗದ ಗೆಲವು ಚುನಾವಣಾ ಪ್ರಚಾರ ಸಮಯದಲ್ಲಿ ಕಾಂಗ್ರೆಸ್(ಐ) ಮತ್ತು ಬಿಜೆಪಿಯ ವಿಷಪೂರಿತ ಅಪಪ್ರಚಾರದ ಹಿನ್ನೆಲೆಯಲ್ಲಿ ಇನ್ನಷ್ಟು ಮಹತ್ವಪೂರ್ಣ. ಹಲವು ಕಡೆ ಈ ಎರಡು ವರ್ಗಗಳ ನೀತಿಬಾಹಿರ ಹೊಂದಾಣಿಕೆಯನ್ನು ಭೇದಿಸಿ ಈ ಭಾರೀ ವಿಜಯ ಗಳಿಸಲಾಗಿದೆ. ಬಿಜೆಪಿ ಹಾಬ್ರಾದಲ್ಲಿ ಏಕೈಕ ನಗರಸಭೆಯನ್ನು ಗೆದ್ದುಕೊಳ್ಳಲು ಸಾಧ್ಯವಾದದ್ದು ಕಾಂಗ್ರೆಸ್(ಐ) ಅಭ್ಯರ್ಥಿಗಳು ಹಿಂತೆಗೆದುಕೊಂಡದ್ದರಿಂದ. ಈ ಎರಡೂ ಶಕ್ತಿಗಳು ಹಳ್ಳಿಗಳಲ್ಲಿ ಶೋಷಕ ವರ್ಗಗಳ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲು ಶಾಮೀಲಾಗಿವೆ ಎಂದು ಪಿ.ಬಿ. ಆಪಾದಿಸಿದೆ.

ಎಡರಂಗ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರಗಳನ್ನು ವಿಕೇಂದ್ರೀಕರಿಸಿದ ಅಮೋಘ ದಾಖಲೆ ಹೊಂದಿದ್ದರಿಂದಾಗಿ ಪಶ್ಚಿಮಬಂಗಾಳದ ಗ್ರಾಮೀಣ ಜನತೆ ಸಿಪಿಐ(ಎಂ) ಹಾಗೂ ಎಡರಂಗದಲ್ಲಿ ಈ ಭಾರೀ ಪ್ರಮಾಣದ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಈ ಎಡರಂಗದ ಈ ಅಮೋಘ ದಾಖಲೆ ಪಂಚಾಯತುಗಳಲ್ಲಿ ಮತ್ತೆ ಚೈತನ್ಯ ತುಂಬಿತು, ವರ್ಗ ಬಲಾಬಲವನ್ನು ಗ್ರಾಮೀಣ ಬಡವರ ಪರವಾಗಿ ಬದಲಿಸಿತು ಹಾಗೂ ಎಲ್ಲಾ ರೀತಿಯ ಅಭಿವೃದ್ಧಿ ಕೆಲಸಗಳ ಎಲ್ಲಾ ಅಂಶಗಳಲ್ಲಿ ಭಾಗವಹಿಸುವ ಸ್ವಯಮಾಡಳಿತ ಸಂಸ್ಥೆಗಳನ್ನು ಘೋಷಿಸಿತು ಎಂದಿರುವ ಪಿ.ಬಿ. ಈ ಚುನಾವಣೆಯ ಒಂದು ಗಮನಾರ್ಹ ಸಾಧನೆಯೆಂದರೆ 23 ಸಾವಿರ ಮಹಿಳೆಯರು ವಿವಿಧ ಮಟ್ಟಗಳ ಪಂಚಾಯತು ಸಂಸ್ಥೆಗಳ ಕಲಾಪಗಳಲ್ಲಿ ಭಾಗವಹಿಸುವಂತಾಗಿದೆ ಎಂದಿದೆ.

ಎಡರಂಗದ ಪಕ್ಷಗಳಲ್ಲಿ ಸೀಟುಗಳ ಹಂಚಿಕೆಯಲ್ಲಿ ಹೊಂದಾಣಿಕೆಯ ಅಭಾವವಿತ್ತು. ಇದು ಕೂಡಾ ಕೆಲವೆಡೆ ಕಾಂಗ್ರೆಸ್(ಐ), ಬಿಜೆಪಿಗಳಿಗೆ ಪ್ರಯೋಜನವಾಯಿತು ಎಂದು ಗಮನಿಸಿರುವ ಪಿ.ಬಿ. ಎಡಪಕ್ಷಗಳು ಒಟ್ಟಾಗಿ ಈ ಅನುಭವದಿಂದ ಪಾಠ ಕಲಿತು ಇಂತಹ ಸಮಸ್ಯೆಗಳನ್ನು ನಿವಾರಿಸಿಕೊಂಡು ಎಡ ಐಕ್ಯತೆಯನ್ನು ಮತ್ತಷ್ಟು ಬಲಗೊಳಿಸಬೇಕು ಎಂದಿದೆ.

> ***ಜೂನ್ 9-10, 1993ರಂದು ನವದೆಹಲಿಯಲ್ಲಿ ನಡೆಸಿ ಸಭೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಚರ್ಚಿಸಿದ ಮುಖ್ಯ ವಿಷಯಗಳ ಬಗ್ಗೆ ಕೆಲವದರ ಬಗ್ಗೆ ಕಳೆದ ವಾರ ಮುಖಪುಟದಲ್ಲಿ ಓದಿರುವಿರಿ. ಆ ವೇಳೆಗೆ ಪೊಲಿಟ್‌ಬ್ಯೂರೋದ ಪೂರ್ಣ ಹೇಳಿಕೆ ನಮಗೆ ದೊರೆತಿರಲಿಲ್ಲ. ಆ ಹೇಳಿಕೆಯ ಉಳಿದ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.***

ರಾಜ್ಯದಲ್ಲಿ ಬಿಜೆಪಿಯಂತಹ ಕೋಮುಶಕ್ತಿಗಳನ್ನು ಮೂಲೆಗುಂಪು ಮಾಡುವ ಸೈದ್ಧಾಂತಿಕ ಹೋರಾಟವನ್ನು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯಸಮಿತಿ ಮುಂದುವರಿಸುತ್ತದೆ ಎಂದಿರುವ ಪೊಲಿಟ್‌ಬ್ಯೂರೋ ರಾಜ್ಯಸಮಿತಿ, ಪಂಚಾಯತ್ ಚುನಾವಣೆಗಳ ವಿವರವಾದ ವಿಶ್ಲೇಷಣೆ ಮಾಡಿ ಸ್ಥಳೀಯ ಸರಕಾರಗಳಲ್ಲಿ ಜನಗಳು ಪಾತ್ರ ವಹಿಸುವುದರಲ್ಲಿ ದೊರೆತ ಶ್ರೀಮಂತ ಅನುಭವಗಳನ್ನು ಸರಿಯಾಗಿ ಅಧ್ಯಯನ ಮಾಡಿ ಕುಂದು ಕೊರತೆಗಳಿದ್ದಲ್ಲಿ ಅವನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದೆ.

ಪಂಚಾಯತು ಚುನಾವಣೆಗಳಲ್ಲಿ "ಸಿಪಿಐ(ಎಂ) ಅತ್ಯಾಚಾರ" ನಡೆಸಿತೆಂಬ ಕಾಂಗ್ರೆ- ಬಿಜೆಪಿ ಆಪಾದನೆಗಳು ಹಾಗೂ ಇದಕ್ಕಾಗಿ ಅವುಗಳ ಬಂದ್ ಕರೆ ಅವರ ನೀತಿಬಾಹಿರ ಶಾಮೀಲಿನ ಮುಂದುವರಿಕೆಯಷ್ಟೇ ಎಂದಿರುವ ಪಿ.ಬಿ. ಈ ಚುನಾವಣೆಗಳ ನಂತರದ ಹಿಂಸಾಚಾರದಲ್ಲಿ 26 ಸಿಪಿಐ(ಎಂ) ಕಾರ್ಯಕರ್ತರೆ ಜೀವ ಕಳೆದುಕೊಳ್ಳಬೇಕಾಗಿ ಬಂದುದೇ ಹಿಂಸಾಚಾರ ನಡೆಸಿದವರು ಯಾರು ಎಂಬುದನ್ನು ತೋರಿಸುತ್ತದೆ ಎಂದಿದೆ.

ಎಡರಂಗದ ಪ್ರಶಂಸನೀಯ ಕೆಲಸ

ತ್ರಿಪುರಾದ ಎಡರಂಗ ಸರಕಾರ ರಾಜ್ಯದಲ್ಲಿ ಶಾಂತಿ ಹಾಗೂ ಸಾಮಾನ್ಯ ಸ್ಥಿತಿಯನ್ನು ಮತ್ತೆ ನೆಲೆಗೊಳಿಸಲು ಮಾಡುತ್ತಿರುವ ಪ್ರಯತ್ನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಪೊಲಿಟ್‌ಬ್ಯೂರೋ ಕಾಂಗ್ರೆ-ಟಿಯುಜೆಎಸ್ ಇನ್ನಷ್ಟು ಕಿತ್ತಾಟ ಸೃಷ್ಟಿಸಿ ಪರಿಸ್ಥಿತಿಯನ್ನು ಹದಗೆಡಿಸುವ ಪ್ರಯತ್ನ ನಡೆಸಿವೆ ಎಂದು ಖಂಡಿಸಿವೆ. ನಾಗರಿಕರಿಗೆ ಒಂದು ಶಾಂತಿಯ ಹಾಗೂ ಸಾಮಾನ್ಯ ವಾತಾವರಣ ನಿರ್ಮಿಸಲು ಹಾಗೂ ಬುಡಕಟ್ಟು ಹಾಗೂ ಇತರ ಜನಗಳ ಐಕ್ಯತೆಯನ್ನು ಕಾಪಾಡಿಕೊಳ್ಳುತ್ತಲೇ ಉಗ್ರಗಾಮಿ ಚಟುವಟಿಕೆಗಳನ್ನು ಎದುರಿಸುವಲ್ಲಿ ಸರ್ವ ಪ್ರಯತ್ನ ನಡೆಸುವ ನಿರ್ಧಾರವನ್ನು ಎಡರಂಗ ಮಾಡಿದೆ. ಈ ಹಿನ್ನೆಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಕಾಂಗ್ರೆ-ಟಿಯುಜೆಎಸ್ ಕೂಟ ಮೂಲೆಗುಂಪು ಮಾಡಿದ ಪಂಚಾಯತು ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಪಂಚಾಯತು ಸಂಸ್ಥೆಗಳಿಗೆ ಚುನಾವಣೆ ನಡೆಸುವ ಎಡರಂಗ ಸರಕಾರದ ನಿರ್ಧಾರ ಸ್ವಾಗತಾರ್ಹ ಎಂದು ಪಿ.ಬಿ. ಹೇಳಿದೆ.

ಆರ್ಥಿಕ ನೀತಿಗಳ ವಿರುದ್ಧ ಹೋರಾಟ ವ್ಯಾಪಕಗೊಳ್ಳಲಿ

ನರಸಿಂಹರಾವ್ ಸರಕಾರ ಜನಗಳ ಸಂಕಷ್ಟಗಳು ಏರುತ್ತಿರುವುದರ ಪರಿವೆಯೇ ಇಲ್ಲದೆ ಐಎಂಎಫ್ ಶರತ್ತುಗಳನ್ನು ಪರಿಪಾಲಿಸುವುದಕ್ಕಾಗಿ ರೂಪಿಸಿದ ಆರ್ಥಿಕ ನೀತಿಗಳನ್ನು ಮುಂದುವರಿಸುತ್ತಲೇ ಇದೆ. ಡಾ.ಮನಮೋಹನಸಿಂಗ್‌ರ ಮುಂದಿನ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಮೂರು ಶತಕೋಟಿ ಡಾಲರುಗಳ ವಿದೇಶಿ ಹಣಕಾಸು ಸಹಾಯ ಬೇಕಾಗುತ್ತದೆ ಎಂದಿದ್ದಾರೆ. ಮುಂದಿನ ವರ್ಷದಿಂದ ಈ 9 ಶತಕೋಟಿ ಡಾಲರುಗಳ ಸಹಾಯಕ್ಕಾಗಿ ಐಎಂಎಫ್ ಬಳಿಗೆ ಸರಕಾರ ಹೋಗುತ್ತಿದೆ. ಇದು ಖಂಡಿತಾ ಭಾರತವನ್ನು ಸಾಲದ ಬಲೆಯ ಕೆಸರಲ್ಲಿ ಸಿಲುಕಿಸುವ, ದೇಶದ ಭವಿಷ್ಯವನ್ನು ಒತ್ತೆಯಿಡುವ ಹಾದಿ. ಇದಕ್ಕಾಗಿ ಒಪ್ಪಿಕೊಂಡ ಶರತ್ತುಗಳನ್ನು ಪಾಲಿಸುತ್ತಾ ನರಸಿಂಹರಾವ್ ಸರಕಾರ ದುಡಿಯುವ ಜನಗಳ ಮೇಲೆ ಒಂದಾದ ಮೇಲೊಂದು ಪ್ರಹಾರ ನಡೆಸುತ್ತಲೇ ಇದೆ. ತುಟ್ಟಿಭತ್ಯೆ ಸ್ತಂಭನದ ಬೆದರಿಕೆ, ಬಡಜನರು ಮಾತ್ರ ಸರಳ ಜೀವನ ನಡೆಸಬೇಕೆಂಬ ಉಪದೇಶ, ದೊಡ್ಡ ಪ್ರಮಾಣದಲ್ಲಿ ಕಾರ್ಖಾನೆಗಳು ಮುಚ್ಚುತ್ತಿರುವುದು, ನಿರುದ್ಯೋಗ ಹೆಚ್ಚಿಸುವ ಎಕ್ಸಿಟ್ ಪಾಲಿಸಿ, ಏರುತ್ತಲೇ ಇರುವ ಬೆಲೆಗಳು ಈ ನೀತಿಗಳ ಪರಿಣಾಮಗಳು ಎಂದು ಪಿ.ಬಿ. ಹೇಳಿದೆ.

ಸಾರ್ವಜನಿಕ ವಿರೋಧವಿದ್ದರೂ ಡಂಕೆಲ್ ಪ್ರಸ್ತಾಪಗಳನ್ನು ಒಪ್ಪಿಕೊಳ್ಳಲು ಸರಕಾರ ಸಿದ್ಧವಾಗಿ ನಿಂತಿದೆ. ಆದರೆ ತೋರಿಕೆಗೆ ಮಾತ್ರ ಹಾರಿಕೆಯ ಉತ್ತರ ನೀಡುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ತಂಬಾಕು, ಹತ್ತಿ, ಮೆಣಸು, ಗೋಡಂಬಿ, ಆಲೂಗೆಡ್ಡೆ ಮುಂತಾದ ವಾಣಿಜ್ಯ ಬೆಳೆಗಳ ಬೆಲೆಗಳು ಗಮನಾರ್ಹವಾಗಿ ಇಳಿದಿರುವುದರಿಂದ ರೈತರಿಗೆ ನಷ್ಟ ಆಗಿದೆ. ಗ್ರಾಮೀಣ ಜನ ಬರ, ಪ್ರವಾಹಗಳಿಂದ ನರಳುತ್ತಿದ್ದಾರೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಕುಸಿದು ಬಿದ್ದುದರಿಂದ ಮೂಲಭೂತ ಸೌಲಭ್ಯಗಳ ಅಭಾವ ಇನ್ನಷ್ಟು ಹೆಚ್ಚಾಗಿದೆ.

ರಾಜ್ಯ ಸರಕಾರಗಳು, ಕೇಂದ್ರ ಸರಕಾರದ ಆರ್ಥಿಕ ನೀತಿಗಳಿಂದಾಗಿ ವಿದ್ಯುತ್ ದರ, ಸಾಗಾಣಿಕೆ ದರ, ಪ್ರಯಾಣ ದರ, ಶಿಕ್ಷಣ ಶುಲ್ಕ ಇತ್ಯಾದಿಗಳನ್ನು ಏರಿಸಲು ಕ್ರಮ ಕೈಗೊಳ್ಳುತ್ತಿವೆ ಎಂಬುದನ್ನು ಗಮನಿಸಿರುವ ಪೊಲಿಟ್‌ಬ್ಯೂರೋ ಈ ಎಲ್ಲದರ ವಿರುದ್ಧ ಜನಗಳ ಪ್ರತಿಭಟನೆಯನ್ನು ಸಂಘಟಿಸಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಮುಂದೆ ಬರಬೇಕು ಎಂದಿದೆ. ಈ ಎಲ್ಲಾ ಹೋರಾಟಗಳು ಈ ದುಷ್ಟ ಆರ್ಥಿಕ ನೀತಿಗಳ ವಿರುದ್ಧ ಒಂದು ರಾಷ್ಟ್ರವ್ಯಾಪಿ ಆಂದೋಲನವನ್ನು ಬಲಪಡಿಸುತ್ತವೆ ಎಂದು ಅದು ಹೇಳಿದೆ.

ಹೇಳಿದೆ.

ಎಡಪಕ್ಷಗಳ ಐಕ್ಯ ಮಧ್ಯಪ್ರವೇಶ ಅಗತ್ಯ

ಹೊಸ ಆರ್ಥಿಕ ನೀತಿಗಳ-ವಿರುದ್ಧ, ರಾಜ್ಯಗಳಲ್ಲಿ ಹೆಚ್ಚಿಸುತ್ತಿರುವ ಹೊರೆಗಳ ವಿರುದ್ಧ ಹೋರಾಟಗಳನ್ನು ಸಂಘಟಿಸುವಲ್ಲಿ ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳು ನೇತೃತ್ವ ವಹಿಸಬೇಕು ಎಂದು ಪಿ.ಬಿ. ಕರೆ ನೀಡಿದೆ. ಇದರೊಂದಿಗೇ ಬಿಜೆಪಿ ಮತ್ತು ಅದರ ಮಿತ್ರರ ಕೋಮುವಾದಿ ಚಟುವಟಿಕೆಗಳು ಉತ್ತಮ ಜೀವನಕ್ಕಾಗಿ ಜನಗಳ ಹೋರಾಟವನ್ನು, ಐಕ್ಯತೆಯನ್ನು ಮುರಿಯುತ್ತವೆ ಎಂಬ ಬಗ್ಗೆ ಜನಗಳ ನಡುವೆ ಅರಿವು ಹೆಚ್ಚಿಸಲು ಪ್ರಯತ್ನಿಸಬೇಕು. ಈ ಎರಡೂ ಕರ್ತವ್ಯಗಳನ್ನು ಪೂರೈಸಬೇಕಾದರೆ ಸಿಪಿಐ(ಎಂ) ಮತ್ತು ಇತರ ಎಲ್ಲಾ ಎಡಪಕ್ಷಗಳು ತಮ್ಮ ಚಟುವಟಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಬೇಕು ಎಂದಿದೆ. ಈ ಘಟ್ಟದಲ್ಲಿ ಕೋಮುವಾದ ಹಾಗೂ ಆರ್ಥಿಕ ನೀತಿಗಳ ವಿರುದ್ಧ ಇಬ್ಬಗೆಯ ಹೋರಾಟದಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ಜನಗಳನ್ನು ಅಣಿನೆರೆಸಬೇಕಾದರೆ ಎಡಪಕ್ಷಗಳ ಐಕ್ಯತೆ ಹಾಗೂ ಎಡಪಕ್ಷಗಳ ಪರ್ಯಾಯ ನೀತಿಗಳನ್ನು ಜನಜನಿತಗೊಳಿಸುವುದು ಅಗತ್ಯ ಎಂದು ಪಿ.ಬಿ. ಹೇಳಿದೆ:

ರಾಷ್ಟ್ರೀಯ ಏಕತಾ ಆಂದೋಲನದ ವಾರ್ತಾಚರಣೆ ಹಾಗೂ ಸಾಮೂಹಿಕ ಸಂಘಟನೆಗಳ ಭಾರತ್ ಬಂದ್ ಕರೆಗಾಗಿ ದೇಶಾದ್ಯಂತ ನಡೆಯುತ್ತಿರುವ ಆಂದೋಲನದಲ್ಲಿ ಸೇರಿಕೊಳ್ಳಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳಿಗೆ ವಿನಂತಿ ಮಾಡಿದೆ. ಈ ಮೂಲಕ ನರಸಿಂಹರಾವ್ ಸರಕಾರದ ಆರ್ಥಿಕ ನೀತಿಗಳು ಹಾಗೂ ಕೋಮುವಾದಿ ವಿಚ್ಛಿದ್ರಕಾರಿ ನೀತಿಗಳನ್ನು ಹಿಮ್ಮೆಟ್ಟಿಸುವಲ್ಲಿ ಆಂದೋಲನ ಒಂದು ದೊಡ್ಡ ಹೆಜ್ಜೆ ಮುಂದಿಟ್ಟಂತಾಗುತ್ತದೆ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ಜೂನ್ 9 ಹಾಗೂ 10ರಂದು ನಡೆದ ಪೊಲಿಟ್‌ಬ್ಯೂರೋ ಸಭೆ ಅಸ್ಸಾಂ, ತ್ರಿಪುರಾಗಳಲ್ಲಿ ಇರುವ ಗಂಭೀರ ಪ್ರವಾಹ ಪರಿಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ ಈ ಎರಡು ರಾಜ್ಯಗಳಲ್ಲಿ ಪರಿಹಾರ ಹಾಗೂ ಮರುವಸತಿಗಾಗಿ ಕೇಂದ್ರ ಸರಕಾರ ಸಾಕಷ್ಟು ನೆರವು ನೀಡಬೇಕೆಂದು ಮನವಿ ಮಾಡಿದೆ.

ಭರತ ಗಾನ

ಇಲ್ಲಿ
ಕಂಡ ಕನಸುಗಳೆಲ್ಲ ಹಗಲು
ಬೀದಿಯ ನಡುವೆ ಹೆಣವಾದವು.
ದಾರದೆಳೆಗಳು ಉರುಲಾದವು.
ಇರುವ ಪ್ರೇಮದ ಪೊರೆಯ ಬಿಚ್ಚಲಾರದ ಹುಡುಗಿ
ದೇಲಿಯಾಚೆಗೆ ಕಮರಿ ಮೂಕಿಯಾದಳು
ಹೃದಯ ಕವಾಟದ ಒಳಗೆ
ಗೂಬೆ ಕುಣಿಯಿತು.
ಮುಗ್ಧ ಕಣ್ಣಿನ ಒಳಗೆ
ನೆತ್ತರೊಸರಿತು.
ಸಿಂಧೂ ಕಡಲ ಕಿನಾರೆಯಲಿ ಬರೆದ
ಶಾಂತ ಬದುಕಿನ ಕಥನ
ವಿಕೃತ ತೆರೆಗಳಿಗೆ ಬಲಿಪಶುವಾಯ್ತು.
ಜಾತಿ ಧರ್ಮದ ಪ್ರೇತ
ಅವತಾರಿಯಾಯ್ತು.
ಮನುಷ್ಯತ್ವದ ನೆತ್ತರು ನೆಕ್ಕಿದ ನಾಯಿ
ಕೂಗಿ ಹೇಳಿತು
ಯದಾ ಯದಾಹಿ ಧರ್ಮಸ್ಯ.....
ಸಂಭಾವಾಮಿ ಯುಗೇಯುಗೇ.

-- ಬಿ. ಪೀರ್ ಭಾಷಾ
(ಹೂವಿನ ಹಡಗಲಿ)

ಸಿ.ಪಿ.ಐ. ಹೇಳಿಕೆ ಆಧಾರ ರಹಿತ

ಜೂನ್ 12ರ ಕೆಲವು ಪತ್ರಿಕೆಗಳಲ್ಲಿ ಸಿಪಿಐ ಮುಖಂಡ ಚತುರಾನನ ಮಿಶ್ರಾ ತಿಳಿಸಿದರೆನ್ನಲಾದ ಒಂದು ಸುದ್ದಿ ಪ್ರಕಟಗೊಂಡಿದ್ದು ಅದು ಬುಡವಿಲ್ಲದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಎರಡು ವಾರಗಳ ಹಿಂದೆ ಸಿಪಿಐ(ಎಂ) ಹಾಗೂ ಸಿಪಿಐನ ಮುಖಂಡರು ರಾಷ್ಟ್ರೀಯ ಸಂಯೋಜಕ ಸಮಿತಿಯ ಮಟ್ಟದಲ್ಲಿ ಸಭೆ ಸೇರಿ ರಾಜ್ಯಗಳ ಮಟ್ಟದಲ್ಲಿ ಎರಡು ಪಕ್ಷಗಳ ನಡುವೆ ಸಂಯೋಜನೆಯನ್ನು ಉತ್ತಮಗೊಳಿಸುವ ಬಗ್ಗೆ ಚರ್ಚಿಸಿದರು. ಸಾಮೂಹಿಕ ಸಂಘಟನೆಗಳ ಮಟ್ಟದಲ್ಲೂ ಸಂಯೋಜನೆ ಹಾಗೂ ಜಂಟಿ ಚಟುವಟಿಕೆಗಳನ್ನು ಉತ್ತಮ ಪಡಿಸುವ ಬಗ್ಗೆಯೂ ಚರ್ಚಿಸಲಾಯಿತು.

ಜೂನ್ 9 ಹಾಗೂ 10ರಂದು ನಡೆದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಭೆ ರಾಜ್ಯಗಳಿಗೆ ಎರಡು ಪಕ್ಷಗಳ ನಡುವಿನ ಸಂಯೋಜನೆಯನ್ನು ವಿಸ್ತರಿಸುವ ಮೂಲಕ ಎರಡು ಪಕ್ಷಗಳ ನಡುವಿನ ಸಂಯೋಜನೆಯನ್ನು ಉತ್ತಮಪಡಿಸುವ ವಿಚಾರಕ್ಕೆ ಅನುಮೋದನೆ ನೀಡಿತು. ಕೇರಳ, ಪಶ್ಚಿಮ ಬಂಗಾಳ ಹಾಗೂ ತ್ರಿಪುರಾಗಳಲ್ಲಿ ಆಗಲೇ ಎಡರಂಗ ಅಥವಾ ಎಡಪ್ರಜಾಪ್ರಭುತ್ವ ರಂಗ ಸಮಿತಿಗಳಿರುವುದರಿಂದ ಇಂತಹ ಸಂಯೋಜಕ ಸಮಿತಿಗಳನ್ನು ಆ ರಾಜ್ಯಗಳನ್ನು ಬಿಟ್ಟು ಬೇರೆ ರಾಜ್ಯಗಳಿಗೆ ವಿಸ್ತರಿಸುವುದಕ್ಕೆ ಅನುಮೋದನೆ ನೀಡಿತು.

ಆದರೆ ಪತ್ರಿಕೆಗಳಲ್ಲಿ ಚತುರಾನನ್ ಮಿಶ್ರಾ ಎರಡು ಪಕ್ಷಗಳ ಕಿಸಾನ್ ಸಭಾಗಳು, ಕಾರ್ಮಿಕ ಸಂಘಗಳು, ಯುವಜನ-ವಿದ್ಯಾರ್ಥಿ ಸಂಘಟನೆಗಳು ಇತ್ಯಾದಿ ಸಾಮೂಹಿಕ ಸಂಘಟನೆಗಳನ್ನು ವಿಲೀನಗೊಳಿಸಲು ನಿರ್ಧರಿಸಲಾಗಿದೆಯೆಂದು ತಿಳಿಸಿರುವುದಾಗಿ ವರದಿಯಾಗಿದೆ. ಇದು ಆಧಾರಹೀನವಾದದ್ದು. ಇಂತಹ ನಿರ್ಣಯವನ್ನು ತಗೊಂಡಿಲ್ಲ ಎಂದು ಪ್ರಕಾಶ್ ಕಾರಟ್ ಪತ್ರಿಕಾ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಚರ್ಚೆ ನಡೆದದ್ದು ಸಾಮೂಹಿಕ ಸಂಘಗಳ ನಡುವೆ ಸಂಯೋಜನೆ ಹಾಗೂ ಜಂಟಿ ಚಟುವಟಿಕೆಗಳನ್ನು ಹೇಗೆ ಉತ್ತಮಪಡಿಸುವುದೆಂಬ ಬಗ್ಗೆ ಎಂದು ಹೇಳಿಕೆ ತಿಳಿಸಿದೆ.

(ಐ.ಎನ್.ಎಸ್.)


ಬಿಜೆಪಿ ಎಂಪಿಗೇ ಮತ್ತೊಮ್ಮೆ ಪಿ.ಎ.ಸಿ. ಅಧ್ಯಕ್ಷ ಸ್ಥಾನವೇಕೆ?

ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಸರದಿಯಂತೆ ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಕೊಡುವ ಪರಂಪರೆಯಿದೆ. ಇತ್ತೀಚೆಗೆ ಇದನ್ನು ಮುರಿದು ಬಿಜೆಪಿ ಸದಸ್ಯರನ್ನು ಎರಡನೇ ಬಾರಿಗೆ ಈ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇದು ದುರದೃಷ್ಟಕರ ಎಂದು ಸಂಸತ್ ಸದಸ್ಯರಾದ ಸಿಪಿಐ(ಎಂ) ನ ಸೋಮನಾಥ್ ಚಟರ್ಜಿ, ಸೈಫುದ್ದೀನ್ ಚೌಧುರಿ, ಸಿಪಿಐನ ಇಂದ್ರಜಿತ್ ಗುಪ್ತ ಹಾಗೂ ಜನತಾದಳದ ಜೈಪಾಲರೆಡ್ಡಿ ಹಾಗೂ ಶರದ್ ಯಾದವ್ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ತಣ್ಣನೆ ಬಿತ್ತರಿಸಲಾಗುವ ಸುದ್ಧಿಯ ಹಿಂದೆ ಎಂತಹ ನೋವು! ಎಷ್ಟೊಂದು ನೋವು!!

- ಕೇಪ್ರಳ

ದಕ್ಷಿಣ ಕನ್ನಡ ಜಿಲ್ಲೆಯ ಕೋಮುವಾದ ವಿರೋಧಿ ವೇದಿಕೆ ಕೋಮುವಾದದ ವಿರುದ್ಧ ಹೋರಾಟವನ್ನು ರೂಪಿಸುತ್ತಾ ಬಂದಿದೆ. ಆಯೋಧ್ಯಾ ಗಲಭೆಗಳ ಬಗ್ಗೆ ಸತ್ಯಶೋಧಕ ಸಮಿತಿ ರಚಿಸಿ ಗಲಭೆಗಳ ವಾಸ್ತವ ಚಿತ್ರಣ ನೀಡುವುದರ ಮೂಲಕ ಇಡೀ ರಾಜ್ಯಕ್ಕೆ ಮಾದರಿಯಾಗಿದೆ.ಇಲ್ಲಿ ಆ ವರದಿಯತ್ತ ಕಿರುನೋಟ ಹರಿಸಲಾಗಿದೆ.



ಓಹ್! ರಕ್ತ ಕಲೆಗಳೇ ನಿಮ್ಮನ್ನು ತೊಳೆಯಲು ಇನ್ನೂ ಅದೆಷ್ಟು ಮಳೆ ಸುರಿಯದೇಕಾಗಿದೆಯೋ? ಎಂದು ಕವಿ ಫೈಜ್ ಅಹ್ಮದ್ ಫೈಜ್ ನಿಟ್ಟುಸಿರಿಟ್ಟಿದ್ದರು. ಡಿಸೆಂಬರ್ 6ರ ಅಯೋಧ್ಯಾ ಪ್ರಕರಣದ ನಂತರ ಇಡೀ ಭಾರತದಲ್ಲಿ ಹರಿದ ರಕ್ತದ ಹೊಳೆ ಈ ನಿಟ್ಟುಸಿರು ಭಾರವಾಗುವಂತೆ ಮಾಡಿದೆ.

ಈಗ ಮುಂಗಾರು ಮಳೆಯ ಕಾಲ. ಆಗಸದಿಂದ ಸುರಿಯುವ ಭಾರೀ ಮಳೆಯಾದರೂ ಈ ರಕ್ತದ ಕಲೆಗಳನ್ನು ತೊಳೆದು ಹೊಸ ಬದುಕಿಗೆ ನಾಂದಿ ಹಾಡೀತೆ? ಎನ್ನುವುದು ದಕ್ಷಿಣ ಕನ್ನಡ ಜಿಲ್ಲೆಯ ಕೋಮುವಾದ ವಿರೋಧಿ ವೇದಿಕೆಯ ಆಶಯ.

ದಕ್ಷಿಣ ಕನ್ನಡ ಜಿಲ್ಲೆ ಈ ಮೊದಲಿನಿಂದಲೂ ಕೋಮು ಸೌಹಾರ್ದಕ್ಕೆ ಹೆಸರಾದ ಜಿಲ್ಲೆಯೇ ಆಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ತಲೆಯೆತ್ತಿರುವ ಕೋಮುವಾದ ಇಡೀ ಸಮಾಜವನ್ನು ಕಂಗೆಡಿಸುತ್ತಾ ಬಂದಿದೆ. ಇದರ ಕರಾಳ ರೂಪ ಬೆಳಕಿಗೆ ಬಂದದ್ದು ಡಿಸೆಂಬರ್ 6ರ ಘಟನೆಯ ನಂತರ.

ಅಯೋಧ್ಯಾ ಹಿಂಸಾಚಾರಕ್ಕೆ ಗಟ್ಟಿ ಹಿನ್ನೆಲೆಯನ್ನು ಒದಗಿಸಿದ ಈ ಶಕ್ತಿಗಳು ಅಂದಿನಿಂದಲೂ ಕಾಲಕಾಲಕ್ಕೆ ಹೆಡೆಯಾಡಿಸುತ್ತಲೇ ಬಂದಿದೆ. ಈ ಜಿಲ್ಲೆಯಲ್ಲಿ ಕುಡಿಯೊಡೆಯುವ ಪ್ರೀತಿ ಪ್ರೇಮಕ್ಕೂ ಕೋಮುವಾದದ ಸರ್ಪಗಾವಲಿದೆ. ಹೀಗಾಗಿಯೇ ಕುಂದಾಪುರದಲ್ಲಿ ಭಾಸ್ಕರ್ ಕೊಠಾರಿ ಹಾಗೂ ಮುನಾವರ್ ನಡುವಿನ ಪ್ರೇಮವನ್ನು ಕೋಮುವಾದಿಗಳು ಊರಿನ ಧ್ವಂಸಕ್ಕೆ ಬಳಸಿಕೊಳ್ಳಲು ಕಾರಣವಾಯಿತು.

ಇದೀಗ ಈ ಜಿಲ್ಲೆಯ ಕೋಮುವಾದಿಗಳು ಮಹಾರಾಷ್ಟ್ರದ ಶಿವಸೇನೆಯ ಮಾದರಿಯಲ್ಲಿ ಭಯೋತ್ಪಾದನೆಯನ್ನೇ ಮುಖ್ಯ ಅಸ್ತ್ರವಾಗಿಸಿಕೊಂಡ ತಂಡವನ್ನು ಘುಟ್ಟುಹಾಕಿದೆ. ಜಾತ್ಯಾತೀತತೆ ಇಲ್ಲಿ ನರಳುತ್ತಿದೆ.

ಮಧುರಂಗಿ ಮಾಸುವ ಮೊದಲೇ ವಿಧವೆಯಾದಳು

ದೈಕಂಪಾಡಿ ಇಂಡಸ್ಟ್ರೀಯಲ್ ಎಸ್ಟೇಟ್ ಬಳಿಯ ತಾಜ್ ಹೋಟೆಲನ್ನು ಪೂರ್ತಿ ನಾಶಪಡಿಸಿದ್ದಾರೆ. ಅದರ ಮಾಲಿಕ ಬಿ.ಮಹಮ್ಮದ್‌ರನ್ನು ಥಳಿಸಿ ಆಸ್ಪತ್ರೆ ಸೇರುವಂತೆ ಮಾಡಿದ್ದಾರೆ. ಇಲ್ಲಿನ ಅಂಗರ ಗುಂಡಿ ಮಸೀದಿಯಲ್ಲಿ ಪ್ರಾರ್ಥನೆಗೆ ಬಂದಿದ್ದ ಯುವಕ ಅಬೂಬಕ್ಕರ್‌ನನ್ನು ಹಿಡಿದು ಹೊಡೆದು ಬಡಿದು ಮಸೀದಿಯ ಬಾವಿಗೆ ಹಾಕಿದರು. ಅವನು ನೀರಿನಿಂದ ಮೇಲೆದ್ದು ಬರುತ್ತಿರುವುದನ್ನು ಕಂಡು ಅಲ್ಲೇ ಇದ್ದ ಪಂಪ್ ಸೆಟ್ ಮೋಟಾರನ್ನು ಕಿತ್ತು ಅವನ ತಲೆಯ ಮೇಲೆ ಹೊತ್ತು ಹಾಕಿ ಕೊಂದರು. ಹದಿನೈದು ದಿನಗಳ ಹಿಂದೆಯಷ್ಟೇ ಮದುವೆಯಾದ ಇವನ ಪತ್ನಿಯ ಕೈಗಳ ಮಧುರಂಗಿಯ ಬಣ್ಣವಿನ್ನೂ ಮಾಸಿಲ್ಲವೆಂದು ಜನರ ಮನಕರಗುವ ವಿವರಗಳನ್ನು ನೀಡುತ್ತಾರೆ.

ಸತ್ಯಶೋಧನೆ

ಈ ಹಿನ್ನೆಲೆಯಲ್ಲಿ ಕೋಮುವಾದ ವಿರೋಧಿ ವೇದಿಕೆ, ಸೌಹಾರ್ದ ಜಿಲ್ಲೆ ಕೋಮುವಾದಿಗಳ ಕೈಯಡಿ ಜಾರಿದ ಕ್ರಮವನ್ನು, ಜನರ ನೋವನ್ನು ಅರಿಯಲು ಪ್ರಯತ್ನಿಸಿತು. ಅಯೋಧ್ಯಾ ಗಲಭೆಗಳನ್ನು ಆಧಾರವಾಗಿಟ್ಟುಕೊಂಡು 'ಸತ್ಯಶೋಧಕ ಸಮಿತಿ' ರಚಿಸಿ ಇಡೀ ಜಿಲ್ಲೆಯಲ್ಲಿ ಸಂಚರಿಸಿ ಘಟನೆಯ ವಾಸ್ತವವನ್ನು ಪರಿಚಯ ಮಾಡಿಕೊಟ್ಟಿತು.

ದಕ್ಷಿಣ ಕನ್ನಡದಲ್ಲಿ ಮಾಹಿತಿಗಳನ್ನು ತಿರುಚಲೆಂದೇ, ಕೋಮು ಗಲಭೆಗಳನ್ನು ಹುಟ್ಟುಹಾಕಲೆಂದೇ, ಕೋಮು ಸಾಮರಸ್ಯದ ಮೇಲೆ ಹಲ್ಲೆ ನಡೆಸಲೆಂದೇ ಅನೇಕ ಪತ್ರಿಕೆಗಳು ಇವೆ. ಸುಳ್ಳನ್ನೇ ನಿಜವಾಗಿಸುವ ಕಾಯಕದಲ್ಲಿ ತೊಡಗಿರುವ ಪರಿಸ್ಥಿತಿಯಲ್ಲಿ ಕೋಮುವಾದ ವಿರೋಧಿ ವೇದಿಕೆಯಲ್ಲಿ ಮರುಭೂಮಿಯಲ್ಲಿ ಮಿಂಚಿದ ಓಯಸಿಸ್. ಸತ್ಯ ಇನ್ನೂ ಉಸಿರಾಡುತ್ತಿದೆ ಎಂದು ಭರವಸೆ ಕೊಡುವ ಆಶಾಕಿರಣ.

ಖ್ಯಾತ ಸಾಹಿತಿ ಫಕೀರ್ ಮಹಮ್ಮದ್ ಕಟ್ಪಾಡಿ, ವಿಮರ್ಶಕ ಜಿ.ರಾಜಶೇಖರ್, ಪ್ರಜಾವಾಣಿ ಮುಖ್ಯ ವರದಿಗಾರ ಇ.ವಿ.ಸತ್ಯನಾರಾಯಣ, ಮುಂಗಾರು ವ್ಯಂಗ್ಯ ಚಿತ್ರಕಾರ ಪಿ.ಮಹಮ್ಮದ್ ಮತ್ತು ವಸಂತ ಬನ್ನಾಡಿಯವರನ್ನೊಳಗೊಂಡ ಈ ಸತ್ಯ ಶೋಧಕ ಸಮಿತಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ವ್ಯಾಪಕ ಪ್ರವಾಸ ಮಾಡಿ ವರದಿಯನ್ನು ನೀಡಿತು.

ಈ ವರದಿಯನ್ನು ವೇದಿಕೆ ಪ್ರಕಟಿಸುವುದರ ಮೂಲಕ ಇಡೀ ರಾಜ್ಯದಲ್ಲಿ ಹೊಸ ಹೆಜ್ಜೆ ಹಾಕಿದೆ.

ಮನೆ ಬಾಗಿಲಿದೆ

ಮೊರಾದಾಬಾದ್, ಮೀರತ್, ಭಿವಂಡಿ, ಜಲಗಾಂವ್, ಅಹ್ಮದಾಬಾದ್‌ಗಳಲ್ಲಿ ನಡೆಯುವ ಗಲಭೆಗಳು ಯಾವತ್ತು ದೂರದ ಗಲಭೆಗಳೇ ಆಗಿರುತ್ತಿದ್ದವು. ಗಲಭೆ ನಡೆಸುವವರು ನಮ್ಮಂಥವರಲ್ಲ! ಖಾಲಿ ಪೋಲಿ ಜನಗಳು ಎಂದು ಭಾವಿಸಲಾಗಿತ್ತು. ಆದರೆ ಈಗ ಆ ದೂರು ಇಲ್ಲವಾಗಿದೆ. ಗಲಭೆ ಎನ್ನುವುದು ಮನೆಯ ಬಾಗಿಲಿಗೇ ಬಂದಿದೆ ಎನ್ನುವುದನ್ನು ವರದಿಯ ಆರಂಭದಲ್ಲಿಯೇ ಎತ್ತಿ ತೋರಿಸಲಾಗಿದೆ. ಪಾಪಾತ್ಮರ ಚಟುವಟಿಕೆಗಳು ಹೆಚ್ಚಾಗಲು ಪುಣ್ಯಾತ್ಮರು ಮೌನವಾಗಿದ್ದರೆ ಸಾಕು ಎನ್ನುವಂತೆ ಸಜ್ಜನರ ಇದುವರೆಗಿನ ಮೌನ ಬೀದಿಯಲ್ಲಿ ಹೋಗುತ್ತಿದ್ದ ಮಾರಿಯನ್ನು ಮನೆ ಬಾಗಿಲಿಗೆ ತಂದುಕೊಂಡಿದೆ.

ಜಿಲ್ಲೆಯಲ್ಲಿ ಬೆಳೆಯುತ್ತಿರುವ ನಿರುದ್ಯೋಗ, ಆರ್ಥಿಕ, ಸಾಮಾಜಿಕ ಅಸಮಾನತೆಯ ವಿರುದ್ಧ ಮೂಡಿದ ಯುವಕರ ಸಿಟ್ಟನ್ನು ಮುಸ್ಲಿಮರ ಮೇಲಿನ ದಾಳಿಗೆ ವ್ಯವಸ್ಥಿತವಾಗಿ ತಿರುಗಿಸಲಾಗಿದೆ. ಹಿಂದೂ ವ್ಯಾಪಾರಿಗಳು ಮತ್ತು ಮುಸ್ಲಿಂ ವ್ಯಾಪಾರಿಗಳ ನಡುವೆ ವ್ಯಾಪಾರ ಸಂಬಂಧಗಳಲ್ಲಿ ಉಂಟಾದ ವೈಷಮ್ಯ ವ್ಯವಸ್ಥಿತವಾಗಿ ಕೋಮು ಗಲಭೆಯಾಗಿದೆ ಎಂಬುದನ್ನು ವರದಿ ಗಮನಿಸಿದೆ.

ದಕ್ಷಿಣ ಕನ್ನಡದಲ್ಲಿ ಯಾವುದೇ ಪೂಜೆ, ಊರುಸ, ನೇಮ, ಕೋಲಗಳಲ್ಲಿ ಹಿಂದೂ ಮುಸ್ಲಿಂ ಭೇದವೇ ಇಲ್ಲದೇ ಎಲ್ಲರೂ ಸೇರುವುದು ಅಂಗಡಿ ಇಡುವುದು ಸಾಮಾನ್ಯ. ಆದರೆ ಈ ಪರಿಸ್ಥಿತಿ ಈಗ ಬದಲಾಗಿದೆ. ಹಿಂದೂ ರಾಷ್ಟ್ರವಾದಿಗಳು ಈ ಹಬ್ಬ ಉತ್ಸವಗಳಲ್ಲೆಲ್ಲಾ ತಲೆ ಹಾಕಿ ಚಿಕ್ಕ ಪುಟ್ಟ ವ್ಯಾಪಾರ ಮಾಡುವ ಬಡ ಮುಸ್ಲಿಮರ ಬೆಂಡು ಬತ್ತಾಸು, ಮಕ್ಕಳ ಆಟಿಕೆ, ಗಿಲೀಟಿನ ಒಡವೆಗಳ ಅಂಗಡಿಗಳನ್ನು ನಾಶ ಮಾಡಿ ಮುಸ್ಲಿಮರನ್ನು ಬೆದರಿಸುತ್ತಿದ್ದಾರೆ. "ನೇಮ ಉತ್ಸವ ಹಿಂದೂಗಳದ್ದು. ಮುಸ್ಲಿಮರು ಇಲ್ಲಿಗೆ ಬರುವ ಅಗತ್ಯವಿಲ್ಲ" ಎಂಬ ಕ್ರೂರ ನಿಯಮ ಹುಟ್ಟು ಹಾಕಿ ಮಾನವೀಯತೆಯನ್ನು ಹೊಸಕಿ ಹಾಕುತ್ತಿರುವುದನ್ನು ಸತ್ಯ ಶೋಧಕ ಸಮಿತಿ ಅತ್ಯಂತ ನೋವಿನಿಂದ ಗಮನಿಸಿದೆ.

ಇಡೀ ಕೋಮುಗಲಭೆಯನ್ನು ಹೇಗೆ ಪೂರ್ವಯೋಜಿತವಾಗಿ ನಡೆಸಲಾಯಿತು, ಹಾನಿಯ ಸಮೀಕ್ಷೆ, ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿ ಕಟ್ಟಿದ್ದರ ಬಗ್ಗೆ, ಲೂಟಿ ಹೇಗೆ ನಡೆಯಿತೆಂಬುದರ ಬಗ್ಗೆ ವಿವರ ವರದಿ ನೀಡಲಾಗಿದೆ.

ಮಾನವೀಯತೆ

ಕೇವಲ ಇಷ್ಟು ಮಾತ್ರವೇ ಆಗಿದ್ದರೆ ವರದಿ ಜನರ ಎದೆಗಳಲ್ಲಿ ಬರೀ ತಲ್ಲಣಗಳನ್ನು ಮಾತ್ರ ಹುಟ್ಟು ಹಾಕುತ್ತಿತ್ತೇನೋ? ಆದರೆ ಪ್ರತೀ ಗಲಭೆಗಳ ಸಂದರ್ಭದಲ್ಲಿಯೂ ಜನ ಜಾತಿ, ಧರ್ಮ ಮರೆತು ಮೆರೆಯುವ ಮಾನವೀಯತೆಯನ್ನು ವರದಿ ಗಮನಿಸಿದೆಯಲ್ಲದೆ ಅಂತಹ ಪ್ರಕರಣಗಳ ವಿವರ ನೀಡಿದೆ.

ಆಕಾಶವಾಣಿ, ದೂರದರ್ಶನಗಳು ತಣ್ಣನೆ ಬಿತ್ತರಿಸುವ ಸುದ್ದಿಗಳ ಹಿಂದೆ ಎಂತಹ ನೋವುಅಡಗಿದೆ ಎಂಬುದರ ಸಮರ್ಥ ಚಿತ್ರಣವನ್ನು ಈ ವರದಿ ನೀಡುತ್ತದೆ. ಸರಕಾರ ನೀಡುವ ಅಂಕಿ ಅಂಶಗಳು ಎಷ್ಟು ಬೋಗಸ್ ಎಂಬುದನ್ನೂ ಮನಗಂಡ ಸತ್ಯ ಶೋಧಕ ಸಮಿತಿ ಸರಕಾರದ ಅಂಕಿ ಅಂಶಗಳು ಅವೈಜ್ಞಾನಿಕವೆನಿಸಿದ ಕಡೆಗಳಲ್ಲೆಲ್ಲಾ ಸಮಿತಿಯ ಪರಿಣಿತ ಅಂದಾಜನ್ನು ಮುಂದಿಟ್ಟಿದೆ.

ಈ ವರದಿ ಸಾಧಿಸುವುದಾದರೂ ಏನನ್ನು? ಗಾಳಿ ಸುದ್ದಿಗಳ ಮೂಲಕವೇ ನೆತ್ತರು ಹರಿಯುವಂತೆ ಮಾಡುವ, ಸುಳ್ಳು ಸುದ್ದಿಗಳನ್ನೇ ಸತ್ಯವಾಗಿಸುವ ಗೊಬೆಲ್ಸ್‌ನ ವಂಶಜರ ಮುಂದೆ ಇದು ಸುಳ್ಳಿಗೆ ಸೆಡ್ಡು ಹೊಡೆದ ಸಮಾಜ ಕಟುಸತ್ಯಗಳಿಗೆ ಕನ್ನಡಿ ಹಿಡಿವ ಸತ್ಯದ ವಕ್ತಾರ. ಈ ಸತ್ಯದ ಮೂಲಕ ಪ್ರತಿಭಟನೆಯ ಒಂದು ಮೊಳಕೆ ಮೂಡಿದರೆ ಸಾಕು. ಇನ್ನೇನು ಬೇಕು?

ಮನುಷ್ಯತ್ವದ ಸೆಲೆಗಳು

ಕುತ್ತಾರ್ ಪದವಿನ ಮದನಿ ನಗರದ ಎದುರು ಇರುವ Expo-Lac ಪೈಂಟ್ ಫ್ಯಾಕ್ಟರಿಗೆ ಕಲ್ಲು ಹೊಡೆದು ಕಿಟಕಿ ಬಾಗಿಲುಗಳ ಗಾಜನ್ನು ಪುಡಿಗಟ್ಟಿದ್ದಾರೆ. ಆದರೆ ಈ ಸಂಸ್ಥೆಯ ಶ್ರೀ ಯೋಗೀಶ್‌ರವರಿಗೆ ಈ ಘಟನೆ ಮರೆಯಲಾಗದ ನೆನಪೊಂದನ್ನು ನೀಡಿದೆ. ದಿನಾಂಕ 9ನೇ ಡಿಸೆಂಬರ್ 1992ರಂದು ಎಲ್ಲೆಡೆ ಗಲಭೆ ನಡೆಯುತ್ತಿರುವಾಗ ಕುತ್ತಾರ್‌ಪದವಿನ ಕರ್ನಾಟಕ ವುಡ್ ಇಂಡಸ್ಟ್ರೀಸ್‌ನ ಮೇಲೆ ದಾಳಿ ಮಾಡಲು ಹಿಂದೂ ಕೋಮಿನ ಗುಂಪೊಂದು ಬಂದಿತ್ತು. ಕಾರ್ಖಾನೆಯ ಗಾರ್ಡ್‌ಗಳು ಬಲವಾಗಿ ಪ್ರತಿರೋಧಿಸಿದರಿಂದ ಈ ದಾಳಿಕೋರರು ಹಿಮ್ಮೆಟ್ಟಬೇಕಾಯಿತು. ಹಿಂದಿರುಗುವಾಗ ಅಲ್ಲೇ ಇದ್ದ ಬೀಡಾ, ಬೀಡಿ ವ್ಯಾಪಾರದ ಗೂಡಂಗಡಿಯನ್ನು ಪುಡಿ ಮಾಡಿ ಬೆಂಕಿ ಇಟ್ಟರು. ಈ ಚಿಕ್ಕ ಅಂಗಡಿಯಲ್ಲಿ ಪುಟ್ಟ ಹೆಣ್ಣು ಮಗಳೊಬ್ಬಳು ವ್ಯಾಪಾರ ನಡೆಸುತ್ತಿದ್ದುದನ್ನು ಇಲ್ಲಿನವರು ನೆನಪಿಸಿಕೊಳ್ಳುತ್ತಾರೆ. ಈ ಘಟನೆಯಿಂದ ಇಲ್ಲಿನ ಮುಸ್ಲಿಮ್ ಕೋಮಿನ ಯುವಕರು ಸಿಟ್ಟಿಗೆದ್ದು ಯೋಗೀಶ್‌ರವರ ಫ್ಯಾಕ್ಟರಿಯ ಮೇಲೆ ದಾಳಿಯಿಟ್ಟರು. ಆದರೆ ಫ್ಯಾಕ್ಟರಿಯ ಬಳಿಯ ಮನೆಗಳಲ್ಲಿ ವಾಸಿಸುವ ಅಬ್ದುಲ್ಲಾ ಮತ್ತು ಬಷೀರ್‌ರವರು ಫ್ಯಾಕ್ಟರಿಗೆ ತಮ್ಮ ಬೀಗವನ್ನು ಹಾಗಿ ಕಾವಲು ಕೂತು ರಕ್ಷಿಸಿದರು. ಆತಂಕಗೊಂಡ ಯೋಗೀಶ್‌ರವರಿಗೆ ಫೋನ್ ಮಾಡಿ ಸಮಾಧಾನಪಡಿಸಿದರು. ನಾಲ್ಕು ದಿನಗಳ ನಂತರವಷ್ಟೇ ತನ್ನ ಫ್ಯಾಕ್ಟರಿಗೆ ಹೋಗುವಂತಾಗಿ ತನ್ನ ಫ್ಯಾಕ್ಟರಿಯನ್ನು ರಕ್ಷಿಸಿದ ಮುಸ್ಲಿಮ್ ನಾಗರಿಕರನ್ನು ಶ್ರೀ ಯೋಗೀಶ್‌ರವರು ಕೃತಜ್ಞತೆಯೊಂದಿಗೆ ನೆನೆಯುತ್ತಾರೆ.

ಇಲ್ಲಿನ ಮುಸ್ಲಿಮ್ ಕೋಮಿನ ಯುವಕರು ಗುಂಪು ಕಟ್ಟಿ ಹಿಂದೂ ಕೋಮಿನವರ ಅಂಗಡಿಗಳನ್ನು ನಾಶಪಡಿಸಲೆಂದು ಹೊರಟಾಗ ಊರ ಹಿರಿಯರು ತಡೆಗಟ್ಟಿದ ಸಂಗತಿಯನ್ನು ಜನರು ಹೇಳುತ್ತಾರೆ. ಹಲವಾರು ವರ್ಷಗಳಿಂದ ಇಲ್ಲಿರುವ ಹಿಂದೂ ಮುಸ್ಲಿಂ ಸೌಹಾರ್ದವನ್ನು ಒಡೆಯುತ್ತೀರಾದರೆ ಮೊದಲು ನನ್ನ ಅಂಗಡಿಯನ್ನೇ ಬಲಿ ತೆಗೆದುಕೊಂಡು ನಿಮ್ಮ ಸಿಟ್ಟನ್ನು ತೀರಿಸಿಕೊಳ್ಳಿ ಎಂದು ಮುಸ್ಲಿಮ್ ವ್ಯಾಪಾರಸ್ಥರೊಬ್ಬರು ಹೇಳಿದಾಗ ಈ ಮುಸ್ಲಿಮ್ ಯುವಕರು ಕಕ್ಕಾಬಿಕ್ಕಿಯಾಗಿ ಮೆಲ್ಲನೆ ಚದುರಿದ್ದನ್ನು ಇಲ್ಲಿನ ಜನರು ನೆನಪಿಸಿಕೊಳ್ಳುತ್ತಾರೆ.

ಕುತ್ತಾರ್ ಪದವಿನ ಮದನಿನಗರದ ಈ ಪ್ರದೇಶದಲ್ಲಿ ಮಾನವೀಯತೆ ಮೆರೆದ ಹಲವು ಪ್ರಸಂಗಗಳು ನಮಗೆ ಕಾಣಸಿಗುತ್ತವೆ. ಇಲ್ಲಿ ನಾಲ್ಕು ದಿನಗಳ ಕರ್ಫ್ಯೂನಿಂದಾಗಿ ಅವಶ್ಯಕ ವಸ್ತುಗಳ ಕೊರತೆಯುಂಟಾಯಿತು. ಕೆಲವು ಮುಸ್ಲಿಮ್ ಮಹನೀಯರು ತಮ್ಮಲ್ಲಿದ್ದ ಆಹಾರ ಸಾಮಗ್ರಿಗಳನ್ನು ಹಿಂದೂ ಮುಸ್ಲಿಮ್ ತಾರತಮ್ಯ ತೋರಿಸದೆ ಹಂಚಿಕೊಂಡದ್ದನ್ನು ಜನರು ನೆನೆದುಕೊಳ್ಳುತ್ತಾರೆ.

ಎಚ್ಚೆತ್ತವರು

ಇನ್ನೊಂದು ಮುಖ್ಯ ಅಂಶವೆಂದರೆ ಉಲ್ಲಾಳ ಪ್ರದೇಶವನ್ನು ಬಿಟ್ಟರೆ ಹಿಂದೆ ನಡೆದ ಕೋಮು ಗಲಭೆಗಳಿಗೆ ಅತ್ಯಂತ ಗಂಭೀರವಾಗಿ ಬಲಿಯಾಗಿದ್ದ ಪ್ರದೇಶಗಳಲ್ಲಿ ಜನರು ಸರಿಯಾದ ಸಮಯದಲ್ಲಿ ಎಚ್ಚರಗೊಂಡಿದ್ದರಿಂದ ಮತ್ತು ಪೋಲೀಸರು ಎಚ್ಚರಿಕೆ ಕ್ರಮಗಳನ್ನು ಸೂಕ್ತ ಸಮಯದಲ್ಲಿ ಕೈಗೊಂಡದ್ದರಿಂದ ಸುಳ್ಯ, ಬೆಳ್ತಂಗಡಿಯ ಪೇಟೆ ಪ್ರದೇಶಗಳು, ಮಂಗಳೂರಿನ ಕುದ್ರೋಳಿ, ಮಣ್ಣುಗುಡ್ಡೆ ಪ್ರದೇಶಗಳಲ್ಲಿ ಗಲಭೆಗಳು ನಡೆದೇ ಇಲ್ಲವೆಂದು ಹೇಳಬಹುದು. ರಾಷ್ಟ್ರೀಯ ನೆಲೆಯಲ್ಲಿ ನೋಡಿದರೂ ಕೂಡಾ ಹಿಂದೆ ಕೋಮು ಗಲಭೆಗಳಿಂದ ತತ್ತರಿಸಿದ ಭಿವಂಡಿ, ಜಲಗಾಂವ್, ಬದಾವುನ್ ಮುಂತಾದ ಪ್ರದೇಶಗಳಲ್ಲಿ, ಕರ್ನಾಟಕದ ಶಿವಮೊಗ್ಗದಂತಹ ಪ್ರದೇಶದಲ್ಲಿ ಕೂಡಾ ಈ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಗಲಭೆ ನಡೆದ ಸ್ಥಳಗಳಲ್ಲಿ ಕೆರಳಿದ ಜನ ತೋರಿದ ನೇರವಾದ ಪ್ರತಿಕ್ರಿಯೆಯಿಂದಾಗಿ ದೊಂಬಿ ನಡೆಯಿತೆಂದು ವ್ಯಾಪಕವಾಗಿ ಹೇಳುವುದು ಕೂಡಾ ಒಂದು ಅಪ್ಪಟ ಸುಳ್ಳೆಂದೂ ನಮಗೆ ಕಂಡು ಬರುತ್ತದೆ. ಡಿಸೆಂಬರ್ ಏಳರಂದೇ ಮಂಗಳೂರಿನ ಕುದ್ರೋಳಿ ಪ್ರದೇಶದ ಮುಸ್ಲಿಮರು ಮತ್ತು ಮೊಗವೀರ ಜನಾಂಗದ ಪ್ರಜ್ಞಾವಂತ ನಾಗರಿಕರು ಒಂದಾಗಿ ಶಾಂತಿ ಸಮಿತಿ ರಚಿಸಿಕೊಂಡು ತಮ್ಮ ಕೇರಿಯೊಳಗೆ ಗಸ್ತು ತಿರುಗುತ್ತಿದ್ದರು. ಹತ್ತಿಪ್ಪತ್ತು ಯುವಕರ ತಂಡವೊಂದು ಈ ಪ್ರದೇಶದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರವಹಿಸಿದ್ದರು. ಆಗಾಗ ಅಪರಿಚಿತರಿಬ್ಬರು ಸ್ಕೂಟರಿನಲ್ಲಿ ಬರುತ್ತಿದ್ದು ಜನರ ಗುಂಪು ಕಂಡಲ್ಲಿ ಹೋಗಿ "ಸ್ಥಳೀಯ ಗೋಕರ್ಣನಾಥ ದೇವಸ್ಥಾನಕ್ಕೆ ಮುಸ್ಲಿಮರು ದಾಳಿ ಇಟ್ಟರೆಂದು" ಒಂದೆಡೆ ಹೇಳಿದರೆ, ಇನ್ನೊಂದೆಡೆ ಕಂಡತ್ತ ಪಳ್ಳಿ ಮಸೀದಿಯನ್ನು ಕೆಡವಿದರೆಂದು ಸುದ್ದಿ ಹೇಳಿ ಪರಾರಿಯಾಗುತ್ತಿದ್ದುದನ್ನು ಇಲ್ಲಿನ ಜನ ಈಗ ನೆನಪಿಗೆ ತಂದು ಕೊಳ್ಳುತ್ತಾರೆ. ಪ್ರತೀ ಬಾರಿಯೂ ಇಲ್ಲಿನ ಯುವಕರು ತಾಳ್ಮೆ ಕಳೆಕೊಳ್ಳದೆ ಒಬ್ಬಿಬ್ಬರನ್ನು ಅವರು ಹೇಳಿದ ಸ್ಥಳಗಳಿಗೆ ಅಟ್ಟಿ ಸುದ್ದಿ ಸುಳ್ಳೆಂದು ದೃಢಪಡಿಸಿಕೊಂಡದ್ದನ್ನು ಮೊಗವೀರ ಮಹಿಳೆಯೋರ್ವರು ನಮಗೆ ಹೇಳಿದರು. ತಮ್ಮ ಒಗ್ಗಟ್ಟಿನ ಬಗ್ಗೆ ಇಲ್ಲಿನ ಜನ ಅಭಿಮಾನವಿಟ್ಟುಕೊಂಡಿದ್ದಾರೆ.

ದಕ್ಷಿಣ ಕನ್ನಡದಲ್ಲಿ ಅಯೋಧ್ಯ ಕೋಮು ಗಲಭೆಗಳು ಒಂದು ಸಮೀಕ್ಷೆ

ಕೋಮುವಾದ ವಿರೋಧಿ ವೇದಿಕೆ,
17, ಪೆರೇರಾ ಲಾಡ್ಜ್, ಹಂಪನಕಟ್ಟಾ,
ಮಂಗಳೂರು - 575 001.

ವಿಜಾಪುರದ ನೀರಿನ ದಾಹ ನೀಗಿಸಿ

ವಿಜಾಪುರದ ನಗರದಲ್ಲಿ ತೀವ್ರವಾಗಿರುವ ನೀರಿನ ಕೊರತೆಯನ್ನು ನೀಗಿಸುವಂತೆ ಆಗ್ರಹಿಸಿ ಸಿಪಿಎಂ ಜಿಲ್ಲಾ ಸಮಿತಿ ಮುಖ್ಯಮಂತ್ರಿಯವರಿಗೆ ಅರ್ಪಿಸಿರುವ ಮನವಿಯ ಪೂರ್ಣ ಪಾಠ ಇಲ್ಲಿದೆ.

ಅನೇಕ ವರ್ಷಗಳಿಂದ ಬಿಜಾಪುರ ನಗರದಲ್ಲಿ ಕುಡಿಯುವ ನೀರಿನ ಅಭಾವ ಕಾರಣವಿದ್ದು ನಗರದ ಜನರಿಗೆ ತುಂಬಾ ತೊಂದರೆ ಆಗಿದೆ. ಅನೇಕ ಮಂತ್ರಿಗಳು ಜಿಲ್ಲೆಯಿಂದ ಆಯ್ಕೆಗೊಂಡರೂ ವಿಜಾಪುರಕ್ಕೆ ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ. ಈಗ ಅನೇಕ ದಿವಸಗಳಿಂದ ನಗರದಲ್ಲಿ ನಳ್ಳಿಗಳಿಗೆ ನೀರು ಬರುತ್ತಿಲ್ಲ ಜನರು ಕುಡಿಯುವ ನೀರಿನ ಬಗ್ಗೆ ಇಡೀ ರಾತ್ರಿ ಹಾಗೂ ಮಧ್ಯಾಹ್ನದ ಬಿಸಿಲೆನ್ನದೆ ನೀರಿಗಾಗಿ ಪರದಾಡುವುದನ್ನು ನೋಡಿದರೆ ನಗರದ ಜನರ ಕಷ್ಟವನ್ನು ಕಣ್ಣಿನಿಂದ ನೋಡಲಾರದ ಹಾಗೆ ಆಗುತ್ತದೆ. ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಹೇಳಿದರೂ ಇದುವರೆಗೆ ಯಾವುದೇ ಶಾಶ್ವತ ಪರಿಹಾರ ಕೈಗೊಳ್ಳಲು ಸರಕಾರ ವಿಫಲಗೊಂಡಿದೆ. ಆದ್ದರಿಂದ ತಾವು ಇತ್ತ ಕಡೆಗೆ ಗಮನಹರಿಸಿ ನೀರಿಗಾಗಿ ಪರಿತಪಿಸುತ್ತಿರುವ ವಿಜಾಪೂರ ನಗರದ ಜನತೆಗೆ ನೀರಿನ ಶಾಶ್ವತ ವ್ಯವಸ್ಥೆ ಮಾಡಬೇಕು.

ಬೇಡಿಕೆಗಳು :

ನಗರಸಭೆ ಜಲಮಂಡಳಿಗಳಲ್ಲಿ ತಿಕ್ಕಾಟವನ್ನು ಕೊನೆಗಾಣಿಸಿ ಜಲಮಂಡಳಿಗಳಿಗೆ ಸಂಪೂರ್ಣ ಜವಾಬ್ದಾರಿ ನೀಡಬೇಕು.

ಕೊಲ್ಹಾರ ಬ್ಯಾರೇಜ್‌ದಿಂದ ಕಳಪೆ ಪೈಪುಗಳು ಹಾಕಿದ್ದು ಸಿ.ಓ.ಡಿ. ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಒಡೆದ ಪೈಪುಗಳನ್ನು ಬದಲಾವಣೆ ಮಾಡಿ ಬೇರೆ ಪೈಪುಗಳ ವ್ಯವಸ್ಥೆಗೊಳಿಸಬೇಕು. ನಗರದಲ್ಲಿ ಕುಡಿಯುವ ನೀರಿಗೋಸ್ಕರ 17 ಕೋಟಿ ರೂಗಳ ಮಂಜೂರು ಆಗಿದ್ದು ಇದುವರೆಗೂ ಯೋಜನೆ ಆಗಿಲ್ಲ ಯೋಜನೆಗಳು ತ್ವರಿತಗತಿಯಲ್ಲಿ ಜಾರಿ ಆಗಲು ಭ್ರಷ್ಟಾಚಾರ ತಡೆದು ಎಲ್ಲ ಪಕ್ಷ ಸಂಸ್ಥೆ ಸಂಘಟನೆಗಳ, ಗಣ್ಯರ ಸಮಿತಿಯನ್ನು ರಚಿಸಬೇಕು. ಕೊಲ್ಹಾರ ಬ್ಯಾರೇಜಿಗೆ ವಿದ್ಯುತ್ ಬಂದಾದರೆ ಪರ್ಯಾಯವಾಗಿ ಒಂದು ಜನರೇಟರ್ ವ್ಯವಸ್ಥೆ ಮಾಡಬೇಕು. ಟ್ಯಾಂಕರಗಳಿಂದ ಒಯ್ದ ನೀರನ್ನು ಜಲ ಸಂಗ್ರಾಹಲಯಕ್ಕೆ ಹಾಕಿ ನಳ್ಳಿಗಳಿಗೆ ಪೂರೈಕೆಯಾಗುವಂತೆ ಮಾಡಬೇಕು. ಟ್ಯಾಂಕರುಗಳಿಂದ ನೀರನ್ನು ಸರಬರಾಜು ಮಾಡುವುದನ್ನು ನಿಲ್ಲಿಸಬೇಕು. ಏಕೆಂದರೆ ನೀರು ಪೋಲಾಗಿ ಹೋಗುತ್ತದೆ. ಆಲಮಟ್ಟಿ ಅಣೆಕಟ್ಟಿನಿಂದ ರೇಲ್ವೆ ಮುಖಾಂತರ ಬಂದು ಬಾಗಲಕೋಟೆ ಜಲ ಸಂಗ್ರಾಹಲಯಕ್ಕೆ ನೀರು ಬಿಡಬೇಕು. ಬಿಜಾಪೂರ ನಗರಕ್ಕೆ ನಾಲ್ಕು ನೀರು ಸಂಗ್ರಾಹಲಯ ಮಂಜೂರು ಆಗಿದ್ದು ಈಗ ಎರಡು ಟ್ಯಾಂಕಿಗಳು ತಯಾರು ಇದ್ದು ಇನ್ನೂ ಎರಡು ಟ್ಯಾಂಕಿಗಳನ್ನು ಶೀಘ್ರವಾಗಿ ತಯಾರು ಮಾಡಬೇಕು. ಪ್ರಾಚೀನ ಬಾವಿಗಳಲ್ಲಿ ನೀರಿದ್ದು ಅವುಗಳನ್ನು ಶುದ್ಧೀಕರಿಸಿ ಪೂರೈಸಬೇಕು. ಅಧಿಕಾರಿಗಳು ಗಣ್ಯ ವ್ಯಕ್ತಿಗಳು ಅಕ್ರಮವಾಗಿ ನೀರು ಬಳಸುವುದನ್ನು ನಿಲ್ಲಿಸಬೇಕು. ಪಂಪ್‌ಸೆಟ್‌ಗಳಿಂದ ನೀರನ್ನು ಮುಖ್ಯ ಕೊಳವೆಗೆ ತೆಗೆದುಕೊಳ್ಳುವುದು ಜಪ್ತಿ ಮಾಡಿ ಅಂತಹವರ ಮೇಲೆ ಕ್ರಮ ತೆಗೆದುಕೊಂಡು ಸಾರ್ವಜನಿಕರಿಗೆ ನೀರು ಪೂರೈಕೆಯಾಗುವಂತೆ ಮಾಡಬೇಕು. ವಾರಕ್ಕೊಮ್ಮೆ ನಳ್ಳಿಗಳಿಗೆ ನೀರು ಪೂರೈಸಿದರೂ ಪಕ್ಷಪಾತ ಹಾಗೂ ಭ್ರಷ್ಟಾಚಾರದಿಂದಾಗಿ ಸರಿಯಾಗಿ ನೀರು ಪೂರೈಕೆಯಾಗುವುದಿಲ್ಲ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಭೂತನಾಳ ಕೆರೆ ಒಣಗಿ ಮಣ್ಣು ತುಂಬಿದ್ದು ಅದನ್ನು ತೆಗೆಯಿಸಿ ರೈತರಿಗೆ ಕೊಡಬೇಕು.

ನಗರಸಭೆ ಬೊಕ್ಕಸ ಖಾಲಿಯಾಗಿದೆ ಎಂದು ಆಯುಕ್ತರು ಹೇಳುತ್ತಿದ್ದಾರೆ ಸರ್ಕಾರ ಇತ್ತ ಕಡೆ ಗಮನಹರಿಸಿ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಿ ಈ ಎಲ್ಲ ಬೇಡಿಕೆಗಳನ್ನು ಈಡೇರಿಸಬೇಕೆಂದು, ನಗರದ ಶಾಸಕರುಗಳು ಉಸ್ತುವಾರಿ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಇತ್ತ ಕಡೆ ನೋಡಿಯೇ ಇಲ್ಲ, ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಈ ಎಲ್ಲ ಬೇಡಿಕೆಗಳನ್ನು ತೀವ್ರವಾಗಿ ಈಡೇರಿಸದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ ಎಂದು ಸಿಪಿಐ(ಎಂ) ಮುಖ್ಯಮಂತ್ರಿಗಳಿಗೆ ಎಚ್ಚರಿಸಿದೆ.

ಬಿಜಾಪುರ ಜಿಲ್ಲಾ ಡಿವೈಎಫ್‌ಐ ಸಮ್ಮೇಳನ

ವಿಜಾಪುರ ಸರಕಾರಿ ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಪದವಿ ಕೇಂದ್ರವನ್ನು ವಿಜಾಪುರದಲ್ಲಿ ಕೂಡಲೇ ತೆರೆಯುವಂತೆ ಪುರಭವನದಲ್ಲಿ 27,28 ರಂದು ಡಿ.ವೈ.ಎಫ್.ಐ ಮೂರನೇ ಸಮ್ಮೇಳನ ಒತ್ತಾಯಿಸಿದೆ.

ವಿಜಾಪೂರ ನಗರಕ್ಕೆ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗಿದ್ದು ಈ ಸಮಸ್ಯೆಯನ್ನು ಶಾಶ್ವತ ಪರಿಹರಿಸಬೇಕೆಂದು ಆಗ್ರಹಿಸುವ ಒಂದು ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿತು.

ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ, ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ದೊರಕಿಸಿ ಕೊಡಬೇಕು. ಖಾಸಗಿ ಕಾಲೇಜುಗಳನ್ನು ರಾಷ್ಟ್ರೀಕರಣಗೊಳಿಸಬೇಕು. ಬಿಎಡ್ ಹಾಗೂ ಟಿಸಿಹೆಚ್ ನಿರುದ್ಯೋಗಿ ಶಿಕ್ಷಕರನ್ನು ಖಾಲಿ ಇರುವ ಹುದ್ದೆಗಳಲ್ಲಿ ಕೂಡಲೇ ಭರ್ತಿ ಮಾಡಬೇಕು. ಎಂಬ ನಿರ್ಣಯಗಳ ಜೊತೆಗೆ ಕೃಷ್ಣಾ ನೀರಾವರಿ, ಉದ್ಯೋಗ ಇವುಗಳ ಬಗ್ಗೆ ನಿರ್ಣಯಗಳನ್ನು ಸ್ವೀಕರಿಸಲಾಯಿತು

ಇತ್ತೀಚೆಗೆ ತಾಳಿಕೋಟೆಯಲ್ಲಿ ನಡೆದ ಕೋಮು ಗಲಭೆಯನ್ನು ಖಂಡಿಸಿರುವ ಸಮ್ಮೇಳನ ನೊಂದವರಿಗೆ ಹೆಚ್ಚಿನ ಪರಿಹಾರ ಕೊಡಬೇಕೆಂದು ಒತ್ತಾಯಿಸಿದೆ.

ಸಮ್ಮೇಳನವು ಹೊಸ ಸಮಿತಿಯೊಂದನ್ನು ರಚಿಸಿತು. ಮುನ್ನಸಾಬ ಕಲಾದಗಿ ಅಧ್ಯಕ್ಷರಾಗಿ, ಸದ್ದಣ್ಣ ಐರೋಡಗಿ ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಸದಾನಂದ ಮೋದಿ, ಸಹ ಕಾರ್ಯದರ್ಶಿಗಳಾಗಿ, ಎಂ.ಎ. ಮೋಕಾಶಿ ಹಾಗೂ ಮಲ್ಲಿಕಾರ್ಜುನ ಹೆಬ್ಬಾಳ ಖಜಾಂಚಿಯಾಗಿ ಶಂಭುಲಿಂಗ ಒಡೆಯರ ಹಾಗೂ ಇತರ 13 ಜನರ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಮೊದಲು ಕಾರ್ಯದರ್ಶಿ 4 ವರ್ಷದ ವರದಿಯನ್ನು ಸಮ್ಮೇಳನದಲ್ಲಿ ಮಂಡಿಸಿದರು. ಈ ವರದಿಯ ಮೇಲೆ 20 ಪ್ರತಿನಿಧಿಗಳು ಮಾತನಾಡಿದರು. ಕೊನೆಗೆ ಎಂ.ಎ. ಮೋಕಾಶಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ದುಡಿಯುವ ಮಹಿಳೆಯರ ಜಿಲ್ಲಾ ಸಮಾವೇಶ

ಬೆಂಗಳೂರು : ದುಡಿಯುವ ಮಹಿಳೆಯರ ಜಿಲ್ಲಾ ಸಮಾವೇಶ ದಿನಾಂಕ ಜೂನ್ 16, 1993 ರಂದು ದಿ ಮಿಥಿಕ್ ಸೊಸೈಟಿಯ ಹಾಲ್‌ನಲ್ಲಿ ನಡೆಯಿತು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಸುಬ್ರಮಣ್ಯಂ ರವರು ಮಹಿಳೆಯರ ಸಂಘಟನೆಯನ್ನು ಬಲಪಡಿಸುವ ಅಗತ್ಯವನ್ನು ತಮ್ಮ ಸ್ವಾಗತ ಭಾಷಣದಲ್ಲಿ ವಿವರಿಸಿದರು.

ವರಲಕ್ಷ್ಮಿ, ಮಂಗಳ, ರತ್ನ, ವಿಶಾಲಮತಿ, ಶಾರದಾ, ಗೌರಿ, ಖುರ್ಷಿದ್ ಬೇಗಂ ಇವರು ಇದ್ದ ಅಧ್ಯಕ್ಷ ಮಂಡಳಿಯ ಕಲಾಪಗಳನ್ನು ನಡೆಸಿಕೊಟ್ಟಿತು.

ಕರ್ನಾಟಕ ರಾಜ್ಯ ಸಂಚಾಲಕಿ ಕಾಂ. ರಾಜಮ್ಮನವರು ಈ ಸಮಾವೇಶವನ್ನು ಉದ್ಘಾಟಿಸಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಂಚಾಲಕಿ ಕಾಂ. ವಿಮಲಾರವರು ಶುಭಾಶಯ ಕೋರಿದರು.

ಸಮಾವೇಶವನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ ನಾಯರ್ ಸಿಐಟಿಯು ಜಿಲ್ಲಾ ಮುಖಂಡರಾದ ಕಾಂ. ಜಾನ್ ವಿನ್ಸೆಂಟ್ ಕಾಂ. ಶ್ರೀನಿವಾಸ್‌ರವರು ಮಾತನಾಡಿದರು.

ಈ ಸಮಾವೇಶದಲ್ಲಿ 12 ಕಾರ್ಖಾನೆಗಳಿಂದ ಸುಮಾರು 150 ಮಂದಿ ಮಹಿಳೆಯರು ಭಾಗವಹಿಸಿದ್ದು ಎಲ್ಲಾ ಕಾರ್ಖಾನೆಗಳ ತಲಾ ಒಬ್ಬರು ತಮ್ಮ ಹೋರಾಟಗಳ ಬಗ್ಗೆ ವಿವರಿಸಿದರು.

ನಂತರ 25 ಜನರಿರುವ ಬೆಂಗಳೂರು ಜಿಲ್ಲಾ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ವಿದ್ಯಾರ್ಥಿಗಳ ರಾಜ್ಯಮಟ್ಟದ ಕಾರ್ಯಾಗಾರ

"ಶಿಕ್ಷಣ ಉಳಿಸಿ, ಕೋಮುಸಾಮರಸ್ಯಕ್ಕಾಗಿ" ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಜೂನ್ 26ರಿಂದ ಜುಲೈ ಒಂದರವರೆಗೆ ಗುಲ್ಬರ್ಗ ಜಿಲ್ಲೆಯ ಶಹಾಪುರದಲ್ಲಿ ಸಂಘಟಿಸುತ್ತಿದೆ.

ರಾಜ್ಯದ ಎಲ್ಲ ಕಡೆಯಿಂದ ಆಯ್ಕೆಗೊಂಡ 150 ವಿದ್ಯಾರ್ಥಿಗಳ ಪ್ರತಿನಿಧಿಗಳು ಭಾಗವಹಿಸಲಿರುವ ಈ ಶಿಬಿರದಲ್ಲಿ ಸರ್ಕಾರದ ಜನವಿರೋಧಿ ಶಿಕ್ಷಣ ನೀತಿಯಿಂದ ಉದ್ಭವವಾಗಿರುವ ಶುಲ್ಕ ಏರಿಕೆ, ಒಂದಿ ಹೇರಿಕೆ ಇತ್ಯಾದಿ ಸಮಸ್ಯೆಗಳ ಪರಿಹಾರಕ್ಕೆ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಬೇಕು ಹಾಗೂ ಶಿಕ್ಷಣದ ವ್ಯಾಪಾರೀಕರಣವನ್ನು ಕೊನೆಗೊಳಿಸಬೇಕೆನ್ನುವ ಸುಪ್ರಿಂ ಕೋರ್ಟ್ ತೀರ್ಪಿನ ಜಾರಿಗಾಗಿ ಚರ್ಚಿಸಿ ಹೋರಾಟಗಳನ್ನು ರೂಪಿಸುವುದಲ್ಲದೆ ದೇಶದ ಐಕ್ಯತೆಗೆ ಮತಾಂಧ ಮೂಲಭೂತವಾದಿಗಳ ಶಕ್ತಿಗಳಿಂದ ಉಂಟಾಗಿರುವ ಪರಿಸ್ಥಿತಿಯನ್ನು ಎದುರಿಸಿ ಕೋಮುಸಾಮರಸ್ಯಕ್ಕಾಗಿ ಪ್ರಬಲ ಜನಾಂದೋಲನ ನಡೆಸುವುದರ ಕುರಿತು ಸಹ ಚರ್ಚಿಸಲಾಗುವುದು.

ಈ ಶಿಬಿರದಲ್ಲಿ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಲು ರಾಜ್ಯ ಮತ್ತು ರಾಷ್ಟ್ರದ ಅನೇಕ ಬುದ್ಧಿಜೀವಿಗಳು ಆಗಮಿಸಿದ್ದಾರೆ.

ಶಿರಸಿಯಲ್ಲಿ ವಿದ್ಯಾರ್ಥಿಗಳ ಮೆರವಣಿಗೆ

ಶಿರಸಿ : ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ಸ್ಥಳೀಯ ಪ್ರೋಗ್ರೆಸಿವ್ ಜ್ಯೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಪಿಯುಸಿಯ ಶುಲ್ಕ ಹೆಚ್ಚಳ, ಒಂದಿ ಹೇರಿಕೆ ತಡೆಗಟ್ಟುವಂತೆ ಮತ್ತು 30. ಕಿ.ಮಿಾ. ದೂರದಲ್ಲಿ ಬರುವ ವಿದ್ಯಾರ್ಥಿಗಳಿಗೆ ಹಾಸ್ಟೇಲ್ ಸೌಲಭ್ಯ ಕಲ್ಪಿಸಬೇಕೆಂದು ಸುಪ್ರಿಂ ಕೋರ್ಟ್ ಕೊಟ್ಟಿರುವ ತೀರ್ಪನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ, ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಎ.ಸಿ.ಯವರಿಗೆ ಮನವಿ ಅರ್ಪಿಸಿದರು.

ಎಸ್.ಎಫ್.ಐ.ನ ಜಿಲ್ಲಾ ಸಮಿತಿ ಕಾರ್ಯದರ್ಶಿ ಸುರೇಶ್ ತಾಂಡೇಲ, ಸಹ ಕಾರ್ಯದರ್ಶಿ ಜುಬೇರ ಜುಕಾಕೋ, ಮುಝುಮ್ಮಿಲ್ ಜುಕಾಕೋ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ನಿವೇಶನಕ್ಕೆ ಒತ್ತಾಯಿಸಿ ಲಾರಿ ಹಮಾಲರ ಮೆರವಣಿಗೆ

ವಿಜಾಪುರ: ಸಿಐಟಿಯು ನಿಯೋಜಿತ ಲಾರಿ ಹಮಾಲರ ಸಂಘದಿಂದ ನಿವೇಶನ ಹಾಗೂ ರೇಷನ್ ಅಂಗಡಿ ಕೊಡುವಂತೆ ಒತ್ತಾಯಿಸಿ ಜೂನ್ 11 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಾಲಯದಿಂದ ಬೃಹತ್ ಮೆರವಣಿಗೆಯೊಂದನ್ನು ನಗರದ ಪ್ರಮುಖ ಬೀದಿಯಲ್ಲಿ ನಡೆಸಲಾಯಿತು.

ನಂತರ ತಹಶೀಲ್ದಾರರ ಕಾರ್ಯಾಲಯದ ಎದುರು ಸಿಐಟಿಯು ಮುಖಂಡರಾದ ಮನ್ನಾ ಸಾಬ ಕಲಾದಗಿ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ ಇಂದಿನಕಾಲದಲ್ಲಿ ಪಶು ಪಕ್ಷಿಗಳು ತಮ್ಮ ಮನೆಗಳನ್ನು ಕಟ್ಟಿಕೊಳ್ಳಲು ಸ್ವಾತಂತ್ರ ಪಡೆದಿವೆ. ಆದರೆ ಮಾನವನಿಗೆ ಸ್ವತಂತ್ರವಾಗಿ ಮನೆ ಕಟ್ಟಿಕೊಳ್ಳಲು ಸ್ವಾತಂತ್ರ ಇಲ್ಲಾ ಎಂದರೆ ಇದೆಂಥ ಸ್ವತಂತ್ರ ಸರಕಾರ ಎಂದು ಕಟುವಾಗಿ ಟೀಕಿಸಿದರು. ನಗರದ ಜನತೆ ಎದುರಿಸುತ್ತಿರುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸದೇ ಬರೀ ನಲವತ್ತು ಲಕ್ಷ ರೂ. ಗಳನ್ನು ನೀರಿಗಾಗಿ ಬಿಡುಗಡೆ ಮಾಡಿದ್ದೇವೆ ಎಂಬ ಮುಖ್ಯಮಂತ್ರಿಗಳ ಕಣ್ಣೊರೆಸುವ ತಂತ್ರವನ್ನು ಖಂಡಿಸಿದ ಅವರು ನಗರದ ನೀರಿನ ಸಮಸ್ಯೆಯನ್ನು ತುರ್ತಾಗಿ ಬಗೆಹರಿಸದೇ ಇದ್ದರೆ ವಿಜಾಪೂರ ಬಂದ್‌ಗೆ ಕರೆ ಕೊಡಲಾಗುವುದು ಎಂದು ಸರಕಾರಕ್ಕೆ ಎಚ್ಚರಿಕೆ ನೀಡಿದರು.

ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಹಮಾಲರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿದ ನಂತರ ನ್ಯಾಯಯುತವಾದ ನಿಮ್ಮ ಬೇಡಿಕೆಯನ್ನು ನೆರವೇರಿಸುವುದಾಗಿ ಹೇಳಿದ್ದಲ್ಲದೆ ನ್ಯಾಯ ಬೆಲೆ ಅಂಗಡಿಯನ್ನು ತಕ್ಷಣ ಮಂಜೂರು ಮಾಡಿದ್ದೇನೆಂದು ಹೇಳಿದರು.

ಮೆರವಣಿಗೆಯನ್ನು ಬೆಂಬಲಿಸಿ ಡಿ.ವೈ.ಎಫ್.ಐ. ಮಹೆಬೂಬ ಗುಡಗುಂಟಿ ಎಮ್. ಎ ಮೋಕಾಶಿ ಕಾಳು ಕಂಜರಬಾಟ, ಮುಂತಾದವರು ಭಾಗವಹಿಸಿದ್ದರಲ್ಲದೆ, ಲಾರಿ ಹಮಾಲರ ಸಂಘಟನೆದಿಂದ ಎಲ್ಲ ಸದಸ್ಯರು ಸಿಪಿಐ(ಎಂ) ಮುಖಂಡರಾದ ಐ.ಪಿ. ಲಾಲಕೋಟ ಭಾಗವಹಿಸಿದ್ದರು.

ಪ. ಬಂಗಾಳ ಚುನಾವಣೆಗಳು ಹುಬ್ಬಳ್ಳಿಯಲ್ಲಿ ವಿಜಯೋತ್ಸವ

ಹುಬ್ಬಳ್ಳಿ : ಇತ್ತೀಚೆಗೆ ತ್ರಿಪುರಾ ವಿಧಾನಸಭೆಗೆ ಮತ್ತು ಪ. ಬಂಗಾಳದ ಪಂಚಾಯತ್‌ಗಳಿಗೆ ನಡೆದ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗಗಳು ಅದ್ಭುತ ಜಯಗಳಿಸಿವೆ. ಇದರಿಂದ ಸ್ಫೂರ್ತಿಗೊಂಡು, ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಪಕ್ಷದ ಹಳೇ ಹುಬ್ಬಳ್ಳಿ ಕಛೇರಿಯಲ್ಲಿ ದಿನಾಂಕ ಜೂನ್ 3,1993ರಂದು ಸಿಪಿಐ(ಎಂ) ಚುನಾವಣಾ ವಿಜಯೋತ್ಸವವನ್ನು ಆಚರಿಸಲಾಯಿತು. ಪಕ್ಷದ ಸ್ಥಳೀಯ ಸದಸ್ಯರು ಹಿತೈಷಿಗಳು, ಕಾರ್ಮಿಕರು ಮತ್ತು ಇತರರು ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಚುನಾವಣಾ ವಿಜಯೋತ್ಸವದ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ. ಸಿ. ಆರ್. ಭಟ್, ತ್ರಿಪುರಾ ಮತ್ತು ಪ.ಬಂಗಾಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರಗಳು ಜನಪರ ಕಾರ್ಯಕ್ರಮಗಳನ್ನು ಕೈಗೊಂಡು ನಡೆಸಿದ ಸಾಧನೆಗಳನ್ನು ವಿವರಿಸಿದರು. ತ್ರಿಪುರಾದಲ್ಲಿ ಸಿಪಿಐ(ಎಂ) ಕಾಂಗ್ರೆಸ್-ಟಿಯುಜೆಎಸ್ ದುರಾಡಳಿತ ದಾಳಿ, ದಬ್ಬಾಳಿಕೆಗಳನ್ನು ಎದುರಿಸಿ ಚುನಾವಣೆಯಲ್ಲಿ ಭಾರೀ ವಿಜಯಗಳಿಸಿದೆ. ಗುಡ್ಡಗಾಡು ಜನರ,ಮಹಿಳೆಯರ ಅಪಾರ ವಿಶ್ವಾಸಗಳಿಸಿದೆ. ಎಂದು ತಿಳಿಸಿದರು. ಪ. ಬಂಗಾಳದಲ್ಲಿ ಎಡರಂಗ ಸರಕಾರವು ಕೆಲಸಕ್ಕೆ ಕಾಳು, ಭೂ ಸುಧಾರಣೆ, ಭೂ ರಹಿತ ಕೃಷಿಕೂಲಿಕಾರರಿಗೆ ಭೂಮಿ ಮರುಹಂಚುವಿಕೆ, ಪಾಲುಬೆಳೆಗಾರರ ದಾಖಲೆ, ಪಂಚಾಯತ್ ರಾಜ್ಯಗಳ ಮೂಲಕ ಗ್ರಾಮೀಣ ಬಡವರಿಗೆ ಆಡಳಿತ ಮತ್ತು ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ಮುಂತಾದ ಅನೇಕ ಜನಪ್ರಿಯ ಕಾರ್ಯಕ್ರಮಗಳ ಮೂಲಕ ಜನರ ಅಪಾರ ವಿಶ್ವಾಸಗಳಿಸುತ್ತಾ ಬಂದರು. ಪ. ಬಂಗಾಳದಲ್ಲಿ ಕೃಷಿ ಉತ್ಪಾದನೆ ಕಳೆದ 15 ವರ್ಷಗಳಲ್ಲಿ ದ್ವಿಗುಣಗೊಳ್ಳುತ್ತಾ ಬಂದಿತು. ಭೂಮಿಯ ಶೇ. 75 ರಷ್ಟು ಗ್ರಾಮೀಣ ಬಡವರ ಸ್ವಾಧೀನದಲ್ಲಿದ್ದು ಅದರಲ್ಲಿಯೂ ಶೇ. 50 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಸ್ವಾಧೀನದಲ್ಲಿದೆ ಎಂದರು. ನಿಜವಾದ ಕ್ರಾಂತಿ ಪ. ಬಂಗಾಳದಲ್ಲಿ ನಡೆದಿದೆ ಎಂದರು. ಪ. ಬಂಗಾಳದ ಚುನಾವಣೆಯು ಕಾಂಗ್ರೆಸ್-ಬಿಜೆಪಿ ಚುನಾವಣಾ ಮೈತ್ರಿಯ ಎದುರು ವಿಜಯಗಳಿಸಿದ್ದು ಮಹತ್ವದ ಘಟನೆ ಆಗಿದೆ ಎಂದರು.

ಈ ಸಂದರ್ಭ ಹಿರಿಯ ಕಾರ್ಮಿಕ ಧುರೀಣ ಕಾಂ. ಶಿವಶಂಕರ ಅವರು ಮಾತನಾಡುತ್ತಾ ಪ.ಬಂಗಾಳದ ವಿಜಯವು ಜಾತ್ಯಾತೀತ ಶಕ್ತಿಗಳ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ವಿಜಯ ಎಂದರು. ಇದರಿಂದ ಕರ್ನಾಟಕದಲ್ಲಿ ನಾವು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಕಟ್ಟಬೇಕೆ ದಿಸೆಯಲ್ಲಿ ಸ್ಫೂರ್ತಿ ಪಡೆಯಬಹುದಾಗಿದೆ ಎಂದರು. ಜಿಲ್ಲಾ ಸಮಿತಿಯ ಸದಸ್ಯರಾದ ಡಿ.ಜೆ. ಗೊಂದಕರ್ ಸ್ವಾಗತಿಸಿದರು. ಕಾಂ. ಎಂ.ಹೆಚ್ ಮುಲ್ಲಾ ಧನ್ಯವಾದ ಅರ್ಪಿಸಿದರು. ಪೂರ್ವಭಾವಿಯಾಗಿ ಚುನಾವಣಾ ವಿಜಯದ ಕುರಿತು ಕರಪತ್ರ ಪ್ರಕಟಿಸಿ ವ್ಯಾಪಕವಾಗಿ ಹಂಚಲಾಗಿತ್ತು.

ಟಿ.ಎಸ್.ಅನಂತರಾಮ್ ಅಮಾನತು

ಬೆಂಗಳೂರಿನಲ್ಲಿ ತಾರೀಖು 18-6-93 ರಿಂದ 20ರವರೆಗೆ ನಡೆದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಕಾರ್ಮಿಕ ರಂಗದಲ್ಲಿರುವ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯ ಟಿ.ಎಸ್. ಅನಂತರಾಮ್‌ರವರನ್ನು ವರ್ಗ ಹೋರಾಟದಲ್ಲಿ ನೈತಿಕ ಅಧಃಪತನ, ಹಣಕಾಸಿನ ತೀವ್ರ ದುರುಪಯೋಗಕ್ಕೆ ಸಂಬಂಧಿಸಿದಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತುಗೊಳಿಸಲು ನಿರ್ಧರಿಸಿದೆಯೆಂದು ರಾಜ್ಯ ಸಮಿತಿ ಹೇಳಿಕೆ ತಿಳಿಸಿದೆ.

ಮೊದಲು ಭಾರತವನ್ನು ಉಳಿಸಿಕೊಳ್ಳಬೇಕು

--ಸೀತಾರಾಂ ಯೆಚೂರಿ

ಒಂದು ಉತ್ತಮ ಭಾರತವನ್ನು ಕಟ್ಟಬೇಕಾದರೆ ಮೊದಲು ಅದನ್ನು ಉಳಿಸಬೇಕು. ಧರ್ಮದ ಭೇದ-ಭಾವವಿಲ್ಲದೆ ಎಲ್ಲಾ ದೇಶಪ್ರೇಮಿಗಳು ಈ ಕೆಲಸಕ್ಕೆ ಮುಂದಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಬೆಂಗಳೂರಿನಲ್ಲಿ ಕರೆ ನೀಡಿದರು. ಕಾವಿಪಡೆಗಳ ಯೋಜನೆಗೂ ಧರ್ಮಕ್ಕೂ ಏನೇನೂ ಸಂಬಂಧವಿಲ್ಲ. ಅದರಲ್ಲಿ ಯಾವುದೇ ಮಾನವೀಯ ಸತ್ವವಿಲ್ಲ. ಅದು ಕೇವಲ ರಾಜಕೀಯ ಅಧಿಕಾರ ಗಿಟ್ಟಿಸುವ ಯೋಜನೆ. ಭಾರತವನ್ನು ಈ ಶಕ್ತಿಗಳಿಂದ ಉಳಿಸಬೇಕಾದರೆ ತಮ್ಮ ಆತ್ಮಸಾಕ್ಷಿಯನ್ನು ದೇಶದ ಶತ್ರುಗಳಿಗೆ ಮಾರಿಕೊಂಡಿರದ ಎಲ್ಲಾ ದೇಶಪ್ರೇಮಿಗಳು ಒಂದಾಗಿ ಎದ್ದು ನಿಂತು ಈ ಸವಾಲನ್ನು ಎದುರಿಸಬೇಕು ಎಂದು ಅವರು ಹೇಳಿದರು.

ಕಾಂ. ಸೀತಾರಾಂ ಯೆಚೂರಿ ಬೆಂಗಳೂರಿನಲ್ಲಿ 'ಜಾತ್ಯಾತೀತತೆ ಮತ್ತು ಶಾಸನಬದ್ಧ ಆಳ್ವಿಕೆ ವೇದಿಕೆ' ಜೂನ್ 24 ರಂದು ಏರ್ಪಡಿಸಿದ್ದ 'ಸಂಘಪರಿವಾರ ಮತ್ತು ಅವರ ಸುಳ್ಳಿನ ಕಂತೆ' ಎಂಬ ವಿಚಾರಸಂಕಿರಣದಲ್ಲಿ ಪ್ರಮುಖ ಭಾಷಣ ಮಾಡುತ್ತಿದ್ದರು.

ಕರ್ನಾಟಕದಲ್ಲಿ ಬಹುಪಾಲು ಮಂದಿ ಬಿಜೆಪಿ ಕಡೆಗೆ ವಾಲಿದಂತಿದೆಯಲ್ಲಾ ಇದಕ್ಕೇನು ಮಾಡುವುದು ಎಂಬ ಪ್ರಶ್ನೆಗೆ ಕರ್ನಾಟಕದ ಜಾತ್ಯಾತೀತ ಶಕ್ತಿಗಳೇ ಉತ್ತರ ನೀಡಬೇಕು ಎಂದ ಕಾಂ. ಯೆಚೂರಿಯವರು ಮುಂದುವರಿದು ಮಾತನಾಡುತ್ತಾ ಸಾಮಾನ್ಯವಾಗಿ ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿ ತನ್ನ ವಿಶ್ವಾಸಾರ್ಹತೆಯನ್ನು ಕಳಕೊಳ್ಳುತ್ತದೆ. ಆದ್ದರಿಂದ ಅದು ಅಧಿಕಾರಕ್ಕೆ ಬಂದು ಹೆಸರು ಕೆಡಿಸಿಕೊಳ್ಳಲಿ ಎಂದು ಕಾಯುವುದು ಶ್ರಮವಿಲ್ಲದ ಮಾರ್ಗ. ಆದರೆ ಅದಕ್ಕೆ ಬಹಳ ಬೆಲೆ ತೆರಬೇಕಾಗುತ್ತದೆ. ನೇರ ಮಾರ್ಗವೆಂದರೆ ಜನಗಳ ಬಳಿಗೆ ಹೋಗಿ ಅವರ ನಿಜಸ್ವರೂಪವನ್ನು ಬಯಲಿಗೆಳೆಯುವುದು. ಇದು ಕಷ್ಟಕರ ಮಾರ್ಗ ನಿಜ. ಸ್ವಾತಂತ್ರ ಹೋರಾಟ ಕಾಲದಲ್ಲಿ ಯಶಸ್ವಿಯಾಗದ, ನಂತರವೂ 40 ವರ್ಷ ಯಶಸ್ವಿಯಾಗದ ಕೋಮುಶಕ್ತಿಗಳು ಈಗ ಯಶಸ್ವಿಯಾಗುವಂತೆ ಕಾಣುತ್ತಿದೆ. ಅದರರ್ಥ ಜನ ಕೋಮುವಾದಿಗಳಾಗಿದ್ದಾರೆ ಎಂದಲ್ಲ, ಅವರ ಅಸಂತೃಪ್ತಿಯನ್ನು ದಾರಿತಪ್ಪಿಸುತ್ತಿದ್ದಾರೆ. ಜಾತ್ಯಾತೀತ ಶಕ್ತಿಗಳು ಅದನ್ನು ಪ್ರಜಾಪ್ರಭುತ್ವ ಮಾರ್ಗದತ್ತ ತಿರುಗಿಸಬೇಕಾಗಿದೆ. ಇದು ಜನಗಳ ಅಸಂತೃಪ್ತಿಯನ್ನು ವಿಚ್ಛಿದ್ರಕಾರಿ ಮಾರ್ಗದತ್ತ ತಿರುಗಿಸಬಯಸುವ ಹಾಗೂ ಪ್ರಜಾಪ್ರಭುತ್ವ ಮಾರ್ಗದತ್ತ ತಿರುಗಿಸಬಯಸುವ ಶಕ್ತಿಗಳ ನಡುವಣ ಸಮರ. ಇದರಲ್ಲಿ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಪರವಾದ ಒಂದು ಮುಖ್ಯ ಸಂಗತಿಯೆಂದರೆ ಬಿಜೆಪಿಯ ಪ್ರಚಾರಕ್ಕೆ ತರ್ಕದ ಎದುರು ನಿಲ್ಲುವ ಸಾಮರ್ಥ್ಯವಿಲ್ಲ ಎಂದರು. ಅವರು ಸಭಿಕರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೀಗೆಂದರು. ಇದಕ್ಕೆ ಮೊದಲು ಅವರು ಕಾವಿಪಡೆಗಳ ಸುಳ್ಳಿನ ಕಂತೆಗಳ ಬಗ್ಗೆ ವಿವರವಾಗಿ ಮಾತನಾಡಿದರು.

ಖೋಟಾ ಹಿಂದೂವಾದಿಗಳು

ಕಾವಿಪಡೆಗಳ ಹಿಂದೂ ರಾಷ್ಟ್ರವೆಂದರೆ ಹಿಂದೂಗಳ ಅಂದರೆ ಈ ದೇಶದ ಬಹುಸಂಖ್ಯಾತ ಹಿಂದೂಗಳ ರಾಜ್ಯವಲ್ಲ. ಅದೊಂದು ಮಧ್ಯಯುಗದ ಅಸಹಿಷ್ಣು ಮತೀಯ ಪ್ರಭುತ್ವ ಎಂದ ಯೆಚೂರಿಯವರು ಈ ಪ್ರಭುತ್ವದ ನಿಜವಾದ ಸ್ವರೂಪ ಏನು ಎಂದು ವಿವರಿಸಿದರು. ಸ್ವಾತಂತ್ರ್ಯದ ಮೊದಲು ಅವರು ಸ್ವಾತಂತ್ರ ಹೋರಾಟವನ್ನು ಹಿಂದೂರಾಷ್ಟ್ರಕ್ಕಾಗಿ ಹೋರಾಟವನ್ನಾಗಿ ಪರಿವರ್ತಿಸಲು ಯತ್ನಿಸಿದರು. ಆದರೆ ವಾಸ್ತವ ಪರಿಸ್ಥಿತಿ ಬೇರೆಯೇ ಆಗಿತ್ತು. ಈ ಸ್ವಾತಂತ್ರ ಹೋರಾಟದಲ್ಲಿ ಎಲ್ಲಾ ಧರ್ಮದ, ಜಾತಿ, ಭಾಷೆಗಳ ಜನ ತಮ್ಮ ಸಾಮಾನ್ಯ ಶತ್ರು ಬ್ರಿಟಿಷರ ವಿರುದ್ಧ ಒಂದಾಗಿದ್ದರು. ಅಂತಹ ಪರಿಸ್ಥಿತಿಯಲ್ಲಿ ಕಾವಿಪಡೆಗಳ ಹಿಂದೂರಾಷ್ಟ್ರದ ಯೋಜನೆಗೆ ಜಾಗವಿರಲಿಲ್ಲ. ಆದ್ದರಿಂದ ಆಗ ಅವರು ವಿಫಲರಾದರು. ಇದರಿಂದಾಗಿ ಅವರು ಸ್ವಾತಂತ್ರ ಹೋರಾಟದ ಮುಖ್ಯಧಾರೆಯನ್ನು ಸೇರಲು ಕೂಡಾ ನಿರಾಕರಿಸಿದರು. ಆದರೆ ಸ್ವಾತಂತ್ರ್ಯದ ನಂತರ ಮತ್ತೆ ಅವರು ತಮ್ಮ ರಾಜಕೀಯ ಯೋಜನೆಯ ಈಡೇರಿಕೆಗೆ ಪ್ರಯತ್ನ ಆರಂಭಿಸಿದರು. ಅವರಿಗೆ ಮುಸ್ಲಿಂ ಜಿನ್ನಾರಿಗಿಂತ ಒಬ್ಬ ಪಕ್ಕಾ ಧಾರ್ಮಿಕ ಹಿಂದೂವಾಗಿದ್ದ ಗಾಂಧೀಜಿ ಏಕೆ ದೊಡ್ಡ ಶತ್ರುವಾಗಿ ಕಂಡರು? ಏಕೆಂದರೆ ಜಾತ್ಯಾತೀತತೆಯ ಬಗ್ಗೆ ಮಾತನಾಡುವ ಒಬ್ಬ ಧಾರ್ಮಿಕ ಹಿಂದೂ, ಧರ್ಮದ ಆಧಾರದಲ್ಲಿ ಮಾತನಾಡುವ ಒಬ್ಬ ಮುಸ್ಲಿಮನಿಗಿಂತ ಕಾವಿಪಡೆಗಳಿಗೆ ಹೆಚ್ಚು ಅಪಾಯಕಾರಿಯಾಗಿ ಕಾಣುತ್ತಾನೆ. ಇದು ಈ ಖೋಟಾ ಹಿಂದೂವಾದಿಗಳ ನಿಜ ಸ್ವರೂಪ ಎಂದರು.

ದ್ವಿಮುಖ ತಂತ್ರ

ಸ್ವಾತಂತ್ರ್ಯದ ನಂತರ ಕಾವಿಪಡೆಗಳು ತಮ್ಮ ತಂತ್ರವನ್ನು ಬದಲಿಸಿದರು. ಒಂದು ದ್ವಿಮುಖ ತಂತ್ರ ಅಂಗೀಕರಿಸಿದರು. ಒಂದು ಕಡೆ ಹಿಂದೂ ಕೋಮಿನ ಅಪಾರ ವೈವಿಧ್ಯತೆಯನ್ನು ಮರೆಮಾಚಿ ಒಂದೇ ಅಖಂಡದೊಳಗೆ ತುರುಕುವ ಯತ್ನ. ಇನ್ನೊಂದು ಕಡೆ ಹಿಂದೂಗಳಲ್ಲದ ಒಂದು ಜನಾಂಗವನ್ನು 'ಹೊರಗಿನ ಶತ್ರುಗಳು' ಎಂದು ಗುರುತಿಸಿ ಆ ಬಗ್ಗೆ ವಿಷಮಯ ಪ್ರಚಾರ ನಡೆಸುವುದು. ತಮ್ಮ ಈ ದ್ವಿಮುಖ ತಂತ್ರವನ್ನು ಯಶಸ್ವಿಗೊಳಿಸಲು ಅವರು ನಾಝೀ ಫ್ಯಾಸಿಸಂನ ತಂತ್ರಗಳ ಮೇಲೆಯೇ ಬಹಳವಾಗಿ ಅವಲಂಬಿಸಿದರು ಎಂದ ಸೀತಾರಾಂ ಯೆಚೂರಿಯವರು ಕಾವಿಪಡೆಗಳ ರಾಜಕೀಯ ಯೋಜನೆಯ ಫ್ಯಾಸಿಸಂ ಮಾದರಿಯ ಉದಾಹರಣೆಗಳನ್ನು ನೀಡಿದರು.

ದೊಡ್ಡದೊಂದು ಸುಳ್ಳನು ಮತ್ತೆ-ಮತ್ತೆ ಹೇಳಿದರೆ ಅದು ಸತ್ಯವಾಗುತ್ತದೆ ಎಂಬುದು ಫ್ಯಾಸಿಸ್ಟ್ ಮಾದರಿಯ ಒಂದು ಮುಖ್ಯ ಅಂಶ. ಅದನ್ನು ಕಾವಿಪಡೆಗಳು ಇಲ್ಲಿ ಜಾರಿಗೆ ತಂದಿದ್ದಾರೆ. ಅವರು ಹೇಳಲಾರಂಭಿಸಿದ ಮತ್ತೆ-ಮತ್ತೆ ಹೇಳುತ್ತಿರುವ ಅತೀ ದೊಡ್ಡ ಸುಳ್ಳೆಂದರೆ ಶ್ರೀರಾಮ ಬಾಬ್ರಿ ಮಸೀದಿ ಇರುವ ಜಾಗದಲ್ಲೇ ಹುಟ್ಟಿದ ಎಂಬುದು. ಫ್ಯಾಸಿಸ್ಟ್ ಮಾದರಿಯ ಪ್ರಚಾರದಿಂದ ಈಗ ಎಂತಹ ಸ್ಥಿತಿ ಬಂದಿದೆಯೆಂದರೆ ತಾರ್ಕಿಕವಾಗಿ ಯೋಚಿಸುವ ವಿಚಾರವಂತರೂ 'ರಾಮ ಅಲ್ಲಿಯೇ ಹುಟ್ಟಿದ ಎಂದಿಟ್ಟುಕೊಳ್ಳೋಣ........' ಎಂದೇ ತರ್ಕಹೂಡುವಂತಾಗಿದೆ ಎಂದರು. ಇನ್ನೂ ಇಂತಹ ಹಲವಾರು ಸುಳ್ಳುಗಳನ್ನು ಮುಖ್ಯವಾಗಿ ಮುಸ್ಲಿಮರ ವಿರುದ್ಧ ಸುಳ್ಳುಗಳನ್ನು ಪದೇ-ಪದೇ ಹೇಳಿ, ಅದು ಜನರ ಪ್ರಜ್ಞೆಯೊಳಗೆ ಇಳಿಯುವಂತೆ ಕಾವಿಪಡೆಗಳು ಮಾಡಿದ್ದಾರೆ. ಫ್ಯಾಸಿಸ್ಟ್ ಮಾದರಿಯ ಇನ್ನೊಂದು ಅಂಶವೆಂದರೆ ಒಂದು ಪರಿಣಾಮಕಾರಿ ಸಂಕೇತವನ್ನು ಆರಿಸಿಕೊಳ್ಳುವುದು: ನಾಝೀಗಳು ಆರ್ಯಜನಾಂಗ-ಸ್ವಸ್ತಿಕವನ್ನು ಆರಿಸಿಕೊಂಡಂತೆ ಕಾವಿಪಡೆಗಳು ಶ್ರೀರಾಮನನ್ನು ಆರಿಸಿಕೊಂಡಿದ್ದಾರೆ. ಅಡ್ವಾಣಿಯವರ ರಥದಲ್ಲಿ ಯುದ್ಧಕ್ಕೆ ಹೊರಟ ಶತ್ರು ಸಂಹಾರಕ ಶ್ರೀರಾಮನ ಚಿತ್ರ ಹಾಕಿಕೊಂಡರೆ, ರಾಮಮಂದಿರ ಚಿತ್ರಗಳಲ್ಲಿ ಬಾಲಕ ರಾಮನ ಚಿತ್ರಹಾಕಿಕೊಂಡಿದ್ದಾರೆ. ಏಕೆಂದರೆ ರಾಮಾಯಣ ವೈವಿಧ್ಯಮಯ ಭಾರತೀಯ ಸಂಸ್ಕೃತಿಯಲ್ಲಿ ಸಾಮಾನ್ಯವಾಗಿರುವ ಒಂದು ಅಂಶ. ಆದ್ದರಿಂದಲೇ ಮಥುರಾ, ವಾರಣಾಸಿಗಳನ್ನು ಬಿಟ್ಟು ಅವರು ಅಯೋಧ್ಯೆಯ ಬಾಬ್ರಿಮಸೀದಿಯನ್ನೇ ಅಪಪ್ರಚಾರಕ್ಕೆ ಆರಿಸಿಕೊಂಡರು ಎಂದು ಯೆಚೂರಿ ಹೇಳಿದರು. ಮುಸಲ್ಮಾನರು ಪರಕೀಯರು ಎಂದು ಸಾಬೀತು ಪಡಿಸಲು, ಆರ್ಯರು ಇಲ್ಲಿಯವರೇ ಎಂದು ಸಾಬೀತುಪಡಿಸಲು ಗೋಲ್ವಾಲ್ಕರ್ ನಡೆಸಿದ ಪ್ರಯತ್ನ ಎಷ್ಟು ಹಾಸ್ಯಸ್ಪದವಾಗಿದೆ ಎಂದು ಮನೋಜ್ಞವಾಗಿ ಯೆಚೂರಿಯವರು ವಿವರಿಸಿದರು.

ಕಾವಿಪಡೆಗಳ ರಾಜಕೀಯ ಯೋಜನೆ ಯಶಸ್ವಿಯಾದರೆ ಅವರ ವ್ಯವಸ್ಥೆಯ ಸ್ವರೂಪ ಹೇಗಿರಬಹುದು ಎಂಬುವರ ಬಗ್ಗೆ ವಿವರಿಸುತ್ತಾ ಮನುಸ್ಮೃತಿಯನ್ನು ಹಾಡಿಹೊಗಳುವ ಮಂದಿಯ ವ್ಯವಸ್ಥೆ ಅಸಮಾನತೆ, ಮಹಿಳಾ-ವಿರೋಧಿಯಾಗಿರುವ ಮಧ್ಯಯುಗೀನ ವ್ಯವಸ್ಥೆ ಎಂದರು.

ರಾಜ್ಯಾಂಗದ ಬದಲು ಪಂಚಾಂಗ

ವಿಚಾರಸಂಕಿರಣದಲ್ಲಿ ಮಾತನಾಡಿದ ಇನ್ನೊಬ್ಬ ಭಾಷಣಕಾರ ಎ.ಕೆ. ಸುಬ್ಬಯ್ಯನವರು ವ್ಯಂಗ್ಯವಾಗಿ ಹೇಳುತ್ತಾ ರಾಜ್ಯಾಂಗ ಬದಲು ಪಂಚಾಂಗ ಬರುತ್ತವೆ ಎಂದು ಕಾವಿಪಡೆಗಳು ಬಯಸುವ ಮಧ್ಯಕಾಲದ ಅಸಮಾನತೆಯ ಸಮಾಜ ವ್ಯವಸ್ಥೆಯ ಬಗ್ಗೆ ತಮ್ಮ ಶೈಲಿಯಲ್ಲೇ ವಿವರಿಸಿದರು. ಜಾತ್ಯಾತೀತ ಪ್ರಜಾತಂತ್ರ ವ್ಯವಸ್ಥೆಗೆ ಈಗ ದೊಡ್ಡ ಧಕ್ಕೆ ಬಂದಿದೆ. ಕೋಮುವಾದಿ ಶಕ್ತಿಗಳು ಇಷ್ಟುವರೆಗೆ ಬೆಳೆಯಲು ಕಾರಣ ಜಾತ್ಯಾತೀತ ಶಕ್ತಿಗಳು, ಅದರ ವಿರುದ್ಧ ಎದ್ದು ನಿಂತು ಮಾತನಾಡದಿದ್ದದ್ದು. 'ನಾವು ಕರ್ತವ್ಯ ಲೋಪ ಮಾಡಿದುದರಿಂದ ಈ ಹುಳುಗಳು ಬೆಳೆದವು' ಎಂದ ಸುಬ್ಬಯ್ಯನವರು ಎಡಪಕ್ಷಗಳು ಬಿಟ್ಟು ಇತರ ಎಲ್ಲಾ ಜಾತ್ಯಾತೀತ ಪಕ್ಷಗಳು 'ಹಿಂದುತ್ವ' ದ ಮೇಲೆ ಒಂದು ಕಣ್ಣಿಟ್ಟಿದ್ದಾರೆ ಎಂದು ಟೀಕಿಸಿದರು. ಕೋಮುವಾದಿಗಳ ಕಟುವಿಮರ್ಶೆ ಮಾಡುತ್ತಾ ಮಸೀದಿ ಮೇಲೆ ಪಾಕಿಸ್ತಾನದ ಬಾವುಟವನ್ನು ತಾವೇ ಹಾರಿಸುವ ದ್ರೋಹದ ಕೆಲಸ ಮಾಡಿ ಬಡ ಮುಸ್ಲಿಮರನ್ನು ದೇಶದ್ರೋಹಿಗಳನ್ನುತ್ತಾರೆ, ತಮ್ಮ ಮನೆಗಳಲ್ಲಿ ಭಗವಾಧ್ವಜ ಬಿಟ್ಟು ಬೇರೇನೂ ಹಾರಿಸದ ಈ ಮಂದಿ ಈದ್‌ಗಾದಲ್ಲಿ ಬಲವಂತದಿಂದ ರಾಷ್ಟ್ರಧ್ವಜ ಹಾರಿಸುವುದನ್ನು ದೇಶಪ್ರೇಮವೆನ್ನುತ್ತಾರೆ. ಇವರಿಗೆ ದೇಶವೆಂದರೇನು, ದ್ರೋಹವೆಂದರೇನು, ಪ್ರೇಮವೆಂದರೇನು ತಿಳಿಯದು ಎಂದು ಹೀಯಾಳಿಸಿದರು. 1949 ರಲ್ಲಿ 'ರಾಮಲಲ್ಲಾ'ನ ಮೂರ್ತಿ ಬಾಬ್ರಿಮಸೀದಿಯಲ್ಲಿ ಪ್ರತ್ಯಕ್ಷಗೊಳ್ಳುವ ಪವಾಡದ ಬದಲು ಬಾಬ್ರಿಮಸೀದಿಯೇ ರಾಮದೇವಸ್ಥಾನವಾಗಿ ಬಿಡುವ ಪವಾಡ ಏಕೆ ನಡೆಯಲಿಲ್ಲ ಎಂದು ಕಾವಿಪಡೆಗಳ ಸುಳ್ಳಿನ ಕಂತೆಗಳನ್ನು ಟೀಕಿಸಿದರು. ಇವೆಲ್ಲದರ ವಿರುದ್ಧ ಒಂದು ಸಮಗ್ರ ಆಂದೋಳನ ರಾಜ್ಯದಲ್ಲಿ ನಡೆಯಬೇಕು ಎಂದು ಆಶಿಸಿದರು.

ವಿಚಾರಸಂಕಿರಣದ ಶಿರೋನಾಮೆಯ ಬಗ್ಗೆ ಮಾತನಾಡುತ್ತಾ ಉದ್ಘಾಟಕರಾದ ನ್ಯಾಯಮೂರ್ತಿ ದೋಪಣ್ಣನವರು ಅದು ತುಸು ಘರ್ಷಕ, ಉದ್ರೇಕಕಾರಿ ಎಂದು ಮೊದಲು ನನಗನಿಸಿತು ಎಂಬುದನ್ನು ಪ್ರಸ್ತಾಪಿಸಿದ ಸುಬ್ಬಯ್ಯನವರು ಅದನ್ನು 'ವೇದಿಕೆ'ಯವರು ಪ್ರಜ್ಞಾಪೂರ್ವಕವಾಗಿ ಆರಿಸಿಕೊಂಡರು ಎನ್ನುತ್ತಾ ಈ ಸಂಬಂಧದಲ್ಲಿ ನಡೆದ ಘಟನೆಯನ್ನು ವಿವರಿಸಿದರು. ಈ ವಿಚಾರಸಂಕಿರಣದ ಕರಪತ್ರವನ್ನು ನೋಟೀಸ್ ಬೋರ್ಡಿನಲ್ಲಿ ನೋಡಿದ ಸಂಘ ಪರಿವಾರದ ವಕೀಲರೊಬ್ಬರು ಅದನ್ನು ತೆಗೆದು ಹರಿದುಹಾಕಿದಾಗ ಸುಮಾರು 200 ವಕೀಲರು ತಕ್ಷಣ ಎದ್ದು ನಿಂತು ಪ್ರತಿಭಟಿಸಿದರು. ಅಪಾಯಕಾರೀ ಕೋಮುಶಕ್ತಿಗಳ ವಿರುದ್ಧ ಇಂತಹ ಪ್ರತಿಭಟನೆಗಳು ಎದ್ದು ಬರಬೇಕೆಂಬುದೇ ನಮ್ಮ ಉದ್ದೇಶ ಎಂಬ ಸುಬ್ಬಯ್ಯನವರ ಮಾತನ್ನು ಅಧ್ಯಕ್ಷ ಕೋ. ಚನ್ನಬಸಪ್ಪನವರೂ ಅನುಮೋದಿಸಿದರು. ಭಾಷೆಯಲ್ಲಿ ಮಡಿವಂತಿಕೆ ಇಟ್ಟುಕೊಳ್ಳಲು ನಾವು ಸಿದ್ಧರಿಲ್ಲ. ಸತ್ಯಗಳನ್ನು ಸಂಕೋಚವಿಲ್ಲದೆ ನಾವು ಎದ್ದು ನಿಲ್ಲುತ್ತೇವೆ ಎಂದರು. ಮುಖ್ಯ ಭಾಷಣಕಾರ ಯೆಚೂರಿಯವರೂ ಈ ಬಗ್ಗೆ ಹೇಳುತ್ತಾ ಈಗಿನ ಘರ್ಷಕ ಸನ್ನಿವೇಶಕ್ಕೆ ಅನುಗುಣವಾಗಿ ಈ ಶಿರೋನಾಮೆಯನ್ನು ಆರಿಸಿಕೊಂಡಿರಬೇಕು, ಸಂಘಪರಿವಾರದ ಕೆಲವು ಸುಳ್ಳುಗಳನ್ನು ಅಸತ್ಯವೆಂದಷ್ಟೇ ಹೇಳಬಹುದೇನೋ, ಆದರೆ ಹಲವಂತು ಶುದ್ಧ ಸುಳ್ಳುಗಳಲ್ಲದೆ ಮತ್ತೇನೂ ಅಲ್ಲ ಎಂದರು.

"ಸತ್ಯ ಬಲಿಯಾಯಿತು"

ನಿವೃತ್ತ ನ್ಯಾಯಮೂರ್ತಿ ದೋಪಣ್ಣನವರೂ ಆರಂಭದಲ್ಲೇ ತಮ್ಮ ಉದ್ಘಾಟನಾ ಭಾಷಣದಲ್ಲಿ ಇಂತಹ ಭಾಷೆಯ ಬಳಕೆಗೆ ಕಾರಣವಿಲ್ಲದಿಲ್ಲ ಎನ್ನುತ್ತಾ ಅಯೋಧ್ಯಾ ಕಾನೂನು ವಿವಾದ 19 ನೇ ಶತಮಾನದಲ್ಲಿ ಆರಂಭವಾಗಿ ಹನ್ನೊಂದನೇ ಶತಮಾನದಲ್ಲೇ ಮುಗಿದರೂ ಡಿಸೆಂಬರ್ 1949 ರಲ್ಲಿ ಒಂದು 'ಪವಾಡ' ನಡೆಯಿತಂತೆ, 20 ನೇ ಶತಮಾನದಲ್ಲೂ ನ್ಯಾಯಾಲಯವೂ ಈ 'ಪವಾಡ' ವನ್ನು ಒಪ್ಪಿಕೊಂಡಿತು. ಇಲ್ಲಿ ಸತ್ಯವೇ ಅತಿ ದೊಡ್ಡ ಬಲಿಯಾಯಿತು. ದೇಶ ತಲೆತಗ್ಗಿಸುವಂತಾಯಿತು ಎಂದರು.

ಲಕೋಟೆಯಲ್ಲಿ ಪಿ.ವಿ.ಎನ್. ಹೆಸರು!

ಬಾಳಾಸಾಹೇಬ್ ದೇವರಸ್ ನಂತರ ಆರ್.ಎಸ್.ಎಸ್.ನ ನಾಲ್ಕನೇ ಸರಸಂಘಚಾಲಕ ಯಾರು? ದೇವರಸ್ ತಮ್ಮ ಉತ್ತರಾಧಿಕಾರಿಯ ಹೆಸರನ್ನು ಬರೆದು ಎರಡು ಲಕೋಟೆಗಳಲ್ಲಿ ಸೀಲ್ ಮಾಡಿ ಇಬ್ಬರಿಗೆ ಕೊಟ್ಟಿದ್ದಾರೆ. ಅವರ ಸಾವಿನ ನಂತರ ಇದನ್ನು ತೆರದಾಗಲೇ ನಾಲ್ಕನೇ ಸರಸಂಘಚಾಲಕ ಯಾರು ಎಂದು ತಿಳಿಯುತ್ತದೆ. ಈ ಬಗ್ಗೆ ದಿಲ್ಲಿಯಲ್ಲಿ ಒಂದು ವ್ಯಂಗ ನುಡಿ ಚಾಲ್ತಿಯಲ್ಲಿದೆಯೆಂದೆಯಂತೆ. ಆ ಲಕೋಟೆಯಲ್ಲಿರುವುದು ಪಿ.ವಿ. ನರಸಿಂಹರಾಯರ ಹೆಸರು ಎಂದು! ಕಾಂ.ಯೆಚೂರಿ ತಮ್ಮ ಗಂಭೀರ ವಿಚಾರಮಂಡನೆಯ ನಡುವೆ ಈ ಚಟಾಕಿ ಹಾರಿಸಿದರು.

ಕೋಮುವಾದವನ್ನು ಏಕೆ ವಿರೋಧಿಸಬೇಕು?

'ಕೋಮುವಾದ ಮತ್ತು ನಮ್ಮ ಮುಂದಿರುವ ಸವಾಲುಗಳು' ಎಂಬ ವಿಷಯದ ಬಗ್ಗೆ ಕೋಮುಸೌಹಾರ್ದ ವೇದಿಕೆ ಮತ್ತು ಜಾತ್ಯಾತೀತ ಒಕ್ಕೂಟಗಳು ಜಂಟಿಯಾಗಿ ಸಂಘಟಿಸಿದ್ದ ವಿಚಾರ ಸಂಕಿರಣ ದಿನಾಂಕ 19ರಂದು ಬೆಂಗಳೂರಿನ ರಾಜ್ಯ ಯುವಕ ಕೇಂದ್ರದಲ್ಲಿ ನಡೆಯಿತು.

ಖ್ಯಾತ ವಿಚಾರವಾದಿ ಚಿಂತಕ ಜಿ.ರಾಮಕೃಷ್ಣ ಅವರು ನಿರ್ವಹಿಸಿದ ವಿಚಾರಗೋಷ್ಠಿಯ ಆಶಯ ಭಾಷಣವನ್ನು ನ್ಯಾಯಮೂರ್ತಿ ಎನ್.ಡಿ.ವೆಂಕಟೇಶ್ ನೆರವೇರಿಸಿದರು.

ಭಾರತ ಸಂವಿಧಾನದ ಜಾತ್ಯಾತೀತ ಸ್ವರೂಪವನ್ನು ಮತ್ತು ಆಶಯವನ್ನು ವಿವರಿಸುತ್ತಾ ಅವರು ವಿವಿಧ ಧರ್ಮಗಳಲ್ಲಿ ನಂಬಿಕೆಯುಳ್ಳವರು ಮತ್ತು ಧರ್ಮದಲ್ಲಿ ನಂಬಿಕೆ ಇಲ್ಲದವರೂ ಸಹ ಭಾರತ ತಾಯಿಯ ಮಕ್ಕಳು ಎಂದರು. ಸಾಮಾಜಿಕವಾಗಿ ತುಳಿತಕ್ಕೊಳಗಾದ ದಲಿತರಿಗೆ ಸಮಾನತೆಯ ಹಕ್ಕುಗಳನ್ನು ಒದಗಿಸಲಾಗಿದೆ. ಅಲ್ಪಸಂಖ್ಯಾತರ ತುಷ್ಟೀಕರಣದ ಬಗ್ಗೆ ಮಾತನಾಡುವವರಿಗೆ ದಲಿತರು ಹಿಂದುಗಳಲ್ಲವೇ ಎಂದು ಪ್ರಶ್ನಿಸಿದರು.

ನಂತರ ಮಾತನಾಡಿದ ಭಾರತೀಯ ವಿಜ್ಞಾನಮಂದಿರದ ಖ್ಯಾತ ವಿಜ್ಞಾನಿ ಡಾ.ಸಿ. ಪಿ. ಸೇನ್ ಗುಪ್ತಾ ಅವರು ಕಲ್ಪಕ್ಕಂನ ಶಾಲೆಯೊಂದರ ಉದ್ಘಾಟನೆಯ ಸಂದರ್ಭದಲ್ಲಿ ನೆಹರೂ ಅವರು ಶಾಲೆಗಳು ಆಧುನಿಕ ಭಾರತದ ದೇವಾಲಯಗಳು ಎಂದಿದನ್ನು ನೆನಪಿಸಿಕೊಂಡು ಇಂದು ಆ 'ಸ್ಥಾನ'ವನ್ನು 'ದೇವಾಲಯ' ವೊಂದು ಪಡೆಯುತ್ತಿರುವುದಕ್ಕೆ ವಿಷಾದಿಸಿದರು.

ಕೋಮುವಾದಿಗಳು ಅಧಿಕಾರಕ್ಕೆ ಬಂದಲ್ಲಿ ದೇಶ ವಿಜ್ಞಾನ ಉಳಿಯುತ್ತದೆಯೇ ಎಂದು ಸಂಶಯ ವ್ಯಕ್ತಪಡಿಸಿದ ಅವರು ಕೋಮುವಾದಿಗಳು ಜನರನ್ನು ಮೋಸ ಮಾಡುವ ಪವಾಡಕ್ಕೆ ಮತ್ತು ಸರ್ವನಾಶಕ್ಕೆ ವಿಜ್ಞಾನವನ್ನು ಬಳಸುತ್ತಾರೆ ಎಂದು ಎಚ್ಚರಿಸಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಜಿ.ಎನ್.ನಾಗರಾಜ್‌ರವರು ಮಾತನಾಡುತ್ತಾ 1949ರ ಡಿಸೆಂಬರ್ 21ರ ಮಧ್ಯರಾತ್ರಿ ಕೋಮುವಾದಿಗಳು ಮಸೀದಿಯೊಳಗೆ ನುಗ್ಗಿ ಪ್ರತಿಮೆಗಳನ್ನು ಇಟ್ಟರು. ಅವರು ಜನರನ್ನು ತಮ್ಮತ್ತ ಸೆಳೆಯುವಲ್ಲಿ ಆಗ ಏಕೆ ವಿಫಲರಾದರು ಮತ್ತು ಈಗ ಅದು ಏಕೆ ಸಾಧ್ಯವಾಗುತ್ತಿದೆ ಎಂದು ವಿವರಿಸಿದರು.

1950ರ ಜನವರಿ 20ರಂದು ಸುದೀರ್ಘ ಹೋರಾಟದಿಂದ ರೂಪುಗೊಂಡ ಜಾತ್ಯಾತೀತ ಸಂವಿಧಾನವನ್ನು ಜನ ಅಂಗೀಕರಿಸಿದರು. ಸ್ವಾತಂತ್ರ ನಂತರದ ಎರಡು ದಶಕಗಳು ದೇಶವನ್ನು ಕಟ್ಟುವ ಉತ್ಸಾಹದ ಕಾಲ ಜನ 'ಕಟ್ಟುವ' ಉತ್ಸಾಹದಲ್ಲಿದ್ದಾಗ 'ಕೆಡಹುವ' ರಾಜಕೀಯ ಫಲಿಸಲಿಲ್ಲ. ನಂತರ ಕಾಂಗ್ರೆಸ್ ಅಭಿವೃದ್ಧಿ ಯೋಜನೆಗಳು ಸೋತು 'ಜನಪ್ರಿಯ' ಘೋಷಣೆಗಳು ಬಂದವು. ಕಾಂಗ್ರೆಸ್‌ನ-ಜನಗಳನ್ನು ಮರಳು ಮಾಡುವ ತಂತ್ರ ಕೂಡಾ ಅದಕ್ಕೆ ದುಬಾರಿಯಾಗಿ ಆರ್ಥಿಕ ಬಿಕ್ಕಟ್ಟು ಹೆಚ್ಚಾಯಿತು.

1986ರಲ್ಲಿ ಮಸೀದಿಯ ಬೀಗ ತೆಗೆದರು ಮತ್ತು ಆರ್ಥಿಕ ಉದಾರೀಕರಣ ಕೂಡಾ ಅದೇ ವರ್ಷ ಆರಂಭವಾಯಿತು. ಇಂತಹ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಅತೃಪ್ತ ಜನರನ್ನು ಕೆಡಹುವ ಘೋಷಣೆಯ ಮೂಲಕ ತಮ್ಮತ್ತ ಸೆಳೆಯಲು ಕೋಮುವಾದಿಗಳ ಪ್ರಯತ್ನವೂ ದೇಶ ಕಟ್ಟುವ ಸ್ಫೂರ್ತಿಯು ಇಲ್ಲದ್ದರಿಂದ ಫಲಿಸುತ್ತಿದೆ ಎಂದರು.

ಖ್ಯಾತ ಇತಿಹಾಸತಜ್ಞೆ ಉಮಾ ಚಕ್ರವರ್ತಿ ಉತ್ತರಪ್ರದೇಶ, ಮಧ್ಯಪ್ರದೇಶಗಳ ಉದಾಹರಣೆಯೊಂದಿಗೆ ಕೋಮುವಾದಿಗಳ ಇತಿಹಾಸವನನು ತಿರುಚುವ, ವಿಕೃತ ಶೈಕ್ಷಣಿಕ ಸಾಂಸ್ಕೃತಿಕ ನೀತಿಗಳನ್ನು ವಿವರಿಸಿದರು.

ಚಾಂದೇ ಸಿನೆಮಾಗಳಲ್ಲಿ ಖಳನಾಟಕರೆಲ್ಲಾ ಮುಸ್ಲಿಂರೇ ಆಗಿರುವಂತಹ ಸಂಕುಚಿತ ಸಾಂಸ್ಕೃತಿಕ ಧೋರಣೆಯನ್ನು ಖಂಡಿಸಿದರು.

ಅಸಮಾನತೆಯೇ ಸಂಘ-ಪರಿವಾರದ ಮೂಲಭೂತ ತತ್ವ ಎಂಬುದನ್ನು ಖ್ಯಾತ ನ್ಯಾಯವಾದಿ ಕೋ.ಚೆನ್ನಬಸಪ್ಪನವರು ಗೋಲ್ವಾಲ್ಕರ್ ಅವರ 'ವಿ ಆರ್ ಅವರ್ ನೇಶನ್ ಹುಡ್ ಡಿಫೈನ್ಡ್' ಮತ್ತು 'ಬಂಚ್ ಆಫ್ ಥಾಟ್ಸ್' ಕೃತಿಗಳ ಬಗೆಗಿನ ವಿಚಾರಗಳ ಆಧಾರದಲ್ಲಿ ವಿವರಿಸಿದರು.

ಆರ್‌ಎಸ್‌ಎಸ್‌ನ್ನು ರೂಮರ್ಸ್ ಸ್ಪ್ರೆಡಿಂಗ್ ಸೊಸೈಟಿ ಎಂದು ವ್ಯಾಖ್ಯಾನಿಸಿದ ನ್ಯಾಯವಾದಿ ಶ್ರೀ ಹನಿಫ್ ಜಾವೇದ್ ಅವರು ಮಾತನಾಡಿ ಭಾರತದಲ್ಲಿ ಹಿಂದೂ ಕೋಮುವಾದವು ಬೆಳೆಯುತ್ತಿರುವುದಕ್ಕೆ ಮುಸ್ಲಿಂ ಧರ್ಮ ಬೆಳೆಯಲು ಕಾರಣವಾಯಿತು ಮುಂದೆ ಬ್ರಿಟಿಷರ ಒಡೆದು ಆಳುವ ನೀತಿಯಿಂದ ಕೋಮುವಾದ ಬೆಳೆಯಿತು. ದೇಶ ವಿಭಜನೆಯಲ್ಲಿ ಕೋಮುವಾದಿಗಳ ಪಾತ್ರವಿದ್ದಂತೆ ಬ್ರಿಟಿಷರ ಮತ್ತು ಕಾಂಗ್ರೆಸ್‌ನ ಪಾತ್ರವೂ ಇದೆ ಎಂದರು.

ಉದಾರವಾದಿ, ಪ್ರಗತಿಶೀಲರಾಗಿದ್ದ ಜಿನ್ನಾ ಕೋಮುವಾದ ಮತ್ತಿತರ ಹಲವು ಕಾರಣಗಳಿಂದ ಕ್ರಮೇಣ ಕೋಮುವಾದಿಯಾಗಿ ಪರಿವರ್ತಿತರಾದರು ಎಂದರು.

ಪತ್ರಕರ್ತೆ ಡಾ.ಜಾನಕಿ ನಾಯರ್ ಕೋಮುವಾದಿ ಶಕ್ತಿಗಳು ಹೇಗೆ ಮಹಿಳಾ ವಿರೋಧಿಗಳು ಎಂದು ವಿವರಿಸಿದರು.

ಮಹಿಳೆಗೆ ಸಂಬಂಧಪಟ್ಟಂತೆ 'ಕರ್ತವ್ಯ ಮೊದಲು ಹಕ್ಕು ನಂತರ' ಎನ್ನುವ ಇವರು ಸಂವಿಧಾನದಲ್ಲಿ ಮಹಿಳೆಯರ ಪಾತ್ರದ ಬಗ್ಗೆ, ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ಮಹತ್ವವನ್ನು ಹೀಗಾಗಿ ಮಹಿಳೆ ಉತ್ತಮ ಗೃಹಿಣಿಯಾಗಬೇಕು ಎನ್ನುತ್ತಾ ಆಕೆಯ ಕಾರ್ಯಕ್ಷೇತ್ರವನ್ನು ಅಡಿಗೆ ಮನೆಗೆ ಸೀಮಿತಗೊಳಿಸುವವರು ಎಂದರು.

ಬಿಜೆಪಿ ಮಹಿಳಾ ಮೋರ್ಚಾದ ನಾಯಕಿ ಇತ್ತೀಚೆಗೆ 'ಟೆಲಿಗ್ರಾಫ್' ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಇಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದನ್ನು ಅವರು ಪ್ರಸ್ತಾಪಿಸಿದರು.

- ವರದಿ : ಆರ್.ರಾಮಕೃಷ್ಣ

ಕೈಗಾರಿಕಾ ಮಾರಿ ಡಂಕೆಲ್

ಡಂಕೆಲ್‌ಮಾರಿ ಲೇಖನಮಾಲೆಯಲ್ಲಿ TRIMS(ಟ್ರಿಮ್ಸ್) ಬಗ್ಗೆ

ವಿದೇಶಿ ಬಂಡವಾಳ ಆಧುನಿಕ ತಂತ್ರಜ್ಞಾನ ತರುತ್ತದೆ ಎಂಬುದು ಸಾಮಾನ್ಯವಾದ ಭ್ರಮೆ. ಆದರೆ ಇದು ನಿಜವಲ್ಲ ಎಂಬುದೂ ಅಷ್ಟೇ ಸಾಮಾನ್ಯ ಅನುಭವ. ಕಳೆದ ನಲವತ್ತು ವರ್ಷಗಳಿಗಿಂತಲೂ ಹೆಚ್ಚಿನ ನಮ್ಮ ದೇಶದ ಅನುಭವವೆಂದರೆ ದೊಡ್ಡ ಪ್ರಮಾಣದಲ್ಲಿ ಮಾರುಕಟ್ಟೆ ಇರುವ ಬಳಕೆ ವಸ್ತುಗಳಲ್ಲೇ ಹೆಚ್ಚಿನ ವಿದೇಶಿ ಬಂಡವಾಳ ತೊಡಗಿಸಿದ್ದು. ಕಾಲ್ಗೇಟ್ ಟೂಥ್ ಪೇಸ್ಟ್, ಲಕ್ಸ್ ಸಾಬೂನು, ಫಿಲಿಪ್ಸ್ ಬಲ್ಬು ರೇಡಿಯೋ ಇತ್ಯಾದಿ ಇದಕ್ಕೆ ಉದಾಹರಣೆಗಳು. ವಿದೇಶಿ ಬಂಡವಾಳ ಹೂಡಿಕೆಗೆ ಹಲವಾರು ಶರತ್ತುಗಳು, ಕಾನೂನು ನಿರ್ಬಂಧನೆಗಳು ಇದ್ದಾಗಲೂ ಈ ಸ್ಥಿತಿ. ಈಗಾಗಲೇ ಹೊಸ ಆರ್ಥಿಕ ನೀತಿಯಿಂದ ನಿರ್ಬಂಧಗಳನ್ನು ಕನಿಷ್ಟ ಮಿತಿಗೆ ಇಳಿಸಲಾಗಿದೆ. ಡಂಕೆಲ್ ಕರಡಿನ ಒತ್ತಾಯ ಹೇರುವುದು ವಿದೇಶೀ ಬಂಡವಾಳ ಮೇಲಿನ ಎಲ್ಲಾ ನಿರ್ಬಂಧಗಳನ್ನು ತೆಗೆಯಲು ಡಂಕೆಲ್ ಕರಡಿನ ಈ ಭಾಗವನ್ನು TRIMS (ಟ್ರಿಮ್ಸ್ ಅಥವಾ Trade Related Investment Measures ಅಥವಾ ವ್ಯಾಪಾರ ಸಂಬಂಧಿತ ಬಂಡವಾಳ ಹೂಡಿಕೆ ಕ್ರಮಗಳು) ಎಂದು ಕರೆಯುತ್ತಾರೆ. ಈವರೆಗೆ ಗ್ಯಾಟ್ ವ್ಯಾಪಾರಕ್ಕೆ ನೇರವಾಗಿ ಸಂಬಂಧಿಸಿದ ವಿಷಯಗಳ ಕುರಿತು ಮಾತ್ರ ಇದನ್ನ ಒಪ್ಪಂದವಾಗಿತ್ತು. ಇದರಲ್ಲಿ ಡಂಕೆಲ್ ಮೊದಲ ಬಾರಿಗೆ ವಿದೇಶಿ ಬಂಡವಾಳ ಹೂಡಿಕೆಯ ಮೇಲಿನ ನಿರ್ಬಂಧಗಳನ್ನು ಪೂರ್ತಿಯಾಗಿ ತೆಗೆದುಹಾಕುವ ಶರತ್ತುಗಳನ್ನು ಇದರ ಜತೆಗೆ ಸೇರಿಸಿದ್ದಾನೆ.

ಮೂರನೇ ಜಗತ್ತಿನ ದೇಶಗಳು ಸಾಮಾನ್ಯವಾಗಿ ವಿದೇಶಿ ಬಂಡವಾಳವನ್ನು ರಾಷ್ಟ್ರೀಯ ಆದ್ಯತೆ ನಿರ್ಬಂಧಗಳನ್ನು ಹೇರುತ್ತವೆ. ಕಾನೂನುಗಳನ್ನು ಮಾಡುವಂತೆ ಭಾರತದಲ್ಲಿ ಫೆರಾ (FERA - Foreign Exchange Registration Act- ವಿದೇಶಿ ವಿನಿಮಯ ನಿಯಂತ್ರಣ ಕಾನೂನು) ವಿದೇಶಿ ಕಂಪೆನಿಗಳ ಮೇಲೆ ಹಲವಾರು ನಿರ್ಬಂಧಗಳನ್ನು ಹೇರಿತ್ತು. ಇದರ ಪ್ರಕಾರ ಯಾವುದೇ ಕಂಪೆನಿಯಲ್ಲಿ ವಿದೇಶಿ ಬಂಡವಾಳ ಬಹುಮತ ಶೇರು ಹೊಂದುವಂತಿರಲಿಲ್ಲ. ಸರಕಾರ ನಿಗದಿಪಡಿಸಿದ ಕ್ಷೇತ್ರದಲ್ಲಿ ಸರಕಾರ ಅನುಮತಿ ಇದ್ದರೆ ಮಾತ್ರ. ಅಲ್ಲದೆ ವಿದೇಶಿ ಬಂಡವಾಳ ಹೂಡಿಕೆಗೆ ಅನುಮತಿ ನೀಡಿದಾಗಲೂ ಇತರ ಶರತ್ತುಗಳನ್ನು ಹಾಕಲಾಗುತ್ತದೆ. ಸಾಧ್ಯವಾದಷ್ಟು ದೇಶೀಯ ಕಚ್ಚಾ ವಸ್ತುಗಳು ಹಾಗೂ ಬಿಡಿ ಭಾಗಗಳನ್ನು ಉಪಯೋಗಿಸಬೇಕು. ಕನಿಷ್ಟ ಪ್ರಮಾಣದ ರಫ್ತು ಮಾಡಬೇಕೆಂಬ ಶರತ್ತು ಇರುತ್ತದೆ. ವಿದೇಶಿ ವಿನಿಮಯ ಸಮತೋಲನ ಕಾಯ್ದುಕೊಳ್ಳುವ ದೃಷ್ಟಿಯಿಂದ ಉಚ್ಚ ತಂತ್ರಜ್ಞಾನ ಬಂಡವಾಳ ಹೂಡಿಕೆ ಜತೆಗೆ ಹರಿದು ಬರುವಂತೆ, ಅದನ್ನು ಸ್ಥಳೀಯರು ಕಲಿತುಕೊಳ್ಳುವಂತೆಯೂ ಶರತ್ತುಗಳು ಇರುತ್ತವೆ. ಇಂತಹ ನಿರ್ಬಂಧಗಳು ಅವಶ್ಯಕ.

ಟ್ರಿಮ್ಸ್‌ನ ಉದ್ದೇಶ ಇಂತಹ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕುವುದು. ಸಾಮ್ರಾಜ್ಯಶಾಹಿ ದೇಶಗಳಿಗೆ ಮೂರನೇ ಜಗತ್ತಿನ ದೇಶಗಳ ಮಾರುಕಟ್ಟೆ ದೊರಕಿಸುವ ಉದ್ದೇಶವುಳ್ಳದ್ದಾಗಿದೆ. ಇದು ನಮ್ಮ ಕೈಗಾರಿಕೆ, ಸ್ವಾವಲಂಬನೆಗೆ ಮಾರಿ. ಟ್ರಿಮ್ಸ್ ಶರತ್ತುಗಳನ್ನು ಗ್ಯಾಟ್ಸ್ ಒಪ್ಪಂದದಲ್ಲಿ ಸೇರಿಸುವುದು ನಮ್ಮ ಹಿತಾಸಕ್ತಿಗೆ ವಿರುದ್ಧ. ಸರಕಾರದ ಈಗಿನ ಉದಾರೀಕರಣ, ಖಾಸಗೀಕರಣದ ಸಂದರ್ಭದಲ್ಲಿ ಟ್ರಿಮ್ಸ್ ಹೆಚ್ಚಿನ ಶರತ್ತುಗಳನ್ನೇನೂ ಹಾಕುವುದಿಲ್ಲ ಎಂಬ ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ಅಲ್ಪಸ್ವಲ್ಪ ನಿರ್ಬಂಧಗಳನ್ನು ತೆಗೆದುಹಾಕಿದಂತೆ. ವಿದೇಶಿ ಕಂಪನಿಗೂ, ಸ್ಥಳೀಯ ಕಂಪೆನಿಗೂ ಯಾವುದೇ ರೀತಿಯ ಭೇದ ತೋರುವಂತಿಲ್ಲ. ಸ್ಥಳೀಯ ಕೈಗಾರಿಕೆಗೆ ಇದ್ದ ಕೆಲವು ರಕ್ಷಣೆಗಳನ್ನು ಕಿತ್ತುಹಾಕಿದಂತಾಗುತ್ತದೆ. ಟ್ರಿಮ್ಸ್ ಸ್ವಾವಲಂಬನೆಗೆ ಮಾರಿ.

ಗ್ಯಾಟ್ಸ್ ಯಾರ ಸೇವೆಗಾಗಿ

ಗ್ಯಾಟ್ಸ್ (GATS) ಈವರೆಗೆ ಸರಕುಗಳ ಅಂತರಾಷ್ಟ್ರೀಯ ವ್ಯಾಪಾರದ ಬಗೆಗಿನ ಒಪ್ಪಂದ. ಡಂಕೆಲ್ ಇದಕ್ಕೆ ಸೇವಾ ಕ್ಷೇತ್ರದಲ್ಲಿ ವ್ಯಾಪಾರದ ವಿಚಾರವನ್ನು ಸೇರಿಸಿ ವಿದೇಶಿ ಕಂಪನಿಗಳಿಗೆ ಬಂಡವಾಳ ಹೂಡಿಕೆ ಮಾರುಕಟ್ಟೆ ಸ್ವಾಧೀನಪಡಿಸಿಕೊಳ್ಳಲು ಇನ್ನೂ ಹೆಚ್ಚಿನ ಆರ್ಥಿಕ ಅವಕಾಶ ಗಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ.

ಸೇವೆಗಳ ಕ್ಷೇತ್ರದಲ್ಲಿ ವ್ಯಾಪಾರ ಎಂದರೇನು? ಸರಕುಗಳ ಉತ್ಪಾದನೆ ಹಾಗೂ ಬಳಕೆ. ಬೇರೆ ಬೇರೆ ಸಮಯದಲ್ಲಿ ಆಗಬಹುದು. ಬೇರೆ ಬೇರೆ ಪ್ರದೇಶದಲ್ಲಿ ಆಗಬಹುದು. ಉದಾಹರಣೆಗೆ ಬಟ್ಟೆ ಭಾರತದಲ್ಲಿ ಉತ್ಪಾದಿಸಬಹುದು. ಇಂಗ್ಲೆಂಡಿನಲ್ಲಿ ಒಬ್ಬ ಕೊಂಡುಕೊಂಡು ಅದನ್ನು ಬಳಸಬಹುದು. ಆದರೆ ಸೇವೆ ಎಂದರೆ ಉತ್ಪಾದನೆ ಹಾಗೂ ಬಳಕೆ ಒಂದೇ ಸಮಯದಲ್ಲಿ ಒಂದೇ ಜಾಗದಲ್ಲಿ ಆಗಬೇಕಾಗುತ್ತದೆ.

ಉದಾಹರಣೆಗೆ ಟೆಲಿಫೋನ್ ಒಂದು ಸೇವೆ. ಬೆಂಗಳೂರಿನಲ್ಲಿ ನಾಗರಿಕನೊಬ್ಬ ಲಂಡನ್ ಎಕ್ಸ್‌ಚೇಂಜ್‌ನ ಟೆಲಿಫೋನ್ ಬಳಸುವಂತಿಲ್ಲ. ಆತ ಬೆಂಗಳೂರಿನ ಎಕ್ಸ್‌ಚೇಂಜ್ ಒದಗಿಸುವ ಸೇವೆಯನ್ನು ಇಲ್ಲೇ ಬಳಸಬೇಕು. ಬ್ಯಾಂಕಿಂಗ್, ಇನ್ಶೂರೆನ್ಸ್, ಟೆಲಿಫೋನ್ ಮುಂತಾದ ದೂರ ಸಂಪರ್ಕದ ಸಾಧನಗಳು, ರೈಲು, ರಸ್ತೆ, ವಿಮಾನ, ಹಡಗು ಮುಂತಾದ ಸಾಗಾಣಿಕೆ ಇವನ್ನು ಸೇವಾಕ್ಷೇತ್ರಗಳೆಂದು ಕರೆಯುತ್ತಾರೆ. ಶಿಕ್ಷಣ, ಆರೋಗ್ಯ ಸಾಂಸ್ಕೃತಿಕ ವಿನಿಮ[...] ಸೇವೆಗಳೆಂದು ಕರೆಯಲಾಗುತ್ತದೆ.

ಸ್ವಾಭಾವಿಕವಾಗಿಯೇ ದೇಶಿ [...] ಇಂತಹ ಸೇವೆಯನ್ನು ಒದಗಿಸುತ್ತ[...] ಕ್ಷೇತ್ರದ ಪಾತ್ರ ಯಾವುದೇ ಆರ್ಥಿಕದ[...] ಉದ್ಯೋಗ ಸೃಷ್ಟಿಸುವುದರಲ್ಲಿ ಸೇವಾ[...] ಸಾಧ್ಯತೆಗಳು ಹೆಚ್ಚು. ಆದ್ದರಿಂದ ಸೇ[...] ಹೆಸರಲ್ಲಿ ಹೆಚ್ಚಿನ ವ್ಯಾಪಾರದಲ್ಲಿ ತೊ[...] ವಿದೇಶಿ ಬಹುರಾಷ್ಟ್ರೀಯ ಕಂಪೆನಿ[...]ಣಿಕೆ. ಇದಕ್ಕಾಗಿ ಗ್ಯಾಟ್ ಒಪ್ಪಂದದ[...] (GATTS- General Agreem[...] Trade in Service) ನ್ನು ಸೇ[...] ಇನ್ಶೂರೆನ್ಸ್ ಹಾಗೂ ಬ್ಯಾಂಕಿಂಗ್ [...] ರಾಷ್ಟ್ರೀಕೃತ ಸೇವಾ ವಿಭಾಗ. ದೇಶದ[...]ತರ ಜನರ ಉಳಿತಾಯವನ್ನು ಸಾಮ[...] ಉಪಯೋಗಿಯಾದ ಕ್ಷೇತ್ರದಲ್ಲಿ [...]ತ್ತಿದೆ. ಹಣ ಠೇವಣಿ ಇಡುವವರ[...] ಇತ್ಯಾದಿ ಹಲವಾರು ಸೇವೆ ಒದಗಿಸ[...] ದುರ್ಬಲ ವರ್ಗಗಳಿಗೆ ಸುಲಭ [...] ಸಾಲ, ಸಣ್ಣ ಕೈಗಾರಿಕೆ ಕುಶಲ ಕರ್ಮಿಗ[...] ಬೆಳೆಗೆ ವಿಮೆ, ಜೀವ ವಿಮೆ, [...]

ಅಮೇರಿಕಾಕಕ್ಕೆ ಮಣಿಯುತ್ತಿರುವ ಭಾರತ ವಿದೇಶಾಂಗ ನೀತಿ

- ಹರ್ಕಿಶನ್ ಸಿಂಗ್ ಸುರ್ಜಿತ್

ಆರ್ಥಿಕ ರಂಗದಲ್ಲಿ ಸಾಮ್ರಾಜ್ಯಶಾಹಿಗಳೆದುರು ತಲೆಬಾಗಿದ ಪರಿಣಾಮ ವಿದೇಶಾಂಗ ರಂಗದಲ್ಲೂ ಕಾಣುತ್ತಿದೆ. ಇದರಿಂದ ಸ್ವತಂತ್ರ ದೇಶವಾಗಿ ನಾವು ಗಳಿಸಿರುವ ಪ್ರತಿಷ್ಠೆ ಮಣ್ಣು ಪಾಲಾಗುತ್ತದೆ, ನಮ್ಮ ಭವಿಷ್ಯದ ಬೆಳವಣಿಗೆಗೂ ಗಂಭೀರ ಆಘಾತವಾಗುತ್ತದೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್

ವ್ಯಕ್ತಿಗಳಂತೆ, ದೇಶಗಳ ಬದುಕೂ ಕೆಲವು ಮೌಲ್ಯಗಳ ಮೇಲೆ ನಿಂತಿದೆ. ವ್ಯಾವಹಾರಿಕತೆಯ ಹೆಸರಲ್ಲಿ ಅವನ್ನು ಮಾರಿಕೊಳ್ಳಲು ಸಾಧ್ಯವಿಲ್ಲ ಎನ್ನುತ್ತಾರೆ. ಇನ್ನೊಬ್ಬ ಪಿ.ಬಿ. ಸದಸ್ಯ ಸೀತಾರಾಂ ಯೆಚೂರಿ.



ಇತ್ತೀಚೆಗೆ ಭಾರತದ ವಿದೇಶಾಂಗ ನೀತಿಯಲ್ಲಿ ಒಂದು ಗಮನಾರ್ಹ ವ್ಯತ್ಯಾಸ ಕಂಡುಬರುತ್ತಿದೆ. ಇದು ಅಲಿಪ್ತ ಆಂದೋಲನ ಪ್ರತಿಪಾದಿಸುತ್ತಾ ಬಂದಿರುವ ಸಾಮ್ರಾಜ್ಯಶಾಹಿ-ವಿರೋಧಿ ಪ್ರತಿರೋಧಕ್ಕೆ ತೊಂದರೆಯುಂಟು ಮಾಡುವುದಷ್ಟೇ ಅಲ್ಲ, ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೂ ಮಾರಕವಾಗುತ್ತದೆ. ಸೋವಿಯತ್ ಒಕ್ಕೂಟದ ವಿಘಟನೆ ಹಾಗೂ ಸಮಾಜವಾದಕ್ಕಾದ ಹಿನ್ನಡೆಗಳಿಂದ ಅಂತರ್‍ರಾಷ್ಟ್ರೀಯ ಸನ್ನಿವೇಶ ತೀವ್ರವಾಗಿ ಬದಲಾಗಿದೆ. ವಿಶ್ವದ ರಾಜಕೀಯ ರಂಗದಲ್ಲಿ ಹೊಸ ಬಲಾಬಲಗಳು ಮೂಡಿ ಬಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಹೊಸ ಹೊಂದಾಣಿಕೆಗಳನ್ನು, ಹೊಸ ಸಂಬಂಧಗಳನ್ನು ರೂಪಿಸಿಕೊಳ್ಳಬೇಕು. ಆದರೆ ಹಾಗೆ ಮಾಡುವಾಗ ನಮ್ಮದೇ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಿಟ್ಟು ಕೊಡುವುದೂ ಸಾಧ್ಯವಿಲ್ಲ. ಭಾರತ ಸುಮಾರಾಗಿ ಅಲಿಪ್ತತೆಯ ನೀತಿ ಅನುಸರಿಸುತ್ತಾ ಬಂದಿದೆ. ಇದರಿಂದಾಗಿ ವಿಶ್ವದಲ್ಲಿ ಒಂದು ಮಹತ್ವದ ಪಾತ್ರ ವಹಿಸಲು ಅದಕ್ಕೆ ಅವಕಾಶವಾಯಿತು. ಇತರ ಅಭಿವೃದ್ಧಿಶೀಲ ದೇಶಗಳೊಡಗೂಡಿ ಸಾಮ್ರಾಜ್ಯಶಾಹಿ ಒತ್ತಡಗಳನ್ನು, ಬ್ಲಾಕ್‌ಮೇಲ್‌ಗಳನ್ನು ಎದುರಿಸುವುದು ಅದಕ್ಕೆ ಸಾಧ್ಯವಾಯಿತು.

ಆರ್ಥಿಕ ನೀತಿಯ ನೆರಳು

ಆದರೆ ಭಾರತ ಸರಕಾರ ಇತ್ತೀಚೆಗೆ ಬದಲಾದ ವಿಶ್ವ ಸನ್ನಿವೇಶದಲ್ಲಿ ವಿಶ್ವ ಬ್ಯಾಂಕ್ ಮತ್ತು ಐಎಂಎಫ್‌ನ ಆದೇಶಗಳನ್ನು ಪರಿಪಾಲಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂಬ ತೀರ್ಮಾನಕ್ಕೆ ಬಂದಿರುವುದು ದುರದೃಷ್ಟಕರ. ಆರ್ಥಿಕ ರಂಗದಲ್ಲಿನ ದೃಷ್ಟಿಕೋಣದಲ್ಲಾದ ಬದಲಾವಣೆಯ ನೆರಳು ವಿದೇಶಾಂಗ ನೀತಿಯ ಮೇಲೂ ಬೀಳುತ್ತಿದೆ. ಪ್ರಸ್ತುತ ಆರ್ಥಿಕ ನೀತಿಗಳಿಂದಾಗಿ ಸರಕಾರ ಅಮೇರಿಕನ್ ಒತ್ತಡಗಳಿಗೆ ಮಣಿಯಲಾರಂಭಿಸಿದೆ. ಇದರಿಂದಾಗಿ ಮುಖ್ಯ ವಿಷಯಗಳಲ್ಲಿ ರಾಜಿ ಮಾಡಿಕೊಳ್ಳಲು ಅದು ಹೇಸುತ್ತಿಲ್ಲ ಎಂಬುದನ್ನು ತಿಳಿಯುವುದು ಕಷ್ಟವೇನಲ್ಲ. ಅಮೇರಿಕನ್ ಸಾಮ್ರಾಜ್ಯಶಾಹಿಗಳ ಮೇಲೆ ಹೆಚ್ಚುತ್ತಿರುವ ಅವಲಂಬನೆ ಇದನ್ನು ನಮಗೆ ತೋರಿಸಿ ಕೊಡುತ್ತಿದೆ.

ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಅಮೇರಿಕಾವನ್ನು ಅವಲಂಬಿಸಬಹುದೇ?

ವಾಸ್ತವವಾಗಿ ಕಾಶ್ಮೀರ ಸಮಸ್ಯೆಯನ್ನು ರಾಜಕೀಯವಾಗಿ ಎದುರಿಸುವ ಬದಲು ಅದು ಅಮೇರಿಕನ್ ಸಾಮ್ರಾಜ್ಯಶಾಹಿಯ ಮೇಲೆಯೇ ಅವಲಂಬಿಸಲಾರಂಭಿಸಿತು.
ಭಾರತದೊಳಗೆ ಭಯೋತ್ಪಾದಕರನ್ನು ಕಳಿಸುವ ಕೆಲಸದಲ್ಲಿ ಪಾಕಿಸ್ತಾನದ ಕೈವಾಡವಿದೆ ಎಂದು ಇತ್ತೀಚೆಗೆ ಅಮೇರಿಕಾವೂ ಹೇಳಲಾರಂಭಿಸಿತ್ತು. ನಮ್ಮ ಸರಕಾರ ಬಹುಶಃ ಪಾಕಿಸ್ತಾನವನ್ನು ಒಂದು ಭಯೋತ್ಪಾದಕ ದೇಶ ಎಂದು ಘೋಷಿಸುವುದಾಗಿ ಅಮೇರಿಕಾ ಸರಕಾರದ ವಕ್ತಾರರು ಆಗಾಗ ಕೊಡುತ್ತಿದ ಹೇಳಿಕೆಗಳನ್ನು ನಂಬಿರುವಂತೆ ಕಾಣುತ್ತಿದೆ. ಆದ್ದರಿಂದ ಮಿಲಿಟರಿ, ಅರೆ-ಮಿಲಿಟರಿ ಪಡೆಗಳನ್ನು ಹೆಚ್ಚಿಸಿದರೆ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಬಹುದು ಎಂದು ಸರಕಾರ ಭಾವಿಸಿದಂತಿದೆ. ಆದ್ದರಿಂದ ಅವರಿಗೆ ಕಾಶ್ಮೀರ ಸಮಸ್ಯೆಯ ರಾಜಕೀಯ ಪರಿಹಾರಕ್ಕೆ ಯಾವುದೇ ಕ್ರಮ ಕೈಗೊಳ್ಳುವ ಮನಸ್ಸಾಗುತ್ತಿಲ್ಲ. ಅಮೇರಿಕಾ ಪಾಕಿಸ್ತಾನವನ್ನು ಬೆಂಬಲಿಸಿ ಮಣಿಸಲಿಕ್ಕಷ್ಟೇ ಈ ಘೋಷಣೆ ಮಾಡುತ್ತಿದೆ ಎಂಬುದನ್ನು ಸರಕಾರ ಉಪೇಕ್ಷಿಸಿದಂತಿದೆ. ಅಮೇರಿಕಾ ಪಾಕಿಸ್ತಾನವನ್ನು ಭಯೋತ್ಪಾದಕ ದೇಶ ಎಂದು ಘೋಷಿಸುವುದೂ ಇಲ್ಲ, ಭಾರತ ಮಿಲಿಟರಿ, ಅರೆ-ಮಿಲಿಟರಿ ಪಡೆಗಳನ್ನು ಬಳಸಿಯಷ್ಟೇ ಕಾಶ್ಮೀರದಲ್ಲಿ ಸಾಮಾನ್ಯ ಸ್ಥಿತಿ ತರಲು ಸಾಧ್ಯವೂ ಇಲ್ಲ.

ಇತ್ತೀಚೆಗೆ ಭಾರತದಲ್ಲಿ ಅಮೇರಿಕನ್ ರಾಯಭಾರ ಕಚೇರಿಯ ರಾಜಕೀಯ ಸಲಹೆಗಾರ ರೋಬಿನ್ ಲಿನ್ ರ್‍ಯಾಫೆಲ್ ಕಾಶ್ಮೀರ ವಿವಾದಕ್ಕೆ ಭಾರತದೊಳಗೆ ಅದಕ್ಕೆ ಸ್ವಾಯತ್ತತೆ ನೀಡುವುದು ಒಂದು ಪರಿಹಾರವಾಗಲಾರದು ಎಂದು ಅಭಿಪ್ರಾಯಪಟ್ಟಿದ್ದರು. ಸದ್ಯದಲ್ಲೇ ಕ್ಲಿಂಟನ್ ಆಡಳಿತದಲ್ಲಿ ಏಶ್ಯಾ- ಶಾಂತ ಸಾಗರ ವ್ಯವಹಾರಗಳ ಉಪ ಕಾರ್ಯದರ್ಶಿ(ಅಂಡರ್ ಸೆಕ್ರಟರಿ)ಯಾಗಿ ಅಧಿಕಾರ ವಹಿಸಲಿರುವ ಈತ ತ್ರಿಪಕ್ಷೀಯ ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಬರಬೇಕೆಂದು ಹೇಳಿದ್ದಾರೆ. ಇದರ ಮೊದಲು ಭಾರತಕ್ಕೆ ಭೇಟಿ ನೀಡಿದ ಜಾನ್ ಮೆಲಟ್ "ಮಾನವ ಹಕ್ಕುಗಳ" ಮೇಲೆ ಒತ್ತು ಹಾಕುತ್ತಾ ಅಮೇರಿಕಾ ಈ ವಿವಾದವನ್ನು ಅಂತರಾಷ್ಟ್ರೀಯ ಸಮಸ್ಯೆಯಾಗಿ ಮಾಡುವ ಯಾವ ಅವಕಾಶವನ್ನು ಕಳಕೊಳ್ಳುವುದಿಲ್ಲ ಎಂದೂ ಸೂಚಿಸಿದರು. ಈ ಸಮಸ್ಯೆಯ ಬಗ್ಗೆ ಅಮೇರಿಕನ್ನರ ದೃಷ್ಟಿಕೋಣ ಏನು ಎನ್ನುವುದು ಇದರಿಂದ ಸ್ಪಷ್ಟ.

ಇಸ್ರೇಲ್-ಮಾರಕ ಕಾತುರ

ಸಾಕಷ್ಟು ಮುಂಜಾಗರೂಕತೆಯಿಲ್ಲದೆ, ನಮ್ಮ ಪ್ರದೇಶದಲ್ಲಿ ಮುಖ್ಯವಾಗಿ ಮಧ್ಯಪೂರ್ವದಲ್ಲಿರುವ ಸನ್ನಿವೇಶವನ್ನು ಉಪೇಕ್ಷಿಸಿ. ಸರಕಾರ ಇಸ್ರೇಲಿನೊಂದಿಗೆ ಸಂಬಂಧಗಳನ್ನು ಬೆಳೆಸಲು ಈಗ ಕಾತುರವಾಗಿದೆ. ಈಗಿನ ವಿಶ್ವ ಸನ್ನಿವೇಶದಲ್ಲಿ ಇಸ್ರೇಲಿನೊಂದಿಗೆ ಸಂಬಂಧಗಳನ್ನು ಸಾಮಾನ್ಯಗೊಳಿಸುವುದನ್ನು ಯಾರೂ ಆಕ್ಷೇಪಿಸಲಾರರು. ಆದರೆ ಇಸ್ರೇಲ್ ಈ ಪ್ರದೇಶದಲ್ಲಿ ಅಮೇರಿಕಾದ ನೀತಿಯನ್ನು ಅನುಸರಿಸುತ್ತದೆ, ಅದು ಅರಬ್ ಜಗತ್ತಿನಲ್ಲಿ ಅನಾಹುತ ಮಾಡಿದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಇಸ್ರೇಲಿಗೆ ಸಂಬಂಧಪಟ್ಟಂತೆ ಯಾವುದೇ ಆತುರದ ಕ್ರಮ ಅಲಿಪ್ತ ಆಂದೋಲನಕ್ಕೆ ಹಾಗೂ ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೂ ಭಾರೀ ಕೇಡುಂಟುಮಾಡುತ್ತದೆ(ಈ ಪುಟಗಳಲ್ಲಿರುವ ಸೀತಾರಾಂ ಯೆಚೂರಿಯವರ ಲೇಖನ ನೋಡಿ) ಇಸ್ರೇಲ್ ಭಾರತಕ್ಕೆ ವಾಣಿಜ್ಯ ವ್ಯವಹಾರಗಳಲ್ಲಿ 'ಅತೀ ಹೆಚ್ಚು ಒಲವಿನ ದೇಶ' ಎಂಬ ಸ್ಥಾನಮಾನ ನೀಡಲಿದೆಯಂತೆ. ಈ ಬಗ್ಗೆ ಈ ವರ್ಷಾಂತ್ಯದಲ್ಲಿ ಒಪ್ಪಂದಗಳಾಗಲಿವೆ. ಮಧ್ಯಪೂರ್ವದಲ್ಲಿ ಇದರ ಪರಿಣಾಮ ಆಗುವುದು ಖಂಡಿತ. ಇಸ್ರೇಲಿನ ಉಪಪ್ರಧಾನಮಂತ್ರಿಯ ಭೇಟಿಯು ಹಿಂದೆಯೇ ನಮ್ಮ ವಿದೇಶಾಂಗ ವ್ಯವಹಾರಗಳ ರಾಜ್ಯ ಮಂತ್ರಿ ಆರ್.ಎ.ಭಾಟಿಯಾರನ್ನು ಮಧ್ಯಪೂರ್ವ ಹಾಗೂ ಟ್ಯುನೀಶಿಯಾಕ್ಕೆ ಕಳಿಸಬೇಕಾಗಿ ಬಂತು ಎಂಬುದನ್ನು ಗಮನಿಸಬೇಕು. ಪತ್ರಿಕಾ ವರದಿಗಳನ್ನು ನೋಡಿದರೆ ಅವರು ಅಲ್ಲಿ ಎಂತಹ ಸನ್ನಿವೇಶವನ್ನು ಎದುರಿಸಬೇಕಾಗಿ ಬಂತು ಎಂದು ಅರ್ಥ ಮಾಡಿಕೊಳ್ಳಬಹುದು.

ನಮ್ಮ ಹಿತಾಸಕ್ತಿಗಳಿಗೇ ಅಪಾಯ

ಭಾರತಕ್ಕೆ ಮಧ್ಯಪೂರ್ವ ಪ್ರದೇಶದ ಮಹತ್ವವನ್ನು ಅರ್ಥ ಮಾಡಿಕೊಳ್ಳಬೇಕು. ಅದು ನಮ್ಮ ತೈಲ ಪೂರೈಕೆಯ ಮುಖ್ಯ ಮೂಲವಷ್ಟೇ ಅಲ್ಲ, ಈ ದೇಶಗಳಲ್ಲಿ ಬಹಳಷ್ಟು ಭಾರತದ ಕಾರ್ಮಿಕರು ದುಡಿಯುತ್ತಿದ್ದಾರೆ. ಅಲ್ಲದೆ ಭಾರತ ಬಹಳಷ್ಟು ಬಂಡವಾಳವನ್ನು ಬಳಸಿದ್ದು ಅದು ಈ ದೇಶಗಳಲ್ಲಿ ಇನ್ನಷ್ಟು ಬಂಡವಾಳ ತೊಡಗಿಸುವ ಅವಕಾಶವನ್ನು ವಿಸ್ತರಿಸಿದೆ. ಈ ದೇಶಗಳಿಂದ ನಾವು ದೂರ ಸರಿದರೆ ಅಲ್ಲಿ ನಮ್ಮ ಸ್ಥಾನಮಾನ ದುರ್ಬಲಗೊಳ್ಳುತ್ತದೆ. ಆದ್ದರಿಂದಲೇ ಬಹುಶಃ ಪ್ರಧಾನ ಮಂತ್ರಿಗಳು ಈ ಪ್ರದೇಶದ ಕೆಲವು ದೇಶಗಳಿಗೆ ಭೇಟಿ ನೀಡಲು ನಿರ್ಧರಿಸಿದರು. ಭಾರತಕ್ಕೆ ಈ ಪ್ರದೇಶದ ಮಹತ್ವವನ್ನು ಇದೇ ತೋರುತ್ತದೆ. ಹಾಗಿರುವಾಗ ಅಮೇರಿಕನ್ ಸಾಮ್ರಾಜ್ಯಶಾಹಿಗಳೆದುರು ತಲೆಬಾಗುವುದು ಬಿಟ್ಟು ಬೇರೆ ದಾರಿಯಿಲ್ಲ ಎಂಬ ತೀರ್ಮಾನಕ್ಕೆ ಸರಕಾರ ಹೇಗೆ ಬಂತು? ಆರ್ಥಿಕ, ರಾಜಕೀಯ, ಸಾಮಾಜಿಕ ಮುನ್ನಡೆಯ ವಲಯಗಳಲ್ಲಿ ಭಾರತದ ಅಭಿವೃದ್ಧಿಗೆ ಈ ತೀರ್ಮಾನ ಬಹಳ ಅಪಾಯಕಾರಿ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಭಾರತದ ಬಳಿ ಅಪಾರ ಪ್ರಭಾವವಿದೆ, ಅಪಾರ ಸಂಪನ್ಮೂಲಗಳು ಇವೆ. ಈಗಿನ ಸನ್ನಿವೇಶದಲ್ಲಿ ಭಾರತ ನೇತೃತ್ವ ವಹಿಸಬೇಕೆಂದು ಇತರ ದೇಶಗಳು ನಿರೀಕ್ಷಿಸುತ್ತಿವೆ. ಇಂತಹ ಸ್ಥಿತಿಯಲ್ಲಿ ಭಾರತ ರಾಜೀ ಮಾಡಿಕೊಳ್ಳುವ ದಾರಿ ಹಿಡಿದರೆ ಅದು ನಮಗೆ ಮುಖಭಂಗವಷ್ಟೇ ಅಲ್ಲ, ನಮ್ಮ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಭಾರತದ ಭವಿಷ್ಯದ ಬಗ್ಗೆ ನಮ್ಮ ಧೋರಣೆಗಳನ್ನು ರೂಪಿಸುವವರು ಅಗತ್ಯ ಗಮನ ನೀಡುತ್ತಾರೆ ಎಂದು ಆಶಿಸುತ್ತೇವೆ. ಎಲ್ಲಾ ದೇಶಗಳೊಂದಿಗೆ ಸಂಬಂಧಗಳನ್ನು ಸ್ಥಾಪಿಸುವಾಗ ಹೆಚ್ಚೆಚ್ಚು ದಕ್ಷಿಣ-ದಕ್ಷಿಣ ಸಹಕಾರ(ದಕ್ಷಿಣ ಗೋಲಾರ್ಧದ ಬಡ ದೇಶಗಳ ನಡುವಿನ ಸಹಕಾರ)ದ ಮೇಲೆ ಒತ್ತು ನೀಡಿ ಈ ಮೂಲಕ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಪ್ರತಿರೋಧಿಸುವ ದೃಷ್ಟಿಕೋಣ ಅನುಸರಿಸಬೇಕು. ಹೀಗೆ ಮಾಡದಿದ್ದರೆ ಒಂದು ಸ್ವಾತಂತ್ರ ದೇಶವಾಗಿ ನಾವು ಗಳಿಸಿದ ಪ್ರತಿಷ್ಠೆ ಮಣ್ಣು ಪಾಲಾಗುತ್ತದೆ. ನಮ್ಮ ಭವಿಷ್ಯದ ಬೆಳವಣಿಗೆಗೆ ಗಂಭೀರ ಆಘಾತವುಂಟಾಗುತ್ತದೆ.

ದೇಶ[...]
ಮ[...]

ಇಸ್ರೇ[...]

ಕ[...]

ಒಬ್ಬ ಇಸ್ರೇಲಿ ವಿದೇ[...] (ಈತ ಅಲ್ಲಿನ ಮಾಜೀ ಪ್ರ[...] ಕೂಡಾ) ಪ್ರಥಮ ಭಾರತ [...] ಸರಕಾರದ ವಿದೇಶಾಂಗ ನೀ[...] ಗಮನಾರ್ಹ ಬದಲಾವಣೆ[...] ಸಿದ ಸಂದರ್ಭ ಕೂಡಾ [...] ವರ್ಷಗಳಿಂದಲೇ [...] ದ್ದವು. ಇಸ್ರೇಲಿಗಳ ಝಿಯೋ[...] ಜನಾಂಗ್ ದ್ವೇಷೀವಾದ [...] ತಾನೇ ಅಂಗೀಕರಿಸಿದ್ದ ನಿರ್ಣ[...] ಮಾಡಲು ವಿಶ್ವಸಂಸ್ಥೆ ನಿರ್ಧರಿ[...] ಪರವಾಗಿ ಮತ ನೀಡಿದಂದಿ[...] ಲಾವಣೆ ಆರಂಭವಾಗಿದೆ. [...]ವರಿ 1992 ರಲ್ಲಿ ಭಾರತ [...] ನಡುವೆ ರಾಜತಾಂತ್ರಿಕ ಸಂಬ[...]ವನ್ನು ಏರಿಸಲಾಯಿತು.

ಶೀತಲ ಯುದ್ಧ ಮುಗಿ[...]ಲಾದ ಜಗತ್ತಿನಲ್ಲಿ ನಮ್ಮ ಧ[...] ಸೂಕ್ತವಾಗಿ ಬದಲಾಗಬೇಕೆ[...]ಹಾರಿಕತೆಯ ಲಕ್ಷಣ ಎಂದು[...]ವಣೆಯನ್ನು ಸಮರ್ಥಿಸಿಕೊ[...] ಆದರೆ ವ್ಯಾವಹಾರಿಕತೆಯ[...]ಧೀನ ನಿಲುವು ದೈನ್ಯತೆಯ [...] ಅರ್ಥವೇ?

ಇಲ್ಲಿ ಏಳುವ ಮುಖ್ಯ[...] ಭಾರತ ಝಿಯೋನಿಸ್ಟ್ ಜನಾ[...] ವಿರುದ್ಧ ತೀವ್ರ ವಿರೋಧವ[...]ದರೂ ಏಕೆ? ಇಸ್ರೇಲ್‌ಗೆ ಅ[...] ಬಹಿಷ್ಕಾರ ಹಾಕಬೇಕೆಂದು [...]ವರೂ ಏಕೆ? ಏಕೆಂದರೆ ಪ[...] ಮತ್ತು ವಿಮೋಚನೆಯ ಉ[...] ಗೌರವ ನೀಡುವ ಧೋರ[...] ಸಾಮ್ರಾಜ್ಯಶಾಹಿ ಹಾಗೂ ಇ[...] ಸ್ಟೀನಿಯನ್ನರ ಮೇಲೆ ನ[...]ಗಾತ್ರದ ಅಂತರ್‍ರಾಷ್ಟ್ರೀಯ[...] ಪರಿಣಾಮವಾಗಿ ಅವರಿಗೆ[...] ಹೊಂದುವ ಮೂಲಭೂತ [...] ಕರಿಸಲಾಯಿತು ಎಂಬ ಸ[...]ವಿನಿಂದಾಗಿ ಭಾರತದ ವಿದ[...] ವಿಶ್ವದ ಎಲ್ಲಾ ವಿಮೋಚನಾ[...]ಳಿಗೆ ನಿರಂತರವಾಗಿ ಬೆಂಬಲ[...]

ಗೃಹ ಯೋಜನೆ ಮುಂತಾದ ಸೇವೆಗಳನ್ನು ಸುಲಭ ದರದಲ್ಲಿ ಒದಗಿಸಲಾಗುತ್ತಿದೆ. ನಮ್ಮ ದೇಶದ ಜನ ಸಂಖ್ಯಾಬಲದಿಂದಾಗಿ ಇದು ಭಾರಿ ದೊಡ್ಡ ಪಾಲು. ವಿದೇಶಿ ಕಂಪೆನಿಗಳ ಕಣ್ಣು ಇದರ ಮೇಲೆ ಇದೆ. ಆದರೆ ಸಾಮಾಜಿಕವಾಗಿ ಉಪಯೋಗಿಯಾದ ಆದರೆ ಲಾಭದಾಯಕವಲ್ಲದ ಶರತ್ತುಗಳು ಅವರಿಗೆ ಬೇಡ. ಅದಕ್ಕಾಗಿ ಗ್ಯಾಟ್ಸ್ ಮೂಲಕ ಇಂತಹ ನಿರ್ಬಂಧಗಳನ್ನು, ಶರತ್ತುಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನ. ಅಪಾರಲಾಭ ಹೊಡೆಯುವ ಪ್ರಯತ್ನ.

ಟೆಲಿಫೋನ್, ಟೆಲೆಕ್ಸ್ ಇತರ ಮಾಹಿತಿಗಳನ್ನು ಕಳಿಸುವ ದೂರಸಂಪರ್ಕ ಸಾಧನಗಳು ಭಾರತದಲ್ಲಿ ತೀವ್ರಗತಿಯಲ್ಲಿ ಬೆಳೆಯಲು ಅವಕಾಶ ಇರುವ ಸೇವೆ. ಇಂತಹ ಅವಕಾಶಗಳು ಅಭಿವೃದ್ಧ ದೇಶಗಳಲ್ಲಿ ಸ್ಥಗಿತಗೊಳ್ಳಲಿದೆ. ಆದ್ದರಿಂದ ಈ ಸೇವಾ ವಿಭಾಗವನ್ನು ತಮ್ಮ ಶೋಷಣೆಗೆ ತೆರೆಸುವ ಪ್ರಯತ್ನ ಗ್ಯಾಟ್ಸ್

ಗ್ಯಾಟ್ಸ್‌ನಲ್ಲೂ ವಿದೇಶಿ ಬಂಡವಾಳ ಹೂಡಿಕೆಯ ಟ್ರಿಮ್ಸ್ ಶರತ್ತಿನಂತೆ ನಮ್ಮ ಸ್ವಾವಲಂಬನೆಗೆ ಮಾರಕವಾದ ಶರತ್ತುಗಳು. ಸೇವಾ ಕ್ಷೇತ್ರದಲ್ಲೂ ಆದ್ಯತೆಯ ಕ್ಷೇತ್ರ ಆರಿಸುವ, ಸ್ಥಳೀಯ ಜಾಣ್ಮೆಗಳನ್ನು ಬಳಸುವ ಶರತ್ತು, ಬೆಲೆ ಗುಣಮಟ್ಟದ ಬಗ್ಗೆ ಶರತ್ತು ಇತ್ಯಾದಿ ಇರಬಾರದು. ವಿದೇಶಿ ಬಂಡವಾಳಕ್ಕೆ ಮುಕ್ತವಾಗಿರಬೇಕು. ಸಾರ್ವಜನಿಕ ಕ್ಷೇತ್ರದ ಸ್ಥಳೀಯ ಕಂಪನಿಗೆ ಯಾವುದೇ ರೀತಿಯಲ್ಲಿ ಆದ್ಯತೆ ಕೊಡುವಂತಿಲ್ಲ. ಆದರೆ ವಿದೇಶಿ ಕಂಪನಿಯೊಂದು ಗುತ್ತೇದಾರಿ ಹಿಡಿತ ಸ್ಥಾಪಿಸಬಹುದು.

ಸೇವಾ ಕ್ಷೇತ್ರದ ಇನ್ನೊಂದು ವಿಚಾರವೆಂದರೆ ನುರಿತ ಕೆಲಸಗಾರರಿಗೆ ಮುಕ್ತ ಸಂಚಾರದ ಪ್ರಶ್ನೆ. ಸಾಮಾನ್ಯವಾಗಿ ವಿಕಾಸಶೀಲ ಮೂರನೇ ಜಗತ್ತಿನಲ್ಲಿ ದೇಶಗಳಿಂದ ನುರಿತ, ಅರೆ-ನುರಿತ ಇಂಜಿನಿಯರ್ ಮುಂತಾದ ಹೆಚ್ಚಿನ ಶಿಕ್ಷಣ ಇರುವವರು ಉದ್ಯೋಗ ಬಯಸಿ ವಿಕಸಿತ ದೇಶಗಳಿಗೆ ಹೋಗುತ್ತಾರೆ. ಇದು ಒಂದು ರೀತಿ ಸೇವಾ ರಫ್ತಿನಂತೆ. ಆದರೆ ಇಂತಹ 'ರಫ್ತಿಗೆ' ವಿಕಸಿತ ದೇಶಗಳಲ್ಲಿ ಭಾರಿ ಅಡೆತಡೆಗಳಿವೆ. ಅಮೇರಿಕದಲ್ಲಾಗಿ, ಯುರೋಪಿನಲ್ಲಾಗಲಿ, ಕೊಲ್ಲಿ ದೇಶಗಳಲ್ಲಾಗಲಿ ಭಾರತೀಯ ಕೆಲಸಗಾರರು ನೆಲೆಸಲು, ಉದ್ಯೋಗದಲ್ಲಿರಲು ಹಲವಾರು ಅಡೆತಡೆಗಳಿವೆ. ಕೆಲವೊಮ್ಮೆ ಸಂಬಳದಲ್ಲಿ ತಾರತಮ್ಯ ಅನುಭವಿಸಬೇಕಾಗುತ್ತದೆ. ಆಅದರೆ ಅದೇ ಸಮಯದಲ್ಲಿ ವಿದೇಶಿ ಕಂಪೆನಿಗಳ ತಜ್ಞರ ಸಂಖ್ಯೆ, ಭೇಟಿ ಮೇಲೆ ಯಾವುದೇ ನಿಯಂತ್ರಣ ಮೂರನೇ ಜಗತ್ತಿನ ದೇಶದ ಸರಕಾರ ಹೇರುವಂತಿಲ್ಲ. ಸ್ಥಳೀಯ ತಜ್ಞರನ್ನು ಬಳಸಲು ಶರತ್ತು ಹೇರುವಂತಿಲ್ಲ. ಸ್ಥಳೀಯರಿಗೆ ತರಬೇತಿ ನೀಡಿ ತಜ್ಞರನ್ನಾಗಿಸುವ ಶರತ್ತು ಹಾಕುವಂತಿಲ್ಲ.

'ಪ್ರತಿಭಾ ಪಲಾಯನ'ದ ರೂಪದಲ್ಲಿ ವಿಕಾಸಶೀಲ ದೇಶಗಳ ಮಾನವ ಸಂಪನ್ಮೂಲಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ವಿಕಸಿತ ದೇಶಗಳಿಗೆ ಲಭ್ಯವಿದೆ. ಇಂತಹ ಪ್ರತಿಭಾ ಪಲಾಯನದಿಂದ ವಿಕಸಿತ ದೇಶಗಳು ತಮ್ಮ ನಾಗರಿಕರ ಶಿಕ್ಷಣ, ತರಬೇತಿ ಮೇಲೆ ಉಳಿಸುವ ಸಂಪನ್ಮೂಲಗಳು ಅವು ವಿಕಾಸಶೀಲ ದೇಶಗಳಿಗೆ ಕೊಡುವ ಸಾಲಕ್ಕಿಂತ ಹೆಚ್ಚು ಎಂದರೆ ಅರ್ಥವಾಗುತ್ತದೆ.

ಭವಿಷ್ಯದ ಬೆಳಕೇ ಅವರ ಕೈಯಲ್ಲಿ!!



ನರಸಿಂಹರಾವ್ ಸರಕಾರದ 24ನೇ ತಿಂಗಳಲ್ಲಿ

- ಯಾರ ಕೈಯಲ್ಲಿ? ಬಹುರಾಷ್ಟ್ರೀಯ ಕಂಪೆನಿಗಳ ಕೈಯಲ್ಲಿ. ಮಂಗಳೂರಿನ ಉಷ್ಣ ವಿದ್ಯುತ್ ಘಟಕವನ್ನು ರಾಷ್ಟ್ರೀಯ ಉಷ್ಣ ವಿದ್ಯುತ್ ಕಾರ್ಪೋರೇಷನ್ ನಿರ್ಮಿಸುವುದಿಲ್ಲ. ತೀವ್ರ ಹಣದ ಅಭಾವ ಎದುರಿಸುತ್ತಿರುವ ಈ ಕಾರ್ಪೋರೇಷನ್ ಸರಕಾರದ ಉದಾರೀಕರಣದ ನೀತಿಗೆ ಅನುಗುಣವಾಗಿ ಈ ಕಾರ್ಯವನ್ನು ಕೊಜೆನೆಟ್ರಿಕ್ಸ್ ಮತ್ತು ಜನರಲ್ ಎಲೆಕ್ಟ್ರಿಕ್ ಎಂಬ ಎರಡು ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡಿದೆ.

ಮೊದಲು ಈ ಘಟಕದಿಂದ 2,100 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸುವ ಗುರಿ ಇತ್ತು. ಆದರೆ ನಂತರ ಈ ಗುರಿಯನ್ನು 420 ಮೆಗಾವ್ಯಾಟ್‌ಗೆ ಇಳಿಸಲಾಗಿತ್ತು. ಈಗ ಈ ಎರಡು ಬಹುರಾಷ್ಟ್ರೀಯ ಕಂಪೆನಿಗಳು, 1000 ಮೆಗಾವ್ಯಾಟ್ ಸಾಮರ್ಥ್ಯದ ಘಟಕ ಸ್ಥಾಪಿಸಲಿದ್ದಾರೆ.

ದೇಶದ ಆರ್ಥಿಕತೆಯ ಬೆನ್ನೆಲುಬು ವಿದ್ಯುತ್. ವಿದ್ಯುತ್ ಇಲ್ಲದೆ ಆಧುನಿಕ ಉತ್ಪಾದನೆಯೇ ಇಲ್ಲ. ಅಂತಹ ಈ ವಿದ್ಯುತ್ ಬಹುರಾಷ್ಟ್ರೀಯ ಕಂಪೆನಿಗಳ ಹಿಡಿತದಲ್ಲಿರುತ್ತದೆ. ಈಗಾಗಲೇ ಹಲವಾರು ಶರತ್ತುಗಳನ್ನು ಹೇರಿ ಅವುಗಳನ್ನು ಸಾಧಿಸಿರುವ ಬಹುರಾಷ್ಟ್ರೀಯ ಕಂಪೆನಿಗಳು ಇಂತಹ ಆಯಕಟ್ಟಿನ ಕ್ಷೇತ್ರಗಳಲ್ಲಿ ಕುಳಿತು ದೇಶದ ನರನಾಡಿಗಳನ್ನೇ ನಿಯಂತ್ರಿಸುತ್ತಾರೆ. ದೇಶದ ಭವಿಷ್ಯದ ಬೆಳಕು ಅವರ ಕೈಯಲ್ಲಿಲ್ಲವೇ ಈಗ?

ಮತ್ತೆ ಐ.ಎಂ.ಎಫ್ ಎದುರು 'ಭವತಿ ಭಿಕ್ಷಾಂ ದೇಹಿ'

ಭಾರತ ಭಿಕ್ಷಾಪಾತ್ರೆ ಹಿಡಿದು ಮತ್ತೆ ಐಎಂಎಫ್ ಮುಂದೆ ನಿಂತಿದೆ. ಈಗ ದೇಶದ ಹಣಕಾಸು ಸಚಿವ ಮನಮೋಹನಸಿಂಗರೇ ಸಾಲ ಕೇಳಲು ಹೋಗಿದ್ದಾರೆ. ದೇಶದ ವಿದೇಶಿ ವಿನಿಮಯ ಪರಿಸ್ಥಿತಿ ಸುಧಾರಿಸಿದೆ. ವ್ಯಾಪಾರ ಬಾಕಿ ಕಡಿಮೆ ಆಗಿದೆ ಎಂದೆಲ್ಲಾ ಡಂಗೂರ ಸಾರುತ್ತಿದ್ದವರು ಮತ್ತೆ ಐಎಂಎಫ್ ಮುಂದೆ ಕೈಯೊಡ್ಡಿರುವುದೇಕೆ?

ಇದು ದೇಶದ ಆರ್ಥಿಕ ಸುಧಾರಣೆಗಳಿಗಾಗಿ ಅಲ್ಲ. ಐಎಂಎಫ್‌ನಿಂದ ಹಿಂದೆ ಪಡೆದ ಸಾಲಗಳನ್ನು ಮರುಪಾವತಿ ಮಾಡಲು ಈ ಸಾಲದ ಬೇಡಿಕೆ. ಆಗಲೇ ವಿಷ ವರ್ತುಲದೊಳಗಿದ್ದೇವೆ ಅಲ್ಲವೇ?

ಹಳೇ ಸಾಲ ತೀರಿಸಲು ಹೊಸ ಸಾಲ. ಮತ್ತೆ ಈ ಸಾಲ ತೀರಿಸಲು ಹೊಸ ಸಾಲ. ಹೀಗೆ ಸಾಲಗಳ ಸರಮಾಲೆ. ಅಭಿವೃದ್ಧಿಗಾಗಿ ಎಲ್ಲಿದೆ ಸಾಲ?

ಅಪರಿಮಿತ ಲಾಭ ತೋರಿದ ಕಾಮಧೇನು

ಸಾರ್ವಜನಿಕ ವಲಯದ ಉದ್ಯಮಗಳನ್ನು ಬಿಳಿಯ ಆನೆಗಳು ಎಂದೆಲ್ಲಾ ಹೀಗಳೆಯುತ್ತಿರುವ ಈ ಉದಾರೀಕರಣದ ಸಮಯದಲ್ಲಿ ಸಾರ್ವಜನಿಕ ವಲಯದ ಭಾರತ ಉಕ್ಕು ಪ್ರಾಧಿಕಾರ ಅಪರಿಮಿತ ಲಾಭ ತೋರಿದೆ. 1992-93ರ ಸಾಲಿಗೆ ತೆರಿಗೆಗೆ ಮೊದಲು 426.32 ಕೋಟಿ ರೂಪಾಯಿಗಳ ಲಾಭ ತೋರಿರುವ ಈ ಕಾಮಧೇನುವಿನ ಸಾಧನೆ ಕಡಿಮೆಯೇನಲ್ಲ. ಇದು ಉದ್ಯಮಕ್ಕೆ ಒಳ್ಳೆಯ ವರ್ಷವೇನೂ ಆಗಿರಲಿಲ್ಲ. ಆದರೆ ಇಂತಹ ವರ್ಷದಲ್ಲೂ ಸವಾಲೆನ್ನುವಂತೆ ಈ ಉದ್ಯಮ ಉತ್ಪಾದನೆ, ರಫ್ತು ಸಾಧಿಸಿತು.

ಸಾರ್ವಜನಿಕ ವಲಯದ ಉದ್ಯಮಗಳು ವಿಫಲವಾದರೆ ಅದು ಆಳುವ ಸರಕಾರದ(ವರ್ಗದ) ವಿಫಲತೆ ಮಾತ್ರ, ಉದ್ಯಮದ್ದಲ್ಲ ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ?

ಚೆಲ್ಲಯ್ಯನ ಉದಾರೀಕರಣದ ತುತ್ತೂರಿ

ಕರ ಸುಧಾರಣೆಗಳ ಬಗೆಗೆ ಸರಕಾರಕ್ಕೆ ದೇಶಾದ ವರದಿ ನೀಡಿದ ಡಾ.ರಾಜಾ ಚೆಲ್ಲಯ್ಯ ಎಂಬುವರನ್ನು ಸರಕಾರ ಸಲಹೆಗಾರರನ್ನಾಗಿ ನೇಮಿಸಿಕೊಂಡಿತು. ಇದಕ್ಕೆ ಕೃತಜ್ಞನಾಗಿರುವ ಈತ ಉದಾರೀಕರಣದ ತುತ್ತೂರಿಯನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ.

ದೇಶದ ಆರ್ಥಿಕ ತೀವ್ರಗತಿಯ ಬೆಳವಣಿಗೆಯ ದಾರಿಯಲ್ಲಿದೆ ಎಂದಿದ್ದಾರೆ ಚೆಲ್ಲಯ್ಯ. ಈ ದಿನಗಳಲ್ಲಿ ಉದಾರೀಕರಣದ ಭಾಷೆಗೆ ಉದಾರೀಕರಣದ ಅರ್ಥವನ್ನೇ ಕೊಡಬೇಕಾಗುತ್ತದೆ. ಈ ಅರ್ಥದಲ್ಲಿ ಬೆಳವಣಿಗೆ ಎಂದರೆ ಶ್ರೀಮಂತರ ಕೈಯಲ್ಲೇ ಸಂಪತ್ತುಗಳ ಕೇಂದ್ರೀಕರಣ. ಇದರ ಇನ್ನೊಂದು ಮುಖವಾಗಿ ಬಡತನದ ಬೆಳವಣಿಗೆ. ಈ ಅರ್ಥದಲ್ಲಿ ನೋಡಿದರೆ ಚೆಲ್ಲಯ್ಯ ಹೇಳುತ್ತಿರುವುದು ನಿಜವಲ್ಲವೇ?

ಬಿಜೆಪಿಗೆ ಬಿಎಂಎಸ್ ಕಾರ್ಮಿಕರ ಎದುರೇಟು

ಭಾರತೀಯ ಮಜ್ದೂರ್ ಸಂಘ ಬಿಜೆಪಿಗೆ ಸೇರಿದ ಕಾರ್ಮಿಕ ಸಂಘ. ಆರ್‌ಎಸ್‌ಎಸ್‌ನ ದತ್ತೋಪಂತ್ ತೆಂಗ್ಡಿ ಇದರ ಮುಖ್ಯಸ್ಥ.

ಬಿಜೆಪಿಯ ಸಂಸತ್ ಸದಸ್ಯ ಮತ್ತು ಉದ್ಯಮಿ ವಿರೇನ್ ಶಾ ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪೆನಿ(ಇಸ್ಕೋ)ವನ್ನು ತನ್ನ ಕೈಗೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಸಾರ್ವಜನಿಕ ವಲಯದ ಈಸ್ಕೋ ರೋಗಗ್ರಸ್ತವಾಗಿರುವುದರಿಂದ ಈ ಕಂಪನಿಯನ್ನು ಖಾಸಗಿಯವರಿಗೆ ಮಾರಲು ಹವಣಿಸುತ್ತಿದೆ. ಇದನ್ನು ಕಾರ್ಮಿಕ ಸಂಘಗಳು ವಿರೋಧಿಸುತ್ತಿವೆ.

ಬಿಎಂಎಸ್‌ನ ಕಾರ್ಮಿಕರು ವಿರೇನ್ ಶಾನ ಮುಕುಂದ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಇಸ್ಕೋವನ್ನು ಕೊಳ್ಳುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಎಷ್ಟೆಂದರೂ ಕಾರ್ಮಿಕರು ಕೊನೆಯಲ್ಲಿ ತಮ್ಮ ಹಿತಾಸಕ್ತಿಯನ್ನು ಕಾಯ್ದುಕೊಳ್ಳಬೇಕಲ್ಲವೇ?

...ನೈತಿಕತೆ, ಗೌರವವನ್ನು ...ಕೊಳ್ಳಲು ಸಾಧ್ಯವೇ?

...ಸಂಬಂಧಿಸಿದ ವಿದೇಶಾಂಗ ...ಯ ಬದಲಾವಣೆ ಬಗ್ಗೆ ...ಯೆಚೂರಿಯವರ ಪ್ರಶ್ನೆ



ಟಿದ ನಂತರವೂ ಪ್ಯಾಲೆಸ್ಟೀನಿಯನ್ನರಿಗೆ ತಾಯ್ನಾಡಿನ ಹಕ್ಕು ನಿರಾಕರಿಸಲ್ಪಟ್ಟಿದೆ. ಪ್ರದೇಶವೇ ಇಲ್ಲದ ದೇಶವಾಗಿದೆ ಅದು.

ಭಾರತ ಇಂದು ವಿಚಿತ್ರ ಪರಿಸ್ಥಿತಿಯಲ್ಲಿದೆ. ಒಂದೆಡೆ ಅದು ಪ್ಯಾಲೆಸ್ಟೀನ್ ದೇಶವನ್ನು ಅದರ ಅಧ್ಯಕ್ಷ ಅರಾಫತ್‌ರನ್ನು ಮಾನ್ಯಮಾಡಿದೆ. ಇನ್ನೊಂದೆಡೆ ಇಸ್ರೇಲ್‌ಗೆ ಸಂಪೂರ್ಣ ರಾಜತಾಂತ್ರಿಕ ಸ್ಥಾನಮಾನ ನೀಡಿ ಅರಬ್ ನೆಲವನ್ನು ಆಕ್ರಮಿಸಿಕೊಂಡಿರುವ ಆಕ್ರಮಿಸುತ್ತಿರುವ ಅಥವಾ ನಮ್ಮ ಎಂದಿನ ಮಿತ್ರರ ಕೈಬಿಡಬೇಕೇ, ಬೇಡವೇ ಎಂಬ ಆಧಾರದ ಮೇಲೆ ಇತ್ಯರ್ಥ ಮಾಡಬೇಕಾದ ಪ್ರಶ್ನೆಯಲ್ಲ. ನಮ್ಮ ದೇಶದ ನೈತಿಕ ಸ್ಥಾನದ, ಅಂತರಾಷ್ಟ್ರೀಯ ಸ್ಥಾನಮಾನದ ಪ್ರಶ್ನೆ. ಇಸ್ರೇಲಿನೊಂದಿಗೆ ಸಂಬಂಧಗಳಿಂದ ಏನೇ ಆಕರ್ಷಕ ಲಾಭ ಬಂದರೂ ಇದನ್ನು ಮಾರಿಕೊಳ್ಳಲು ಸಾಧ್ಯವೇ?

ಶಿಮೆನ್ ಪೆರೆಸ್ ಒಂದು ರಿಯಾಯ್ತಿ ಗಿಟ್ಟಿಸಿಕೊಂಡು ತೆರಳಿದ್ದಾರೆ. ಇಸ್ರೇಲಿಗೆ ಸಂಬಂಧಪಟ್ಟಂತೆ ವಿಶ್ವಸಂಸ್ಥೆಯಲ್ಲಿ ಇನ್ನುಮುಂದೆ ಬರುವ ಪ್ರತಿಯೊಂದು ನಿರ್ಣಯದ ಬಗ್ಗೆ ಆಯಾಯ ಸಂದರ್ಭಕ್ಕೆ ಅನುಸಾರವಾಗಿ ತನ್ನ ನಿಲುವನ್ನು ಕೈಗೊಳ್ಳುತ್ತದೆ ಎಂದು ಭಾರತ ನಿರ್ಧರಿಸಿದೆ. ಎಂದು ಪೆರೆಸ್‌ರವರಿಗೆ ಹೇಳಲಾಗಿದೆ. ಈ ಮೂಲಕ ಭಾರತ ಈ ಪ್ರಶ್ನೆಯನ್ನು ಪ್ಯಾಲೆಸ್ಟೀನ್ ಪ್ರಶ್ನೆಯ ಪರಿಧಿಯಲ್ಲಿ ಒಟ್ಟು ದೃಷ್ಟಿಯಿಂದ ನೋಡುವ ಕ್ರಮವನ್ನು ಕೈಬಿಟ್ಟಂತಾಗಿದೆ.

ಈ ಭೇಟಿ ಎದ್ದು ತೋರಿಸಿದ ಅಂಶವೆಂದರೆ ಇಸ್ರೇಲಿ ವಿದೇಶಾಂಗ ಮಂತ್ರಿಗೆ ಬಿಜೆಪಿ ಬಗ್ಗೆ ಕಂಡು ಬಂದ ಸಹಜ ಸ್ನೇಹ. ಝಿಯೋನಿಸ್ಟ್ ಜನಾಂಗವಾದ ಜನಾಂಗೀಯ ದ್ವೇಷಕ್ಕೆ ಅಸಹನೆಗೆ ಕುಪ್ರಸಿದ್ಧವಾದ ಸಿದ್ಧಾಂತ. ಮುಸ್ಲಿಮರ ಬಗ್ಗೆ ತನ್ನ ಹುಚ್ಚು ಅಸಹನೆಯಿಂದಾಗಿ ಸಂಧಿಗ್ದತೆ ಅಥವಾ ಅನಿಶ್ಚತತೆ ಯಾವುದೇ ವಿದೇಶಾಂಗ ನೀತಿಯ ಮುಖ್ಯ ಲಕ್ಷಣವಾಗುವುದು ಸಾಧ್ಯವೇ? ಆದರೆ ವ್ಯಾವಹಾರಿಕತೆಯ ಹೆಸರಲ್ಲಿ ಮೂಡಿ ಬರುತ್ತಿರುವುದು ಇದೇ. ವ್ಯಕ್ತಿಗಳಂತೆ ದೇಶದ ಬದುಕೂ ಕೆಲವು ಮೌಲ್ಯಗಳ ಮೇಲೆ ನಿಂತಿದೆ. ಇಂತಹ ಮೌಲ್ಯಗಳನ್ನು ನಿರಂತರವಾಗಿ ಎತ್ತಿ ಹಿಡಿದುದರಿಂದಲೇ ಅಂತರ್ರಾಷ್ಟ್ರೀಯ ಸಮುದಾಯದಲ್ಲಿ ಭಾರತಕ್ಕೆ ಪ್ರಭಾವೀ ಸ್ಥಾನ-ಮಾನ ದೊರೆತಿರುವುದು.

ಭಾರತ ಹೊಸ ಧೋರಣೆ ಹೊಸ ದಿಕ್ಕು ನೀಡಬೇಕಾದ ಹೊಸ ಬೆಳವಣಿಗೆಗಳು ಏನಾದರೂ ನಡೆದಿವೆಯೇ? ಇಲ್ಲ. ಬದಲಾಗಿ ಇಸ್ರೇಲ್ ಕಾನೂನುಬಾಹಿರವಾಗಿ ಆಕ್ರಮಿತ ಅರಬ್ ಪ್ರದೇಶಗಳನ್ನು ಖಾಲಿ ಮಾಡಲು ನಿರಾಕರಿಸುತ್ತಲೇ ಇದೆ.

ಆಕ್ರಮಿತ ಪ್ರದೇಶಗಳಲ್ಲಿ ಯೆಹೂದ್ಯರನ್ನು ನೆಲೆಗೊಳಿಸುತ್ತಲೇ ಇದೆ. ಈ ಮೂಲಕ ಅಲ್ಲಿನ ಜನಸಂಖ್ಯಾ ಸ್ವರೂಪವನ್ನೇ ಬದಲಿಸಿ ಕಾನೂನು ಬಾಹಿರ ಆಕ್ರಮಣವನ್ನು ಸಕ್ರಮಗೊಳಿಸುವ ಪ್ರಯತ್ನ ನಡೆಸುತ್ತಲೇ ಇದೆ. ಪಶ್ಚಿಮ ಏಷ್ಯಾ ಶಾಂತಿ ಮಾತುಕತೆಯನ್ನು ಮೂಲೆಗೆಸೆಯಲು ಇಸ್ರೇಲಿನ ಹಠಮಾರಿ ನಿಲುವೇ ಮುಖ್ಯ ಕಾರಣ.

ಈ ಹಿನ್ನಲೆಯಲ್ಲಿ ಭಾರತದ ನೀತಿಯಲ್ಲಿನ ಬದಲಾವಣೆಗೆ ಅದು ಇದುವರೆಗೆ ಎತ್ತಿ ಹಿಡಿದ ಮೌಲ್ಯಗಳ ಗಂಭೀರ ನಿರಾಕರಣೆ. ಇದು ವ್ಯಾವಹಾರಿಕತೆಯ ಆಧಾರದಲ್ಲಿ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಬೇಕೆಂದು ದೀರ್ಘಕಾಲದಿಂದ ಅಪೇಕ್ಷಿಸುತ್ತಷ್ಟೇ ಅಲ್ಲ, ಆರ್ಥಿಕ ರಾಜಕೀಯ ವಲಯಗಳಲ್ಲಿ ಹೆಚ್ಚೆಚ್ಚು ಸಹಕರಿಸಬೇಕು ಎಂದು ಬಯಸುತ್ತಿತ್ತು. ಕುಪ್ರಸಿದ್ಧ ಇಸ್ರೇಲೀ ಗುಪ್ತಪಡೆ ಮೊಸ್ಸಾದ್‌ನಿಂದ ಭಾರತ ನೆರವು ತರಬೇತಿ ಪಡೆಯಬೇಕು ಎಂದು ಆಗ್ರಹಪಡಿಸುವಷ್ಟರ ಮಟ್ಟಿಗೂ ಅದು ಹೋಗಿದೆ.

ಇಸ್ರೇಲಿ ವಿದೇಶಾಂಗ ಮಂತ್ರಿ ಬಿಜೆಪಿಗೆ ನೀಡಿದ ಅತ್ಯಂತ ಆತಂಕಕಾರಿ ಹಾಗೂ ದುಷ್ಟ ಸಲಹೆಯೆಂದರೆ ಕಾಶ್ಮೀರ ಸಮಸ್ಯೆ ಪರಿಹರಿಸಬೇಕಾದರೆ ಕಣಿವೆಯ ಜನಸಂಖ್ಯಾ ಸ್ವರೂಪವನ್ನು ಮುಸ್ಲಿಮೇತರರನ್ನು ದೊಡ್ಡ ಪ್ರಮಾಣದಲ್ಲಿ ಅಲ್ಲಿ ನೆಲೆಗೊಳಿಸುವ ಮೂಲಕ ಬದಲಿಸಬೇಕು ಎಂಬ ಸಲಹೆ. ಆಕ್ರಮಿತ ಅರಬ್ ಪ್ರದೇಶಗಳಲ್ಲಿ ತಾನು ಮಾಡುತ್ತಿರುವುದರ ನಕಲು ಮಾಡಲು ಅದು ಬಿಜೆಪಿಗೆ ಸಲಹೆ ಮಾಡಿದೆ. ಝಿಯೊನಿಸ್ಟ್ ಇಸ್ರೇಲಿನಿಂದ ಏನು ಕಲಿಯಬಾರದು ಎಂಬುದನ್ನು ಭಾರತ ನಿರ್ಣಾಯಕವಾಗಿ ನಿರ್ಧರಿಸುವುದೊಳ್ಳೆಯದು.

ಕೊನೆಗೂ ಅಪರಾಧಿ ಸ್ಥಾನದಲ್ಲಿ ಕೃಷ್ಣಮೂರ್ತಿ, ಇತರರು

ಒಂದು ಕಾಲದಲ್ಲಿ ಯಶಸ್ಸಿನ ತಾರೆಯಾಗಿದ್ದ ಶೇರು ಹಗರಣದ ಮುಖ್ಯ ಪಾತ್ರಧಾರಿ ವಿ.ಕೃಷ್ಣಮೂರ್ತಿಯನ್ನು ಸಿಬಿಐ ತನಿಖೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಹಗರಣದ ಮುಖ್ಯ ಪಾತ್ರಧಾರಿ ಎಂದು ಎಂದೋ ಗುರುತಿಸಲ್ಪಟ್ಟಿದ್ದ ಈತ ಅಧಿಕೃತವಾಗಿ ಅಪರಾಧಿ ಎನಿಸಿಕೊಳ್ಳಲು ಈ ಅಪರಾಧಗಳು ರುಜುವಾತಾಗಬೇಕಾಗಿದ್ದವು. ಈಗ ಸಿಬಿಐನ ತನಿಖೆ ಈ ಕೆಲಸ ಮಾಡಿದೆ. ತನ್ನ ಸ್ಥಾನಕ್ಕೆ ವ್ಯತಿರಿಕ್ತವಾಗಿ ಅಪರಿಮಿತ ಆಸ್ತಿ ಗಳಿಸಿದ್ದ ಈತ ಇದಕ್ಕಾಗಿ ತನ್ನ ಸ್ಥಾನಗಳ ದುರುಪಯೋಗ ಮಾಡಿಕೊಂಡಿದ್ದ ಎಂಬುದು ಈಗ ಸಿದ್ಧಪಟ್ಟಿದೆ.

ಈತನ ಜೊತೆಗೆ ಈ ಹಗರಣದ ಅಪರಾಧಿಗಳಾಗಿ ಗುರುತಿಸಲ್ಪಟ್ಟವರೆಂದರೆ ಕೆ. ಮಾರ್ಗಬಂಧು(ಯುಕೋ ಬ್ಯಾಂಕಿನ ಮಾಜಿ ಅಧ್ಯಕ್ಷ), ಭಾರತೀಯ ಸ್ಟೇಟ್ ಬ್ಯಾಂಕ್‌ನ ಅಧಿಕಾರಿ ಆರ್.ಸೀ ತಾರಾಮನ್, ಇದೇ ಬ್ಯಾಂಕಿನ ಎಸ್‌ಬಿಐ ಕ್ಯಾಪಿಟಲ್ ಮಾರ್ಕೆಟ್ಸ್‌ನ ಅನಿಲ್ ಶರ್ಮಾ.

ಇವರಲ್ಲದೆ ಒಎನ್‌ಜಿಸಿಯ ಆಡಳಿತ ಮಂಡಲಿಯ ಎಮ್.ಸಿ. ನವಲಾಖಾ ಮಾರುತಿ ಉದ್ಯೋಗ್ ಲಿ. ನ ಅಧಿಕಾರಿಗಳು, ಸ್ಟೇಟ್ ಬ್ಯಾಂಕ್ 'ಆಫ್ ಸೌರಾಷ್ಟ್ರದ ಮ್ಯಾನೇಜರ್ ಎಂ.ಎಸ್. ಶ್ರೀನಿವಾಸನ್ ಸಹ ಈ ಹಗರಣದ ಅಪರಾಧಿಗಳು ಎಂದು ಸಿಬಿಐ ತನಿಖೆ ಸಿದ್ಧಪಡಿಸಿ ತೋರಿಸಿದೆ.

ಇಷ್ಟು ದೊಡ್ಡ ಹಗರಣದಲ್ಲಿ ಕೆಲವರನ್ನಾದರೂ ಗುರುತಿಸಿ ಶಿಕ್ಷಿಸಲಾಗುತ್ತಿದೆ ಎಂದು ನೆಮ್ಮದಿಯ ಉಸಿರು ಬಿಡಬೇಕೆ? ಇವರಿಗಿಂತ ಅಥವಾ ಇವರಷ್ಟೇ ಮುಖ್ಯ ಪಾತ್ರ ವಹಿಸಿದ ಇತರರ ಕಥೆ?

ಶೇರು ಹಗರಣ

ಅಪ್ರೂವರ್ ಆಗಿ ಹರ್ಷದ್ ಮೆಹ್ತ

ಹರ್ಷದ್ ಮೆಹ್ತಾನ ಹೇಳಿಕೆಗಳು ಈಗ ಸುಂಟರಗಾಳಿಯಾಗಿ ಪರಿಣಮಿಸಿದೆ. ಕಾಂಗ್ರೆಸ್‌ನೊಳಗೇ ತರಂಗಗಳನ್ನೆಬ್ಬಿಸಿರುವ ಈ ಹೇಳಿಕೆ ಇತರ ರಾಜಕೀಯ ಪಕ್ಷಗಳು ಪ್ರತಿಕ್ರಿಯಿಸುವಂತೆ ಮಾಡಿದೆ. ಪ್ರಧಾನಮಂತ್ರಿಯ ನಡವಳಿಕೆ ನೋಡಿದರೆ ಎನ್ನುವ ಸಂಶಯ ಮೊದಲೇ ಮೂಡಿತ್ತು. ಈತನೂ ಹಗರಣದ ಪಾಲುದಾರರೋ ಎನ್ನುವಂತಿದೆ. ಇಲ್ಲವಾದರೆ ಮೆಹ್ತನಿಗೆ ರಾಜಕೀಯ ಕಿರುಕುಳದಿಂದ ರಕ್ಷಣೆ ನೀಡುವುದು ಕಷ್ಟವೇನಲ್ಲ.

ಮೆಹ್ತ ಸುಳ್ಳುಗಳನ್ನೇ ಹೇಳುತ್ತಿದ್ದರೆ ಅದರಿಂದ ಸರಕಾರಕ್ಕೆ ಮತ್ತು ಕಾಂಗ್ರೆಸ್ಸಿಗೆ ಅನುಕೂಲವಾಗುತ್ತಿತ್ತು.

ಈ ಎಲ್ಲವುಗಳ ನಡುವೆ ಹರ್ಷದ್ ಮೆಹ್ತ ಅಪ್ರೂವರ್ ಆಗುವ ಮಾತುಗಳು ಕೇಳಿಬರುತ್ತಿವೆ. ಸತ್ಯ ಹೇಳುವವರಿಗೆ ಆತನಿಗೆ ಶಿಕ್ಷೆ ಇಲ್ಲ. ಸಿಬಿಐಗೆ ಅಪ್ರೂವರ್ ಆಗುತ್ತೇನೆ ಹೊರತು ಜಂಟಿ ಪಾರ್ಲಿಮೆಂಟರಿ ಸಮಿತಿಗಲ್ಲ ಎಂದು ಆತ ಹೇಳುತ್ತಿದ್ದಾನೆ. ಇದರ ಗೂಡಾರ್ಥವೇನೋ?

ಇನ್ನೂ ವಿಷಯಗಳು ಹೊರಬರಲು ಎಷ್ಟು ದಿನ ಕಾಯಬೇಕೋ?

ಮೆಹ್ತ ಸಿಬಿಐಗಳ ಉತ್ತರಕ್ಕಾಗಿ ಕಾಯುತ್ತಿರುವ ಜಂಟಿ ಪಾರ್ಲಿಮೆಂಟರಿ ಸಮಿತಿ

ಹರ್ಷದ್ ಮೆಹ್ತ ಮತ್ತು ಸಿಬಿಐಗಳಿಗೆ ಪ್ರಶ್ನಾವಳಿಯೊಂದನ್ನು ಕಳುಹಿಸಿದ್ದ ಸಂಸದೀಯ ಸಮಿತಿ ಅವರ ಉತ್ತರಗಳಿಗಾಗಿ ಕಾಯುತ್ತಿದೆ. ಈಗ ವರದಿಯ ಕರಡನ್ನು ತಯಾರಿಸುತ್ತಿರುವ ಸಮಿತಿ ಈ ಪ್ರಶ್ನಾವಳಿಯಲ್ಲಿ ಹಣಕಾಸಿನ ವ್ಯವಹಾರಗಳ ಬಗ್ಗೆ ಒಳಗೊಂಡಿರುವ ರಾಜಕಾರಣಿಗಳ ಬಗ್ಗೆ ವಿವರವನ್ನು ಹರ್ಷದ್ ಮೆಹ್ತಾನಿಂದ ಕೇಳಿತ್ತು.

ಕೃಷ್ಣೆ ಕೈಗೆಟುಕದ ಮರೀಚಿಕೆಯಾದಾಳೇ ?

-- ಎಸ್.ಕೆ. ಉಪಾಧ್ಯಾಯ

ವೀರಪ್ಪಮೊಯಿಲಿಯವರು ಅಧಿಕಾರಕ್ಕೆ ಬಂದ ಇತ್ತೀಚಿನ ಮೂರು ತಿಂಗಳಲ್ಲಿ ಕೃಷ್ಣೆಯ-ಕೃಷ್ಣಾ ಮೇಲ್ದಂಡ ಯೋಜನೆಯ-ಕೃಷ್ಣೆಯ ನೀರನ್ನು ಗಡುವಿನೊಳಗೆ ಬಳಕೆಯ, ನಾರಾಯಣಪುರ ಬಲದಂಡೆ-ಎಡದಂಡೆ ಕಾಲುವೆಗಳ ಹಾಗೆಯೇ 2000 ಇಸವಿಯ ನಂತರ ಕೃಷ್ಣೆಯಲ್ಲಿ ಹರಿಯುವ ಹೆಚ್ಚುವರಿ ನೀರಿನ ಬಳಕೆಯ ಮಾತುಗಳ ಸುರಿಮಳೆಗರೆಯುತ್ತಿದೆ-ಯಾವುದೇ ಅಡೆತಡೆಗಳಿಲ್ಲದೆ. ಆದರೆ ಬಚಾವತ್ ತೀರ್ಮಾನದಂತೆ 2000 ಇಸವಿಯೊಳಗೆ ಕರ್ನಾಟಕದ ಪಾಲು 734 ಟಿ.ಎಂ.ಸಿ. ನೀರನ್ನು ಕೃಷ್ಣಾ ಕೊಳ್ಳದ ಯೋಜನೆಯಡಿಯಲ್ಲಿ ಬಳಸಿಕೊಳ್ಳಬೇಕಾಗಿದೆ. ಅದಕ್ಕೆ ಯೋಜನೆ ಬೇಕು, ಯೋಜನೆಗಳಿಗೆ ಸಂಪನ್ಮೂಲ ಬೇಕು. ಸಂಪನ್ಮೂಲ ಬಳಕೆಗೆ ಇಂಜಿನಿಯರು, ಕಂಟ್ರಾಕ್ಟರುಗಳ ವ್ಯವಸ್ಥೆ ಬೇಕು. ಪತ್ರಿಕಾ ಹೇಳಿಕೆಗಳಿಂದಲೇ ಸಂತೃಪ್ತಿ ಪಟ್ಟುಕೊಳ್ಳುವ ಮಂತ್ರಿಗಳು, ಅಂಥ ಹೇಳಿಕೆಗಳನ್ನೇ ನಂಬುವ ಜನರಿರುವಾಗ ಕೃಷ್ಣೆ ಕೈಗೆಟುಕದ ಮರೀಚಿಕೆಯಾದಾಳೇ? ನಮ್ಮ ಹಣೆಬರಹದಲ್ಲಿ ಬರಗಾಲ, ಬಡತನಗಳೇ ದಪ್ಪಕ್ಷರಗಳಲ್ಲಿ ಬರೆದಿಡಲಾಗಿದೆಯೋ? ಎಂಬ ಸಂಶಯ ಎದ್ದು ಕಾಣುತ್ತಿದೆ.

ಬಚಾವತ್ ನ್ಯಾಯಮಂಡಳಿ ತೀರ್ಪಿಗೆ ಅನುಗುಣವಾಗಿ ಕ್ರಿ.ಶ. 2000 ಗಡುವು ಮುಗಿಯುವುದರೊಳಗೆ ಕೃಷ್ಣಾ ಕೊಳ್ಳದ ಯೋಜನೆಯನ್ನು ಮುಗಿಸಿ ನಮ್ಮ ಪಾಲಿಗೆ ಬರುವ ಎಲ್ಲ 734 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುತ್ತೇವೆಂದು ಮುಖ್ಯಮಂತ್ರಿ ವೀರಪ್ಪಮೊಯಿಲಿ ಹೇಳುತ್ತಾರೆ.

ಕೃಷ್ಣಾಕೊಳ್ಳದಲ್ಲಿ ಈಗ ಕೈಗೆತ್ತಿಕೊಂಡಿರುವ ಯೋಜನೆಗಳನ್ನು ಮಾಡಿ ಮುಗಿಸಲು ಸರಿಸುಮಾರು ಆರು ಸಾವಿರ ಕೋಟಿ ರೂಪಾಯಿ ಬೇಕೆಂದು ಅಂದಾಜು ಮಾಡಲಾಗಿದೆ. ಅಗತ್ಯದ ಈ ಹಣವನ್ನು ಕ್ರೋಢೀಕರಿಸಿ ಮುಂದಿನ ಏಳು ವರ್ಷಗಳಲ್ಲಿ ಪೂರೈಸುತ್ತೇವೆ ಎಂದು ನೀರಾವರಿ ಯೋಜನೆಗಳನ್ನು ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಹೇಳುತ್ತಾರೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಅನುಷ್ಠಾನ, ನಿರೂಪಿಸಿದ ಯೋಜನೆಯಂತೆ ನಡೆದಿರುವುದರಿಂದ 25 ಪ್ರಮುಖ ಅಂಶಗಳ ಬಗ್ಗೆ ವಿವರಣೆನೀಡುವಂತೆ ಯೋಜನಾ ಇಲಾಖೆ ನೀರಾವರಿ ಇಲಾಖೆಯನ್ನು ಕೇಳಿದೆ. ಈ ಕೋರಿಕೆಯನ್ನು ಸಲ್ಲಿಸಿ ಎರಡು ತಿಂಗಳು ಕಳೆದುಹೋಗಿದ್ದರೂ ನೀರಾವರಿ ಇಲಾಖೆ ಉತ್ತರ ನೀಡುವ ಸೌಜನ್ಯವನ್ನು ತೋರಿಸಿಲ್ಲ ಎಂದು ಮೇ 28 ರಂದು ಯೋಜನೆ ಮತ್ತು ಸಾಂಸ್ಕೃತಿಕ, ಹಣಕಾಸು ಸಚಿವ ಟಿ.ಎಂ. ಮಂಜುನಾಥ್ ಹೇಳಿದ್ದಾರೆ. "ಯೋಜನೆಯ ಅನುಷ್ಠಾನ ಕಾರ್ಯ ತೃಪ್ತಿದಾಯಕವಾಗಿಲ್ಲದಿರುವುದರಿಂದ ಯೋಜನೆಯ ಅನುಷ್ಠಾನದ ವಿವರ ನೀಡುವಂತೆ ಫೆಬ್ರವರಿ 2 ರಂದು ನೀರಾವರಿ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದ್ದು ಇನ್ನೂ ಉತ್ತರ ಬಂದಿಲ್ಲ" ಎಂದಿದ್ದಾರೆ ಟಿ.ಎಂ. ಮಂಜುನಾಥ್.

ಕೃಷ್ಣಾ ಮೇಲ್ದಂಡೆ ಯೋಜನೆ ಕಾರ್ಯವನ್ನು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಲು ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಂಡಿದೆಂದೂ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ 189 ಕೋಟಿ, ಮುಂದಿನ ಸಾಲಿನಲ್ಲಿ 300 ಕೋಟಿ ವೆಚ್ಚಮಾಡುವ ಉದ್ದೇಶವಿದೆಂದೂ, ಮುಂಬರುವ ವರ್ಷದಲ್ಲಿ ವಾರ್ಷಿಕ 400-500 ಕೋಟಿ ರೂಗಳನ್ನು ವೆಚ್ಚ ಮಾಡಲು ವಿನಿಯೋಜಿಸಿದ್ದಲ್ಲಿ ಯೋಜನೆ ಕಾಮಗಾರಿಗಳನ್ನು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಲು ಸಾಧ್ಯ ಎಂದು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಜೆ.ಸಿ. ಲಿನ್ ಹೇಳುತ್ತಾರೆ. ಈ ಹೇಳಿಕೆಗಳಿಂದ ಕೃಷ್ಣ ಯೋಜನೆಗಳ ಕುಂತು ತಲೆ-ಬುಡ ತಿಳಿದು ಕೊಳ್ಳಲು ಸಾಧ್ಯವೇ?

ಕೃಷ್ಣಾ ನದಿಗೆ ಕರ್ನಾಟಕದಲ್ಲಿ ಆಲಮಟ್ಟಿ, ಭಗವತಿ, ಛಾಯಾ ಯೋಜನೆಗಳನ್ನು ತಯಾರಿಸಿದವರು ಬ್ರಿಟಿಷರು. ಸ್ವಾತಂತ್ರ್ಯ ಪೂರ್ವದಿಂದಲೂ ಕಮ್ಯುನಿಸ್ಟ ಪಕ್ಷ ಈ ಯೋಜನೆಗಳ ಕುರಿತು ಅಂದಿನ ಮುಂಬಯಿ ಸರಕಾರದ ಗಮನ ಸೆಳೆಯುತ್ತಾ ಬಂದಿತ್ತು. ಕರ್ನಾಟಕ ರಾಜ್ಯ ಸ್ಥಾಪನೆಯಾದ ನಂತರ 1964 ರಲ್ಲಿ ಬಿಜಾಪುರ ನಗರ ಹಾಗೂ ಹಳ್ಳಿಗಳಲ್ಲಿ. ಕಮ್ಯುನಿಸ್ಟ್ ಪಕ್ಷ ಇತರ ಸಂಘಟನೆಗಳ ಸಹಾಯದಿಂದ ಒಂದು ತಿಂಗಳ ಕಾಲ ಉಪವಾಸ ಸತ್ಯಾಗ್ರಹ- ಇತರ ಚಳುವಳಿ ನಡೆಸಿದ ಪರಿಣಾಮವಾಗಿ ಕೇಂದ್ರ ನೀರಾವರಿ ಮಂತ್ರಿ ಡಾ. ರಾವ್, ಅನಂತರ ಲಾಲ್ ಬಹುದ್ದೂರ್ ಶಾಸ್ತ್ರಿ ಶ್ರೀಮತಿ ಇಂದಿರಾಗಾಂಧಿಯವರೆಲ್ಲ ಬಂದು ಅಡಿಗಲ್ಲು ಹಾಕಿ ಹೋಗಿದ್ದರು. ಅಂದಿನ ಅಂದಾಜು ಪ್ರಕಾರ ಕೃಷ್ಣಾ ಮೇಲ್ದಂಡೆಯ ಸಂಪೂರ್ಣ ಯೋಜನೆಯ ಖರ್ಚು 100 ಕೋಟಿ ರೂಪಾಯಿಗಳಾಗಿತ್ತು. ರಾಜಕೀಯ ಒತ್ತಡಗಳಿಂದಾಗಿ ಯೋಜನೆ ನೆನೆಗುದಿಗೆ ಬಿದ್ದಿತ್ತು. ಆದರೆ ಆಂಧ್ರ ಸರಕಾರ ಬಚಾವತ್ ತೀರ್ಪಿನಂತೆ ತಮಗೆ ಸಲ್ಲುವ ನೀರನ್ನು ಪೂರ್ಣ ಬಳಸಿಕೊಳ್ಳಲು ನಾಗಾರ್ಜುನ ಸಾಗರ, ಅನಂತರ ಶ್ರೀಶೈಲ ಯೋಜನೆಗಳನ್ನು ಪೂರ್ತಿಗೊಳಿಸಿತು. ರಾಜ್ಯದ ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೃಷ್ಣೆಯ ನೀರನ್ನು ಪೂರ್ಣ ಬಳಸಿ-ರೈತರಿಗೆ ನೀರನ್ನೊದಗಿಸಲು ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಿತ್ತು. ದೃಢ ನಿರ್ಧಾರದಿಂದ ಕ್ರಮಕೈಗೊಂಡಿತು. ಕಾರ್ಯಪೂರೈಸಿತು. ಆಂಧ್ರದಲ್ಲಿಯೂ ಮಂತ್ರಿಮಂಡಲಗಳು ಬದಲಾವಣೆಯಾಗುತ್ತಾ ಬಂದಿದ್ದವು ನಿಜ. ಆದರೆ ನೀರಾವರಿ ಕುರಿತು ಧೋರಣೆ ಮಾತ್ರ ಬದಲಾಗಲಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಮಂತ್ರಿ ಮಂಡಲಗಳು ಬದಲಾಗುತ್ತ ಹೋದವು. ಕೃಷ್ಣೆ ನೀರಾವರಿ ಯೋಜನೆ ದಿಕ್ಕಿಲ್ಲದೆ ನಿಂತೇ ಬಿಟ್ಟಿತು. ವೀರೇಂದ್ರ ಪಾಟೀಲ್ ಪ್ರಥಮಬಾರಿ ಮುಖ್ಯಮಂತ್ರಿಯಾಗಿದ್ದಾಗ ಇರುವವರೆಗೂ ಮುಖ್ಯಮಂತ್ರಿಯಾದ ನಾರಾಯಣಪುರ ಅಣೆಕಟ್ಟು ಕಟ್ಟಿದರು.

ಈ ಹೊತ್ತು ನೀರಾವರಿಗಾಗಿಯೇ ಎಸ್.ಎಂ. ಕೃಷ್ಣಮಂತ್ರಿಯಾಗಿದ್ದಾರೆ. ತಮ್ಮ ಖಾತೆಯಲ್ಲಿ ಚಾಲನೆಯೇ ಇಲ್ಲ ಎಂದು ಅವರು ಹೇಳುತ್ತಾರೆ. ನಮ್ಮ ರಾಜ್ಯದ ಕಾಂಗ್ರೆಸ್ಸಿನಲ್ಲಿಯ, ಮಂತ್ರಿಮಂಡಲದಲ್ಲಿಯ ಗುಂಪುಗಾರಿಕೆ ಯಾವ ಯೋಜನೆಯೂ ಮುಂದುವರಿಯದಂತೆ ಅಡ್ಡಗಾಲು ಹಾಕುತ್ತಿರುವಂತೆ ಕಂಡು ಬರುತ್ತದೆ. ಕೃಷ್ಣಾ ಯೋಜನೆಯ ಕುರಿತು ಮುಖ್ಯಮಂತ್ರಿಗಳಿಂದ ಹಿಡಿದು ಮುಖ್ಯಕಾರ್ಯದರ್ಶಿಗಳವರೆಗೆ ಹೇಳಿಕೆ ನೀಡುವವರೇ ಆಗಿದ್ದಾರೆ. ಅವರೆಲ್ಲ ಈಗ ಆಡುತ್ತಿರುವ ಮಾತುಗಳನ್ನೇ ಹಿಂದೆ ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ್, ಆರ್. ಗುಂಡೂರಾವ್ ರಾಮಕೃಷ್ಣ ಹೆಗಡೆ, ದೇವೆಗೌಡ, ಬೊಮ್ಮಾಯಿ, ಬಂಗಾರಪ್ಪ, ಮಲ್ಲಾರಿಗೌಡ ಪಾಟೀಲ್ ಮಾಡುತ್ತಿದ್ದ ಹೇಳಿಕೆಗಳ ಪುನರಾವರ್ತನೆಯಾಗಿದೆ. ಹೊಸದೇನಿಲ್ಲ.

ಆಂಧ್ರ ಸರಕಾರ ನಾಗಾರ್ಜುನ ಸಾಗರ-ಶ್ರೀಶೈಲ ಯೋಜನೆಗಳಿಗಾಗಿ ವಿಶ್ವಬ್ಯಾಂಕಿನ ನೆರವನ್ನು ಕೇಳಲಿಲ್ಲ. ತಮ್ಮದೇ ಆದ ಸಂಪನ್ಮೂಲ ಕ್ರೋಢೀಕರಿಸಿ ಯೋಜನೆ ಪೂರ್ತಿಗೊಳಿಸಿದೆ ಕರ್ನಾಟಕ ಸರಕಾರ ನಿಜಲಿಂಗಪ್ಪನವರ ಕಾಲದಿಂದಲೂ ಅಂದರೆ ಕೃಷ್ಣಾ ಮೇಲ್ದಂಡೆ ಯೋಜನೆಗೆ 1964 ರಲ್ಲಿ ಅಡಿಗಲ್ಲು ಹಾಕುವಾಗಲೇ ವಿಶ್ವಬ್ಯಾಂಕಿನತ್ತ ದೃಷ್ಟಿ ಹಾಯಿಸಿದ್ದರು.

ಪ್ರಾರಂಭದ ದಿನಗಳಲ್ಲಿ ವಿಶ್ವಬ್ಯಾಂಕಿನ ನೆರವನ್ನು ಸರಿಯಾಗಿ ಬಳಸಿಕೊಂಡಿಲ್ಲೆಂಬ ಕಾರಣದಿಂದ ಸಹಾಯ ನಿಲ್ಲಿಸಲಾಯಿತು. ಎರಡನೇ ಸಲ ಮತ್ತೆ ವಿಶ್ವಬ್ಯಾಂಕಿನಿಂದ ಬಂದ ಹಣ ಮುಳುಗಡೆ ಪ್ರದೇಶದ ಜನತೆಗೆ ಪುನರ್ವಸತಿ ವ್ಯವಸ್ಥೆಯ ಯೋಜನೆ ಸಮರ್ಪಕವಾಗಿಲ್ಲೆಂದು ಹೇಳಿ ಸರಕಾರದ ಕೈಸೇರಲಿಲ್ಲ.

ರಾಮಕೃಷ್ಣ ಹೆಗಡೆಯವರು ಎರಡನೇ ಮಂತ್ರಿಮಂಡಲದಲ್ಲಿ ಲೋಕೋಪಯೋಗಿ ಮಂತ್ರಿಗಳಾಗಿದ್ದ ದೇವೆಗೌಡರು ಅಮೇರಿಕಕ್ಕೆ ಹೋಗಿ ವಿಶ್ವಬ್ಯಾಂಕಿನಿಂದ 300 ಕೋಟಿ ರೂ., ಸಾಲ ಪಡೆಯುವಲ್ಲಿ ಯಶಸ್ವಿಯಾಗಿದ್ದೇನೆಂದು ಹೇಳುತ್ತಿದ್ದಂತೆ ಹೆಗಡೆಯವರು ನೀರಾವರಿಗೆ

ಪುಟ 9ನೋಡಿ

ಕೃಷ್ಣಾ ನೀರಿನ ಹಂಚಿಕೆ ಮತ್ತು ಬಳಕೆ

-- ಚಂದ್ರಶೇಖರ ಬಾಕೆ

1894-95 ರಿಂದ 1971-72 ರವರೆಗೆ 78 ವರ್ಷಗಳಲ್ಲಿ ನೀರಿನ ಜಲಾನಯನ ಸಾಮರ್ಥ್ಯವು ಆಂಧ್ರಪ್ರದೇಶದ ವಿಜಯವಾಡದಲ್ಲಿ ಕನಿಷ್ಠ 1,009 ಟಿ.ಎಮ್.ಸಿ. ಯಿಂದ ಗರಿಷ್ಠ 4,116 ಟಿ.ಎಂ.ಸಿ. ಗಳವರೆಗೆ ಏರಿಳಿಕೆಯಾಗಿದೆ. ಇದನ್ನು ಗಮನದಲ್ಲಿಟ್ಟು ಕನಿಷ್ಠದಿಂದ ಏರಿಕೆಯ ಕ್ರಮದಲ್ಲಿ 25 ನೇ ವರ್ಷದ ಜಲಾನಯನ ಸಾಮರ್ಥ್ಯವನ್ನು ಪ್ರತಿಶತ 75 ಅವಲಂಬಿತ ನೀರಾವರಿ ಸಾಮರ್ಥ್ಯವೆಂದು ಕರೆಯಲಾಗಿದ್ದು ಇದು 2,060 ಟಿ.ಎಮ್.ಸಿ.ಯಾಗಿದೆ. ಕೃಷ್ಣಾ ಜಲವಿವಾದ ನ್ಯಾಯಮಂಡಳಿಯು (ಬಚಾವತ್ ಅವಾರ್ಡ್) ಮೇ 1976 ರಲ್ಲಿ ಅದರ ಸ್ಕೀಮ 'ಎ ಅಡಿಯಲ್ಲಿ ಈ ನೀರನ್ನು ಕೆಳಗಿನಂತೆ ಹಂಚಿದೆ'.

ಮಹಾರಾಷ್ಟ್ರ - 585 ಟಿ.ಎಮ್.ಸಿ.
ಕರ್ನಾಟಕ - 734 ಟಿ.ಎಮ್.ಸಿ.
ಆಂಧ್ರಪ್ರದೇಶ - 811 ಟಿ.ಎಮ್.ಸಿ.

ಬಚಾವತ್ ಅವಾರ್ಡಿನ ಸ್ಕೀಮ್ 'ಬಿ' ಅಡಿಯಲ್ಲಿ ಮೂರು ರಾಜ್ಯಗಳು ಉಪಯೋಗಿಸಿದ ಒಟ್ಟು ನೀರಿನ ಪ್ರಮಾಣವು 2,060 ಟಿ.ಎಮ್.ಸಿ.ಗಿಂತ . ಹೆಚ್ಚಾದಲ್ಲಿ ರಾಜ್ಯಗಳು ಕೆಳಗಿನಂತೆ ಹೆಚ್ಚಿನ ನೀರನ್ನು ಬಳಸಿಕೊಳ್ಳಬಹುದಾಗಿದೆ.

2130 ಟಿ.ಎಮ್.ಸಿ. ಯಷ್ಟು ಹೆಚ್ಚಿನದು
ಮಹರಾಷ್ಟ್ರ- ಶೇ. 35 ಪ್ರತಿಶತ
ಕರ್ನಾಟಕ - ಶೇ. 50
ಆಂಧ್ರಪ್ರದೇಶ ಶೇ. 15

2130 ಟಿ.ಎಮ್.ಸಿ. ಗಿಂತಲೂ ಹೆಚ್ಚಿನ ನೀರನ್ನು
ಮಹರಾಷ್ಟ್ರ - ಶೇ. 25 ಪ್ರತಿಶತ
ಕರ್ನಾಟಕ - ಶೇ. 50 ಪ್ರತಿಶತ
ಆಂಧ್ರಪ್ರದೇಶ - ಶೇ. 25 ಪ್ರತಿಶತ

ಬಚಾವತ್ ಅವಾರ್ಡಿನ 'ಬಿ' ಸ್ಕೀಮ್ ಕ್ರಿ.ಶ. 2000 ವರ್ಷದ ನಂತರ ಜಾರಿಗೆ ಬರುವದಾಗಿದ್ದು ಮಂಡಳಿಯೂ ಕೆಳಗಿನಂತೆ ನಮೂದಿಸಿದೆ.

ಕ್ರಿಸ್ತಶಕ 2000ದ ಮೇ 31 ರ ನಂತರ ದೇಶವು ಒಂದು ನ್ಯಾಯ ಮಂಡಳಿಯ ಅಥವಾ ಒಂದು ಪ್ರಾಧಿಕಾರದ ಮರು ಪರಿಶೀಲನೆಗೆ ಅಥವಾ ಪರಿಶೀಲನೆಗೆ ಒಳಪಡಬಹುದಾಗಿದ್ದು. ಸಾಧ್ಯವಾದಷ್ಟು ಮಟ್ಟಿಗೆ ಈ ಮರುಪರಿಶೀಲನೆಯಲ್ಲಿ ಆಯಾ ರಾಜ್ಯಗಳು ಈಗಾಗಲೇ ಹಂಚಿದ ನೀರಿನಲ್ಲಿ ಕೈಗೊಳ್ಳಲಾದ ನೀರಾವರಿ ಬಳಕೆಯನ್ನು ಕಾಪಾಡುವಂತಿರಬೇಕು.

ಕಳೆದೆರಡು ವರ್ಷಗಳಿಂದ ಮೂರು ರಾಜ್ಯದ ಮುಖ್ಯಮಂತ್ರಿಗಳ ಸಭೆಗಳು ನಡೆಯುತ್ತಿದ್ದು. ಮೇ 22,1993 ರಂದು ಮಹಾಬಳೇಶ್ವರದಲ್ಲಿ ಮತ್ತೊಂದು ಸಭೆ ನಡೆದು ಹೆಚ್ಚುವರಿ ನೀರನ್ನು 2000 ಇಸ್ವಿಯ ನಂತರ ಚರ್ಚಿಸುವದರ ಬದಲಿಗೆ ಈಗಲೇ ಹಂಚಿಕೊಳ್ಳುವ ಕುರಿತು ಚರ್ಚೆ ನಡೆಯಿತು. (ಕೃಷ್ಣಾ ಜಲಾನಯನದ ಸ್ಕೀಮ್ 'ಬಿ' ಪ್ರಕಾರ).

ಮೂರು ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷದ ರಾಜ್ಯ ಸರಕಾರಗಳಿದ್ದರೂ ಕೂಡಾ ಈ ಚರ್ಚೆಯಲ್ಲಿ ಪ್ರಗತಿ ಕಂಡಿಲ್ಲದಿರುವುದಕ್ಕೆ, ರಾಜ್ಯದ ಮುಖ್ಯಮಂತ್ರಿಗಳು ಒಂದು ರಾಷ್ಟ್ರೀಯ ಪಕ್ಷದ ನಾಯಕರಾಗಿ, ಕೃಷ್ಣಾ ಕೊಳ್ಳದ ಪ್ರಶ್ನೆ, ಕಾವೇರಿ ಸಮಸ್ಯೆಯಂತೆ, ಪ್ರಾದೇಶಿಕ ಭಾವನೆಗಳಿಗೆ ಎಡೆಮಾಡಿಕೊಡದೆ, ಬಗೆಹರಿಸುವ ನಿಟ್ಟಿನಲ್ಲಿ ಚರ್ಚಿಸದೆ ಕೇವಲ ಪ್ರಾದೇಶಿಕ ಹಿತಾಸಕ್ತಿ, ದುರಾಸಕ್ತಿಯ ದೃಷ್ಟಿಕೋಣದಿಂದ ನೋಡುತ್ತಿರುವುದು, ಕಾಂಗ್ರೆಸ್ಸಿನ ನೆಹರೂ ಕಾಲದ ಪರಂಪರೆಯ ಅವನತಿಯ ಸಂಕೇತವಾಗಿದೆ.

ಮೂರು ರಾಜ್ಯಗಳಲ್ಲಿ ನೀರಿನ ಹಂಚಿಕೆಯಾಗಿದ್ದರು ಸ್ಕೀಮು ಎ ಪ್ರಕಾರ ಆಂಧ್ರಪ್ರದೇಶ ನೀರನ್ನು ಬಳಸಿಕೊಳ್ಳುವ ತೀವ್ರ ಪ್ರಯತ್ನ ಮಾಡಿದೆ. ಕರ್ನಾಟಕ ಅದಕ್ಕೆ ವ್ಯತಿರಿಕ್ತವಾಗಿ ಇಂದಿಗೂ ಕೂಡಾ ನೀರನ್ನು ಬಳಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡದಾಗಿದೆ. ಈ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಲ್ಲಿ ದುರಾಸಕ್ತಿ ಹುಟ್ಟಿರಲು ಸಾಕು.

ಇನ್ನುಳಿದ ಆರುವರೆ ವರ್ಷಗಳಲ್ಲಿ, ಕೃಷ್ಣಾ ಜಲಾನಯನದ ನೀರನ್ನು ಅದರಲ್ಲೂ ಬೃಹತ್ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಲು ನಿರ್ದಿಷ್ಟವಾದ ಕಾರ್ಯಯೋಜನೆಯನ್ನು ರೂಪಿಸದೆ. ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು 2000 ಇಸವಿಯೊಳಗಡೆ ರಾಜ್ಯದ ಪಾಲನ್ನು ಬಳಸಿಕೊಳ್ಳುತ್ತೇವೆಂದು ನೀಡುತ್ತಿರುವ ಹೇಳಿಕೆ ರಾಜಕೀಯ ತಮಾಶೆಯಾಗಿದೆ. ಕಾವೇರಿ ನೀರನ್ನು ಸೂಕ್ತ ಸಮಯದಲ್ಲಿ ಪಡೆದು ರಾಜ್ಯದ ರೈತರಿಗೆ ಒದಗಿಸಲಾರದ ಕಾಂಗ್ರೆಸ ರಾಜಕೀಯ ಅಪರಾಧಿಯಾಗಿದ್ದು, ಅದೇ ಕಾಂಗ್ರೆಸ್ ಕಾವೇರಿ ಪ್ರಶ್ನೆಯನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳಲು ಹೇಸಲಿಲ್ಲ, ಕೃಷ್ಣಾ ನೀರಿನ ಪ್ರಶ್ನೆ ಅದೇ ಹಾದಿಗೆ ಕೊಂಡೊಯ್ಯುತ್ತಿರುವುದು ಕೆಳಗಿನ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

ಯೋಜನೆ ಆರಂಭವಾದಾಗಿನಿಂದ ಇಲ್ಲಿಯವರೆಗೆ 833.18 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದು ಘಟಕವಾರು ವಿವರಗಳು ಈ ಕೆಳಗಿನಂತಿವೆ.

ವೆಚ್ಚ, ಕೋಟಿಗಳಲ್ಲಿ

1. ಆಲಮಟ್ಟಿ ಅಣೆಕಟ್ಟು 0.42.65
2. ನಾರಾಯಣಪುರ ಅಣೆಕಟ್ಟು 0.38.68
3. ನಾಲೆಗಳು ಮತ್ತು ಶಾಖೆಗಳು 437.07
4. ಪುನರ್ವಸಹತು ಮತ್ತು ಪುನರ್ವಸತಿ ಹಾಗೂ ಭೂ ಸ್ವಾಧೀನತೆ 0.73.01
5. ರಸ್ತೆಗಳು 034.57
6. ಇನ್ನಿತರ ಖರ್ಚು ವೆಚ್ಚಗಳು ಯಂತ್ರೋಪಕರಣಗಳು ಕಟ್ಟಡಗಳ ನಿರ್ಮಾಣ ಇತ್ಯಾದಿ 093.35
7. ಸಿಬ್ಬಂದಿ ವೆಚ್ಚ 113.85

ಒಟ್ಟು 833.18

ವರ್ಷವಾರು ಮಾಡಿದ ವೆಚ್ಚ

1. 1967-68ರವರೆಗೆ 2.26
2. 1968-69ನೇ ವರ್ಷ 00.81
3. 1969-70 02.30
4. 1970-71 04.37
5. 1971-72 03.98
6. 1972-73 01.98
7. 1973-74 02.11
8. 1974-75 02.24
9. 1975-76 02.03
10. 1976-77 05.20
11. 1977-78 11.96
12. 1978-79 24.62
13. 1979-80 36.94
14. 1980-81 40.19
15. 1981-82 44.78
16. 1982-83 40.87
17. 1983-84 49.10
18. 1984-85 41.34
19. 1985-86 46.22
20. 1986-87 47.52
21. 1987-88 40-41
22. 1988-89 50.11
23. 1989-90 54.97
24. 1990-91 69.08
25. 1991-92 101.82
26. 1992-93 107.07

ಒಟ್ಟು 833.18

ಸಾಧಿಸಿದ ನೀರಾವರಿ ಸಾಮರ್ಥ್ಯ - 138684 ಹೆಕ್ಟೇರ್
(343710 ಎಕರೆಗಳಲ್ಲಿ)

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನೀರಾವರಿಯಾಗಬೇಕಾದ ಒಟ್ಟು ಪ್ರದೇಶ.. 8,43,353 ಹೆಕ್ಟೇರುಗಳಲ್ಲಿ
21,08,382 (ಎಕರೆಗಳಲ್ಲಿ)

ಕೃಷ್ಣಾ ಮೇಲ್ದಂಡೆಯಲ್ಲಿ ಈಗಾಗಲೇ ಯೋಜಿತವಾಗಿರುವ ಯೋಜನೆಗಳ ಒಟ್ಟು ಪ್ರದೇಶ 6,14520 ಹೆಕ್ಟೇರ್(15,16,479 ಎಕರೆಗಳಲ್ಲಿ)

ಇದರಲ್ಲಿ ಎರಡು ಘಟ್ಟಗಳು ಬಳಕೆಯಾಗಬೇಕಾದ ನೀರು 173 ಟಿಎಂಸಿ.
ಮೊದಲನೆಯೇ ಘಟ್ಟದಲ್ಲಿ 119 ಟಿಎಂಸಿ
ಎರಡನೇ ಘಟ್ಟದಲ್ಲಿ 054 ಟಿಎಂಸಿ

ಮೊದಲನೇ ಘಟ್ಟದಲ್ಲಿ ಬರುವ ಕಾಲುವೆ ಹಾಗೂ ನೀರಾವರಿಯಾಗುವ ಪ್ರದೇಶ.

ನಾರಾಯಣಪುರ ಎಡದಂಡೆ ಕಾಲುವೆ ಮತ್ತು ಅದರ ಉಪಕಾಲುವೆಗಳು(78 ಕಿ. ಮಿಾಟರ್) ಮುಖ್ಯ ಕಾಲುವೆಯಿಂದ - 049917 ಹೆಕ್ಟೆರ್
ಶಹಾಪುರ ಶಾಖಾ ಕಾಲುವೆ(78 ಕಿ.ಮಿಾ ಉದ್ದದ) - 121189
ಮುದಬಾಳ ಶಾಖಾ ಕಾಲುವೆ(50, ಕಿ.ಮಿ.ಉದ್ದದ) - 49336
ಇಂಡಿ ಶಾಖಾ ಕಾಲುವೆ(172 ಕಿ.ಮಿ. ಉದ್ದದ) - 131257
ಜೇವರ್ಗಿ ಶಾಖಾ ಕಾಲುವೆ(73 ಕಿ.ಮಿ.ಉದ್ದದ) - 57101
ಆಲಮಟ್ಟಿ ಎಡದಂಡೆ ಕಾಲುವೆ(105 ಕಿ.ಮಿ.) - 16200

ಎರಡನೇ ಘಟ್ಟದಲ್ಲಿ ಬರುವ ಕಾಲುವೆ ಹಾಗೂ ನೀರಾವರಿಯಾಗುವ ಪ್ರದೇಶ
ಆಲಮಟ್ಟಿ ಬಲದಂಡೆ ಏತ ನೀರಾವರಿ - 16120
ರಾಮಪುರ ಏತ ನೀರಾವರಿ(ನಾರಾಯಣಪುರ ಜಲಾಶಯದಡಿಯಲ್ಲಿ) - 20200
ನಾರಾಯಣಪುರ ಬಲದಂಡೆ ಕಾಲುವೆ(95 ಕಿ.ಮಿಾ. ವರೆಗೆ) - 83500
ಇಂಡಿ ಏತ ನೀರಾವರಿ - 40200
ಮುಳವಾಡ ಏತ ನೀರಾವರಿ - 29500
ಒಟ್ಟು - 189520
ಘಟ್ಟ ಒಂದು ಹಾಗೂ ಎರಡು ಸೇರಿ 614520 ಹೆಕ್ಟೇರ್

ಕೃಷ್ಣಾ ಮೇಲ್ದಂಡೆ ಯೋಜನೆಯ ವಸ್ತುಸ್ಥಿತಿಯನ್ನು ಗಮನದಲ್ಲಿರಿಸಿ ಹೆಚ್ಚು →

ಕೃಷ್ಣಾ ಮೇಲ್ದಂಡೆ ಯೋಜನೆಯ ಘಟ್ಟದ ಒಂದರ ಕಾಮಗಾರಿಗಳ ಭೌಗೋಳಿಕ ಪ್ರಗತಿ

ನಾರಾಯಣಪುರ ಅಣೆಕಟ್ಟು ಮತ್ತು ಅದರ ಸಂಬಂಧಿತ ಕೆಲಸಗಳು - ಪೂರ್ಣಗೊಂಡಿದೆ - ಸಪ್ಟೆಂಬರ್ 1982ರಿಂದ ನಿರ್ವಹಣೆಯಲ್ಲಿದೆ
ಆಲಮಟ್ಟಿ ಆಣೆಕಟ್ಟು ಹಾಗೂ ಸಂಬಂಧಿಸಿದ ಕೆಲಸಗಳು -
ಎಡ ಪಾರ್ಶ್ವದ ಮಣ್ಣಿನ ಹಾಗೂ ಮೆಶನರಿ ಆಣೆಕಟ್ಟು - ಆರ್.ಎಲ್. 523.80 ಕಿ.ಮಿ. - ಆರ್.ಎಲ್. 518 ಕಿ.ಮಿಾ. ಸರಾಸರಿ
ಸಿ. ಲೆವೆಲ್ - ಆರ್.ಎಲ್. 509.02 - ಆರ್.ಎಲ್. - 500 ಕಿ.ಮಿ.
ಬಲದಂಡೆಯ ಮೆಶನರಿ ಆಣೆಕಟ್ಟು ವಿದ್ಯುತ್ ಉತ್ಪಾದನಾ ಆಣೆಕಟ್ಟು - ಆರ್.ಎಲ್. 5 28.76 - ಆರ್.ಎಲ್. - 502
ನಾರಾಯಣಪುರ ಎಡದಂಡೆ ನಾಲೆ -
ಮುಖ್ಯ ನಾಲೆ ಉದ್ದ - 78 ಕಿ.ಮಿ. - ಮುಗಿದಿದೆ
ನೀರಾವರಿ ಅಚ್ಚುಕಟ್ಟು - 47223 ಹೆ. - 49917
ಶಹಾಪುರ ಶಾಖಾ ನಾಲೆ ಉದ್ದ - 76 ಕಿ.ಮಿ. - ಮುಗಿದಿದೆ
ನೀರಾವರಿ ಅಚ್ಚುಕಟ್ಟು - 121189 ಹೆ. - 88767 ಹೆ.
ಮುದ್ಬಾಳ್ ಶಾಖಾ ನಾಲಾ ಉದ್ದ - 5080 ಕಿ.ಮಿ. - 0 ದಿಂದ 39 ರವರೆಗೆ ಪ್ರಗತಿಯಲ್ಲಿದೆ.
ನೀರಾವರಿ ಅಚ್ಚುಕಟ್ಟು - 172 ಕಿ.ಮಿ.
ಇಂಡಿ ಶಾಖಾ ನಾಲಾ ಉದ್ದ - 172 ಕಿ.ಮಿ. - 0ಕಿ.ಮಿ.ದಿದ 64 ರವರೆಗೆ ಕೆಲಸ ಪ್ರಗತಿಯಲ್ಲಿದೆ
ನೀರಾವರಿ ಅಚ್ಚುಕಟ್ಟು - 131257 ಹೆ.
ಜೇವರ್ಗಿ ಶಾಖಾ ನಾಲಾ ಉದ್ದ - 73 ಕಿ.ಮಿ. - ಮೊದಲ 18 ಕಿ.ಮಿಾದಲ್ಲಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ.
ನೀರಾವರಿ ಅಚ್ಚುಕಟ್ಟು - 57101 ಹೆ.
ಆಲಮಟ್ಟಿ ಎಡದಂಡೆ ನಾಲಾ ಉದ್ದ - 105 ಕಿ.ಮಿ. - ಮೊದಲ 5 ಕಿ.ಮಿಾ ದಲ್ಲಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ.
ಜಲಾಶಯಗಳ ಮುಂದಂಡೆಯಲ್ಲಿ ಕೈಗೊಳ್ಳಲಾಗುವ ಏತ ನೀರಾವರಿ ಯೋಜನೆಗಳ ಮೂಲ ಘಟಕಗಳು - 4 - ಮುಳವಾಡ ಏತ ನೀರಾವರಿ ಹಾಗೂ ಆಲಮಟ್ಟಿ ಎಡದಂಡೆ ನಾಲೆಯ ಏತ ನೀರಾವರಿ ಯೋಜನೆಗಳು ಪ್ರಗತಿಯಲ್ಲಿವೆ.
ಎರಡನೇ ಘಟ್ಟದ ಕಾಮಗಾರಿಗಳಲ್ಲಿ ಯಾವುದೇ ಭೌಗೋಳಿಕ ಪ್ರಗತಿಯಲ್ಲಿ.

ಹೆಚ್ಚು ಹಣ ಒದಗಿಸಿಲ್ಲೆಂಬ ನೆವದಿಂದ ಮಂತ್ರಿಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಅನಂತರ ಬಂದ ವೀರೇಂದ್ರ ಪಾಟೀಲರಾಗಲೀ, ಬಂಗಾರಪ್ಪನವರಾಗಲೀ ಕೃಷ್ಣೆಯತ್ತ ಹೆಚ್ಚು ಗಮನ ಹರಿಸಿಲ್ಲ. ಈಗ ಮೊಯಿಲಿ, ಎಸ್. ಎಂ. ಕೃಷ್ಣ - ಎಲ್ಲರೂ ಕೃಷ್ಣೆಯ ಆಶ್ರಯಕ್ಕೆ ದೌಡಾಯಿಸುತ್ತಿದ್ದಾರೆ. ಇದೂ ಒಂದು ರಾಜಕೀಯವೇ.

25 ವರ್ಷಗಳ ಹಿಂದೆ ಅಂದರೆ ಮೇ 15,1968 ರಲ್ಲಿ ಪ್ರಜಾವಾಣಿಯಲ್ಲಿ ಪ್ರಕಟವಾದ ಸುದ್ದೀ ಹೀಗಿದೆ. **ಬೆಂಗಳೂರು ಮೇ 24** :ಅಧಿಕ ನೀರಾವರಿ, ಕಡಿಮೆ ವೆಚ್ಚ, ಕೃಷ್ಣಾ ಪರಿಷ್ಕೃತ ಯೋಜನೆಗೆ ಒಪ್ಪಿಗೆ ವೆಚ್ಚದಲ್ಲಿ 25 ಕೋಟಿ ರೂಪಾಯಿಗಳನ್ನು ಉಳಿಸುವುದರೊಂದಿಗೆ ನೀರಾವರಿಗೆ ದೊರೆಯುವ ಜಮೀನನ್ನು 16 ಲಕ್ಷ ಎಕ್ರೆಯಿಂದ 19.5 ಲಕ್ಷ ಎಕರೆಗಳಿಗೇರಿಸುವ ಕೃಷ್ಣಾ ಮೇಲ್ದಂಡೆಯ ಪರಿಷ್ಕೃತ ಯೋಜನೆಗೆ ರಾಜ್ಯ ಸರಕಾರ ಒಪ್ಪಿಗೆ ನೀಡಿದೆ. ಯೋಜನೆಯ ಹಿಂದಿನ ಅಂದಾಜು ವೆಚ್ಚ 168 ಕೋಟಿ ರೂಗಳು. ಪರಿಷ್ಕೃತ ಅಂದಾಜಿನ ಪ್ರಕಾರ ಬರುವ ಖರ್ಚು 143 ಕೋಟಿ. ರೂ. ಎಂದು ಸಚಿವ ಸಂಪುಟದ ನಿರ್ಧಾರವನ್ನು ವಾರ್ತಾ ಸಚಿವ ಮಹಮ್ಮದಾಲಿ ಅವರು ವರದಿಗಾರರಿಗೆ ವಿವರಿಸಿದರು. ಹೊಸ ಯೋಜನೆಯ ಪ್ರಕಾರ ಆಲಮಟ್ಟಿ ಜಲಾಶಯದಿಂದ 106 ಮೈಲುಗಳುದ್ದದ ಕಾಲುವೆ ಕಡಿಯುವ ಕಾರ್ಯವನ್ನು ಕೈಬಿಡಲಾಗಿದೆ. ಅದರ ಬದಲು ನಾರಾಯಣಪುರ ಕಾಲುವೆಯ ಎತ್ತರವನ್ನು ಹೆಚ್ಚಿಸಿ ಆಲಮಟ್ಟಿ ಕಾಲುವೆಯಿಂದ ಪ್ರಯೋಜನ ದೊರಕಲಿದ್ದ ಪ್ರದೇಶಕ್ಕೂ ಒಂದೇ ಕಾಲುವೆಯಿಂದ ನೀರು ಒದಗಿಸುವ ಯೋಜನೆಯನ್ನು ರೂಪಿಸಲಾಗಿದೆ. ಆಲಮಟ್ಟಿಯಿಂದ ನಾರಾಯಣಪುರಕ್ಕಿರುವ ಕಾಲುವೆಯ ನಿರ್ಮಾಣದಲ್ಲಿ ಯಾವುದೇ ಬದಲಾವಣೆಯಿಲ್ಲ.

1968 ರಿಂದ 1993 ರವರೆಗೆ ಅಂದರೆ 25 ವರ್ಷಗಳ ಕಾಲ ಕೃಷ್ಣೆಯಲ್ಲಿ ನೀರು ಸಾಕಷ್ಟು ಹರಿದು ಹೋಗಿದೆ. ಸರಕಾರ ಮಾತ್ರ ಅದರ ಕಡೆ ಗಮನ ಹರಿಸಿಲ್ಲ. 25 ವರ್ಷಗಳ ಹಿಂದಿನ 168 ಕೋಟಿ ರೂ. ಈಗ 6.000 ಕೋಟಿ ರೂ ಆಗಿದೆ. ಅದೂ ಕೂಡಾ ಈಗಿಂದೀಗ ಯುದ್ದೋಪಾದಿಯಲ್ಲಿ ಕೆಲಸ ಪ್ರಾರಂಭಿಸಿದರೆ ಮಾತ್ರ ಇದು ಸಾಧ್ಯ. ಕಳೆದ 35 ವರ್ಷಗಳ ಕಾಂಗ್ರೆಸ್ ಆಡಳಿತೆಯ ವೈಖರಿ ನೋಡಿದರೆ ಕೃಷ್ಣೆಯ ನೀರು ಕರ್ನಾಟಕದ ರೈತರ ಹೊಲಗಳನ್ನು ತಣಿಸುವಂತೆ ಕಂಡು ಬರುವುದಿಲ್ಲ.

ಕೃಷ್ಣೆಯ ನೀರು ನಮಗೆ ಮರೀಚಿಕೆ ಆಗಬಾರದು. ನಮ್ಮ ಪಾಲಿನ ನೀರಿನ ಸೌಕರ್ಯ ನಮ್ಮ ರೈತರಿಗೆ ಸಿಗಲೇ ಬೇಕು. ಹಾಗಾಗಬೇಕಾದರೆ 1964 ರಲ್ಲಿ ಬಿಜಾಪುರದಲ್ಲಾದಂತೆ, ಇತ್ತೀಚೆಗೆ ರಾಯಚೂರು ಜಿಲ್ಲೆಯ ಬಲದಂಡೆ ಕಾಲುವೆಗಾಗಿ ನಡೆದಂಥ ವಿಶಾಲ ತಳಹದಿಯ ತೀವ್ರ ಚಳುವಳಿಯ ಅತ್ಯಗತ್ಯ. ಅದು 'ಎಡಪಕ್ಷಗಳಿಂದ' ಪ್ರಾಂತ ರೈತ ಸಂಘದಿಂದ, ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳಿಂದ ಮಾತ್ರ ಸಾಧ್ಯ. ಯುದ್ದೋಪಾದಿಯಲ್ಲಿ ಈ ಕಾರ್ಯಚರಣೆಗೆ ಮುಂದಾಗೋಣ. ಕೃಷ್ಣೆ ಮರೀಚಿಕೆ ಆಗುವುದನ್ನು ತಪ್ಪಿಸೋಣ. ಕೃಷ್ಣೆಯ ನೀರು ಭೂಮಿಯಲ್ಲಿ ಹರಿಯುವಂತೆ ಮಾಡೋಣ.

ವರ್ಷಗಳಿಂದ ಕೃಷ್ಣಾ ಯೋಜಮೆಯಲ್ಲಿ ಕೆಲಸ ಮಾಡಿದ ಹಿರಿಯ ಅಧಿಕಾರಿಯೊಬ್ಬರು 2000 ಇಸವಿಯೊಳಗಡೆ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾದ ಕಾರ್ಯಕ್ರಮಗಳ ಬಗ್ಗೆ ಸರಕಾರಕ್ಕೆ ವರದಿಯೊಂದನ್ನು ಸಲ್ಲಿಸಿದ್ದಾರೆ. ಕಳೆದೆರಡು ತಿಂಗಳಿಂದ ಕ್ಯಾಬಿನೆಟ್ ಮುಂದೆ ಬರಬೇಕಾದ ವರದಿ ಸರಕಾರದ ದೃಢ ನಿಲುವೆ ಇಲ್ಲದ ಪರಿಣಾಮವಾಗಿ ನೆನೆಗುದಿಗೆ ಬಿದ್ದಿದೆ.

ವರದಿಯಲ್ಲಿರುವ ಪ್ರಮುಖ ಅಂಶಗಳು

ಕೃಷ್ಣಾ ಮೇಲ್ದಂಡೆಯ ಎರಡೂ ಘಟ್ಟಗಳನ್ನು ಮುಂದಿನ ಆರೂವರೆ ವರ್ಷಗಳಲ್ಲಿ ಪೂರ್ಣಗೊಳಿಸಲು ಒಟ್ಟು 2920 ಕೋಟಿ ರೂಪಾಯಿ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ. 1993-94ರಲ್ಲಿ 330 ಕೋಟಿ, 94-95-425 ಕೋಟಿ, 95-96 - 515 ಕೋಟಿ, 96-97 - 525 ಕೋಟಿ, 97-98 - 465 ಕೋಟಿ, 98-99 - 415 ಕೋಟಿ, 99-2000 - 245 ಕೋಟಿ ರೂಪಾಯಿಯ ಅಗತ್ಯವನ್ನು ವರದಿಯಲ್ಲಿ ವಿವರಿಸಲಾಗಿದೆ.

ಈ ಅವಧಿಯಲ್ಲಿ ಕಲ್ಪಿಸುವ ನೀರಾವರಿ ಸಾಮರ್ಥ್ಯ ಒಟ್ಟು 6,144 ಲಕ್ಷ ಹೆಕ್ಟೇರ್‌ನಲ್ಲಿ ಇಲ್ಲಿಯವರೆಗೆ 1.4 ಲಕ್ಷ ಹೆಕ್ಟೇರ್ ನೀರಾವರಿಯಾಗಿದ್ದು, ಇನ್ನುಳಿದ 4.744 ಲಕ್ಷ ಹೆಕ್ಟೇರ್ ನೀರಾವರಿಯಾಗಬೇಕಿದೆ. ಇದರಲ್ಲಿ 93-94 - 0.4 54 ಲಕ್ಷ ಹೆಕ್ಟೇರ್, 94-95 - 0.569 ಲಕ್ಷ ಹೆಕ್ಟೇರ್, 95-96 ಹಾಗೂ 99-97 ರಲ್ಲಿ 0. 8 ಲಕ್ಷ ಹೆಕ್ಟೇರ್, 97-98-2000 ಇಸ್ವಿಯೊಳಗಡೆ 0.54 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಕಲ್ಪಿಸುವ ಬಗ್ಗೆ ವರದಿಯಲ್ಲಿ ಹೇಳಲಾಗಿದೆ.

ಯೋಜನೆಯನ್ನು ಪೂರ್ಣಗೊಳಿಸಲು ಪ್ರತಿ ವರ್ಷ 50 ಲಕ್ಷ ಮಾನವ ದಿನಗಳು ಬೇಕಾಗುವುವು. ಒಂದು ವರ್ಷದಲ್ಲಿ 200 ಮಾನವ ದಿನಗಳೆಂದು ಪರಿಗಣಿಸಿ ಪ್ರತಿನಿತ್ಯ 25 ಸಾವಿರ ಕೂಲಿಕಾರರು ಬೇಕೆಂದು ವರದಿಯಲ್ಲಿ ತಿಳಿಸಲಾಗಿದೆ.

ಕಳೆದ ಮೂರು ದಶಕದಲ್ಲಿ ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯವನ್ನು ರಾಜ್ಯ ಸರಕಾರಗಳು ನೀಡದೆಯಿದ್ದರ ಪರಿಣಾಮವಾಗಿ ಕಾವೇರಿ ನೀರು ಕೈಗೆ ಸಿಗದಂತಾಗಿದೆ. ಕೃಷ್ಣಾ ನೀರು ಕೈಬಿಟ್ಟು ಹೋಗುವ ಸಾಧ್ಯತೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಜಾರಿಗಾಗಿ ಜನಾಂದೋಲನವನ್ನು ನಡೆಸುವ ಮುಖಾಂತರ ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಯಲ್ಲಿ ಜನರನ್ನು ಜಾಗೃತಗೊಳಿಸುವ ಪ್ರಯತ್ನ ನಡೆದಿದ್ದು, ಚುನಾಯಿತ ಪ್ರತಿನಿಧಿಗಳ ಪಾಳೇಗಾರಿ ಜಡತ್ವವನ್ನು, ಆಳುವ ಕಾಂಗ್ರೆಸ್ಸಿನ ಆರ್ಥಿಕ ನೀತಿಯನ್ನು ಬಯಲಿಗೆಳೆದು ಈ ಪ್ರದೇಶದ ಅಭಿವೃದ್ಧಿಯಾಗಲು, ಕೋಮುವಾದಿ ಶಕ್ತಿಗಳನ್ನು ಸದೆಬಡಿದು ಐಕ್ಯತೆಯಿಂದ ಜನಾಂದೋಲನದ ಮುಖಾಂತರ ಕೃಷ್ಣಾ ಜಲಾನಯನದ ನೀರನ್ನು ಬಳಸಿಕೊಳ್ಳಲು ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ಒತ್ತಾಯಿಸಲು ತಯಾರಿ ನಡೆಸಬೇಕೆಂದು ಕರೆ ಕೊಡಲಾಗಿದೆ.

ರಾಜ್ಯದ ಶೇಕಡಾ 60 ಭಾಗವನ್ನು ಆಕ್ರಮಿಸಿದ್ದ ಕೃಷ್ಣಾ ನೀರನ್ನು ಬಳಸಿಕೊಂಡಿಲ್ಲ ರಾಜ್ಯದ ಸ್ಥಗಿತಗೊಂಡ ಆಹಾರ ಉತ್ಪಾದನೆಯಲ್ಲಿ ಕ್ರಾಂತಿಕಾರಿ ಹೆಚ್ಚಳ ಸಾಧಿಸಲು ಸಾಧ್ಯತೆಯುಟು ಮಾತ್ರವಲ್ಲ, ಜೊತೆಗೆ ವಿದ್ಯುತ್ ಕೊರತೆಯನ್ನು ನೀಗಿಸಲು ಕೊಡಾ ಸಾಧ್ಯವಾಗಿದೆ.

ಈ ಯೋಜನೆಯನ್ನು ಪೂರ್ಣಗೊಳಿಸಲು ರಾಜಕೀಯ ದೃಢ ನಿರ್ಧಾರವನ್ನು ತೆಗೆದುಕೊಂಡು ಇದಕ್ಕೆ ಬೇಕಾದ ಸಂಪನ್ಮೂಲವನ್ನು ಕ್ರೋಢೀಕರಿಸಲು ರಾಜ್ಯದ ಈಗಿರುವ ಸಂಪನ್ಮೂಲಗಳ ಜೊತೆ ಕೇಂದ್ರೀಕರಿಸಲೂ ವಿಶೇಷ ಸಹಾಯಕ್ಕೆ ಒತ್ತಾಯಿಸಬೇಕಾಗಿದೆ. ಇವುಗಳ ಜೊತೆ ಅನವಶ್ಯಕವಾದ ಯೋಜನೆಗಳಿಗೆ ಹಾಕುವ ಬಂಡವಾಳವನ್ನು ತಡೆಯುವಂತಾಗಬೇಕು.

ಈ ಸಾಮರ್ಥ್ಯವನ್ನು ಪಡೆಯಲು ಜೊತೆಗೆ ಇದನ್ನು ರಾಜಕೀಯ ಪ್ರಶ್ನೆಯನ್ನಾಗಿ ಮಾಡದೆ ರಾಜ್ಯದ ಅಭಿವೃದ್ಧಿಯ ಪ್ರಶ್ನೆಯನ್ನಾಗಿ ಕೈಗೆತ್ತಿಕೊಂಡು ವಿರೋಧ ಪಕ್ಷದ ಹಾಗೂ ರೈತ ಸಂಘಗಳ ಜನರ ವಿಶ್ವಾಸವನ್ನು ಪಡೆದು ಎಲ್ಲಾ ವಿಭಾಗದ ಜನ ಪ್ರತಿನಿಧಿಗಳನ್ನೊಳಗೊಂಡಂತಹ ಒಂದು ಪ್ರಾಧಿಕಾರ ಇಲ್ಲವೆ ಆಡಳಿತ ಯಂತ್ರವನ್ನು ನಿಗ್ರಹಿಸಬಲ್ಲಂತಹ ಒಂದು ಯಂತ್ರವನ್ನು ರೂಪಿಸಲು ರಾಜ್ಯ ಸರಕಾರ ಮುಂದೆ ಬರುವ ಅವಶ್ಯಕತೆಯಿದ್ದು,ಈ ಪ್ರಶ್ನೆಯನ್ನು ಇಡಿಯಾಗಿ ಜನತೆಯ ಮುಂದೆ ಇಡಲು ಪ್ರಾಂತ ರೈತ ಸಂಘ ಕಾರ್ಯಕ್ರಮ ರೂಪಿಸಿದೆ.

ಸುಳ್ಳುಗಳಲ್ಲಿ ಬರೆದ ಬಣ್ಣದ ಚಿತ್ತಾರ

ನಮ್ಮ ಆಡಳಿತದಲ್ಲಿ ದೇಶದ ಎಲ್ಲ ಜನ ಸುಖವಾಗಿದ್ದಾರೆ ಎಲ್ಲೆಲ್ಲೂ ಸುಖ ಸಮೃದ್ಧಿ ನೆಲೆಸಿದೆ. ಇದು ಹಳೆಕಾಲದ ಯಾವುದೊ ರಾಜನ ಆಸ್ಥಾನ ಘೋಷಣೆಯಲ್ಲ. ಅಧಿಕಾರದಲ್ಲಿ ಎರಡು ವರ್ಷಗಳನ್ನು ಮುಗಿಸುತ್ತಿರುವ ನರಸಿಂಹರಾಯರ ಕಾಂಗ್ರೆಸ್ ಸರ್ಕಾರ ಮಾಡಿಕೊಳ್ಳುತ್ತಿರುವ ಆತ್ಮಪ್ರಶಂಸೆ ಇದು.

ಅವರು ಬಂದ ಮೇಲೆ ಏನೇನಾಗಿದೆ? ಸಾಧನೆಗಳ ಸರಮಾಲೆಯೇ ಇದೆ. ವ್ಯಾಪಾರ ಬಾಕಿಯ ಸ್ಥಿತಿ ಸುಧಾರಿಸಿದೆಯಂತೆ. ಹಿಂದೆ 1991-92 ರಲ್ಲಿಶೇ. 8.4. ರಷ್ಟಿದ್ದ ಹಣಕಾಸಿನ ಖೋತಾ ಈಗ ಶೇ. 6.5 ಕ್ಕೆ ಇಳಿದಿದೆ. ಹಣದುಬ್ಬರದ ದರ 1991 ರ ಆಗಸ್ಟ್‌ನಲ್ಲಿ ಶೇ. 17 ಇದ್ದದ್ದು ಈಗ ಶೇ. 6 ಕ್ಕೆ ಇಳಿದಿದೆ. ಜೂನ್ 1991ರಲ್ಲಿ ವಿದೇಶಿ ವಿನಿಮಯ ಧನ 1.1 ಬಿಲಿಯನ್ ಡಾಲರುಗಳಿದ್ದದ್ದು ಈಗ 6.67 ಬಿಲಿಯನ್ ಅಮೇರಿಕನ್ ಡಾಲರುಗಳಷ್ಟಿದೆ........ ಇನ್ನೂ ಈ ಸಾಧನೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಆದರೆ ಈ ಸರ್ಕಾರ ಮುಚ್ಚಿಡುತ್ತಿರುವ ವಿಷಯಗಳು ಹಲವಿವೆ.


1.ಸರ್ಕಾರ ಮಂಡಿಸುವ ಬಜೆಟ್ಟನ್ನೇ ಈಗ ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್‌ಗಳು ಮೊದಲು ಒಪ್ಪಬೇಕು ಅವರು ಒಪ್ಪಲು ಅವರು ಹೇಳಿದಂತೆ ಇದನ್ನು ತಯಾರಿಸಬೇಕು. ಅಂದರೆ ದೇಶಕ್ಕೆ ಆರ್ಥಿಕ ಸ್ವಾತಂತ್ರವಿಲ್ಲ.

2.ಐ.ಎಂ.ಎಫ್., ವಿಶ್ವಬ್ಯಾಂಕ್‌ಗಳು ಮತ್ತು ಈ ಗುಂಪಿಗೆ ಸೇರಿದ ಹಲವು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಈ ಸರ್ಕಾರ ಕಳೆದೆರಡು ವರ್ಷಗಳಲ್ಲಿ 4050 ಮಿಲಿಯ ಅಮೇರಿಕನ್ ಡಾಲರುಗಳಷ್ಟು ಸಾಲ ಪಡೆದಿವೆ.

3.ಈಗ ಪಡೆದಿರುವ ಸಾಲಗಳೆಲ್ಲ ಹಿಂದಿನ ಸಾಲಗಳ ಮರುಪಾವತಿಗೆ ಸರಿಹೋಗುತ್ತಿದೆ. ಅಂದರೆ ಹೆಚ್ಚು ಹೆಚ್ಚು ಸಾಲ ಪಡೆದರೂ ಆ ಹಣ ಅಭಿವೃದ್ಧಿ ಕಾರ್ಯಗಳಿಗೆ ದೊರೆಯುವುದಿಲ್ಲ.

4.ಹಣದುಬ್ಬರ ಪ್ರಮಾಣ ಕಡಿಮೆಯಾದರೂ ಬೆಲೆಗಳು ಏರುತ್ತಲೇ ಇವೆ.

5.ಆಮದನ್ನು ಉದಾರೀಕರಿಸಿರುವುದರಿಂದ



ನರಸಿಂಹರಾವ್ ಸರಕಾರದ 24ನೇ ತಿಂಗಳಲ್ಲಿ

ಆಂತರಿಕ ಹಣದುಬ್ಬರ ಅಪರಿಮಿತವಾಗಿ ಹೆಚ್ಚುವ ಸಾಧ್ಯತೆ ತೀವ್ರವಾಗಿ ಹೆಚ್ಚಿದೆ.

6.ಕಾಳಹಂದಿಯಂತಹ ಕಡೆ ಬರಗಾಲ ತೀವ್ರವಾಗಿದ್ದು ಆಹಾರವಿಲ್ಲದೆ ಜನ ಸಾಯುತ್ತಿರುವ ಸುದ್ದಿಗಳು ಬರುತ್ತಲೇ ಇವೆ.

7.ಬಾಬರಿ ಮಸೀದಿ ನಾಶವನ್ನು ತಡೆಗಟ್ಟುವಲ್ಲಿನ ವೈಫಲ್ಯ ದೇಶದ ಕೋಮು ಸಾಮರಸ್ಯವನ್ನೇ ಹಾಳು ಮಾಡಿ ಆರ್ಥಿಕ ಮುನ್ನಡೆಯದಂತೆ ಮಾಡಿದೆ.

8.ರಫ್ತಿನ ಮೇಲೆ ಯದ್ವಾತದ್ವಾ ಒತ್ತು ನೀಡಿದರೂ ರಫ್ತು ಏರುತ್ತಿಲ್ಲ. ಶೇ. 17ಕ್ಕಿಂತ ಹೆಚ್ಚಿನ ದರದಲ್ಲಿ ಬೆಳೆಯಬೇಕಾದ ರಫ್ತು ಶೇ. 5 ರಷ್ಟು ಬೆಳೆದಿಲ್ಲ.

ಈ ವೈಫಲ್ಯಗಳ ಪಟ್ಟಿಯೂ ಹೀಗೇ ಬೆಳೆಯುತ್ತದೆ.

ಆದರೆ ಸರ್ಕಾರ ಇದನ್ನು ಮರೆಮಾಚುತ್ತದೆ. ಇದು ಸರ್ಕಾರದ ಎರಡು ವರ್ಷಗಳ ಸಾಧನೆ!!

ಎರಡು ವರ್ಷಗಳ ಅಂತ್ಯದ ಆಚರಣೆಯ ಅಂಚಿನಲ್ಲಿದ್ದವರಿಗೆ ದೆವ್ವ ಭೂತಗಳ ದರ್ಶನ

ನರಸಿಂಹರಾಯರ ಸರ್ಕಾರ ಎರಡು ವರ್ಷಗಳನ್ನು ಮುಗಿಸಿದ್ದರ ಆಚರಣೆಯ ಅಂಚಿನಲ್ಲಿದ್ದ ಕಾಂಗ್ರೆಸಿಸವರಿಗೆ ದೆವ್ವ ಭೂತಗಳ ದರ್ಶನವಾದಂತಾಗಿದೆ. ಹರ್ಷದ್ ಮೆಹ್ತ ಎಂಬ ಗೂಳಿ ಪ್ರಧಾನ ಮಂತ್ರಿಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟೆ ಎಂದು ಹೇಳಿದ್ದರಿಂದ ಈ ಪರಿಸ್ಥಿತಿ ಉಂಟಾಗಿದೆ. ಉದಾರೀಕರಣದ ಪರಿಣಾಮವಾಗಿ ಶೇರು ಹಗರಣ. ಈಗ ಈ ಶೇರು ಹಗರಣವೇ ಪ್ರಧಾನ ಮಂತ್ರಿಗಳಿಗೂ ಇದರಲ್ಲಿ ಪಾಲು ಇದೆ ಎನ್ನುತ್ತಿದೆ.

ನರಸಿಂಹರಾಯರ ಇಂದಿನ ಪರಿಸ್ಥಿತಿಗೆ ಅವರೇ ಕಾರಣ ಎಂಬುದಂತೂ ಸ್ಪಷ್ಟವಲ್ಲವೆ?

ಡಂಕೆಲ್ ಪರವಾಗಿ ದೇಶದ ದೊಡ್ಡ ಬಂಡವಾಳಿಗರು

ದೊಡ್ಡ ಬಂಡವಾಳಿಗರ ಸಂಘಟನೆಯಾದ ಆಸ್ಸೊಚಾಮ್ ಎಂಬ ಸಂಘಟನೆ ಡಂಕೆಲ್ ಪ್ರಸ್ತಾಪಗಳ ಪರವಾಗಿ ಹೇಳಿಕೆ ಇತ್ತಿದೆ. ಅನಿರೀಕ್ಷತವೇನಲ್ಲ ಇದು. ದೇಶದ ಸಣ್ಣ ಕೈಗಾರಿಕೆಗಳು, ವ್ಯಾಪಾರ ಇವೆಲ್ಲ ನಿರ್ನಾಮವಾಗಿ ಸಾಮ್ರಾಜ್ಯಶಾಹಿಗಳೊಂದಿಗೆ ತಾವು ಮಾತ್ರ ಲಾಭದಾಯಕ ಚಟುವಟಿಕೆಯಲ್ಲಿ ತೊಡಗಬಹುದೆಂಬ ಆಶಯ ಅವರ ಈ ನಿಲುವಿನ ಹಿಂದಿರಬಹುದು.

ಔದ್ಯಮಿಕ ಹಿಂಜರಿತ ಮುಂದುವರಿಯುತ್ತದೆ

ಹೊಸ ಆರ್ಥಿಕ ನೀತಿಗಳಿಂದುಂಟಾದ ಆರ್ಥಿಕ ಹಿಂಜರಿತ ಸರ್ಕಾರ ಹೇಳುವಂತೆ ಕೊನೆಗೊಂಡು ಬೆಳವಣಿಗೆ ಪ್ರಾರಂಭವಾಗುವುದಿಲ್ಲ. ಅಂಕೆ ಸಂಖ್ಯೆಗಳು ಸದ್ಯಕ್ಕೆ ಲಭ್ಯವಿಲ್ಲದಿದ್ದರೂ ಹಿಂಜರಿತ ಮುಂದುವರಿದ ಸೂಚನೆಗಳಂತೂ ಇವೆ.

ರೈಲ್ವೆ ಸಾಗಾಣಿಕೆ ಪ್ರಮಾಣ ಔದ್ಯಮಿಕ ಬೆಳವಣಿಗೆ ಹಿಂಜರಿತದ ಒಂದು ಸೂಚನೆ ನೀಡುತ್ತದೆ. ಈ ಆರ್ಥಿಕ ವರ್ಷದಲ್ಲಿ ಅದು ಈಗ ಗುರಿಗಿಂತ 3.5 ಮಿಲಿಯ ಟನ್ನುಗಳಿಂದ ಕಡಿಮೆ ಇದೆ.

ಔದ್ಯಮಿಕ ಉತ್ಪಾದನೆ ಕಳೆದ ಜನವರಿಯಲ್ಲಿದ್ದುದಕ್ಕಿಂತ ಶೇ. 4.1 ರಷ್ಟು ಕಡಿಮೆಯಾಗೇ ಉಳಿದಿದೆ. ಹೊಸ ಆರ್ಥಿಕ ನೀತಿಗಳ ಟೊಳ್ಳುತನ ಮುಂಬರುವ ದಿನಗಳಲ್ಲಿ ಇನ್ನೂ ಸ್ಪಷ್ಟವಾಗುವ ಲಕ್ಷಣ ಇದು.

ರಂಗಮಧ್ಯಕ್ಕೆ ನರಸಿಂಹರಾಯರು

ಹಗರಣದಲ್ಲಿ ಒಳಗೊಂಡ ಕಾಂಗ್ರೆಸ್ಸಿಗರನ್ನು ರಕ್ಷಿಸುತ್ತ ಬಂದಿದ್ದ ನರಸಿಂಹರಾಯರು ಹರ್ಷದ್ ಮೆಹ್ತನ ಆಪಾದನೆಯೊಂದಿಗೆ ರಂಗಮಧ್ಯಕ್ಕೆ ಬಂದಂತಾಗಿದೆ. ಜೂನ್ 16 ರಂದು ಮುಂಬಯಿಯಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಹರ್ಷದ್ ಮೆಹ್ತ ತಾನೇ ನರಸಿಂಹರಾಯರಿಗೆ ಅವರ ನಂದ್ಯಾಲ ಚುನಾವಣೆಯ ಮೊದಲು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಾಗಿ ಹೇಳಿ ದೊಡ್ಡ ಬಾಂಬ್ ಹಾಕಿದ.

ಕಾಂಗ್ರೆಸ್ಸಿಗರ ಮನಸ್ಸು ಹುಳುವಾಗಿರುವುದನ್ನು ಸ್ಪಷ್ಟವಾಗಿ ಕಾಣಬಹುದು.

ಆದರೆ ಹರ್ಷದ್ ಮೆಹ್ತನ ಹಿಂದೆ ಬಿಜೆಪಿ ಇರುವುದೂ ಅಷ್ಟೇ ಸ್ಪಷ್ಟ. ಮೆಹ್ತ ಪತ್ರಿಕಾ ಗೋಷ್ಠಿ ಕರೆಯುವ ಮೊದಲೇ ಆತ ಸಲ್ಲಿಸಿದ ಅಫಿಡಾವಿಟ್‌ನ ವಿವರ ಬಿಜೆಪಿಯವರಿಗೆ ತಿಳಿದಿತ್ತು. ಹೇಗೆ? ಈ ಕಾರ್ಯಕ್ಕಾಗಿ ಮೆಹ್ತನಿಗೆ ಬಿಡುಗಡೆಯ ಭರವಸೆಯನ್ನು ಬಿಜೆಪಿ ನೀಡಿದೆಯೆ ಎಂಬ ಸಂಶಯವಂತೂ ಸಹಜವಾಗಿ ಮೂಡುತ್ತದೆ.

ಪ್ರಧಾನಿ ನಿಜವಾಗಿಯೂ ಹಣ ಪಡೆದರೆ? ಈ ಪ್ರಶ್ನೆಗೆ ಉತ್ತರ ತನಿಖೆಯಿಂದ ಗೊತ್ತಾಗಬೇಕು. ಆದರೆ ಪ್ರಧಾನ ಮಂತ್ರಿಯವರೇ ಒಳಗೊಂಡಿರುವ ವಿಷಯದಲ್ಲಿ ನಡೆವ ತನಿಖೆ ನಿಷ್ಪಕ್ಷಪಾತದಿಂದ ನಡೆಯುವುದೆ? ಆದ್ದರಿಂದಲೇ ಎಡಪಕ್ಷಗಳು ಪ್ರಧಾನಮಂತ್ರಿಗಳ ರಾಜಿನಾಮೆ ಕೇಳಿರುವುದು.

ಪ್ರಧಾನಿಗೆ ತನ್ನ ಓತದ ಈ ವಿಷಯವಾದರೂ ಅರ್ಥವಾದೀತೆ?

ಮೆಹ್ತನಿಗೆ ಸಂಸದೀಯ ಸಮಿತಿಯ ಬುಲಾವ್

ವಿಚಾರಣೆಗೆ ನೇಮಕವಾಗಿರುವ ಸಂಸದೀಯ ಸಮಿತಿಯ ಎದುರಿಗೆ ಹೇಳದೆ ಪ್ರಧಾನ ಮಂತ್ರಿಗಳಿಗೆ ಹಣ ನೀಡಿದ್ದೇನೆಂದು ಪತ್ರಿಕಾ ಗೋಷ್ಠಿ ಕರೆದು ಹೇಳಿದ ಹರ್ಷದ್ ಮೆಹ್ತನಿಗೆ ಸಂಸದೀಯ ಸಮಿತಿ ಹಾಜರಾಗಿ ಹೇಳಿಕೆ ನೀಡುವಂತೆ ಕರೆ ಕಳುಹಿಸಿದೆ.

ಮೆಹ್ತ ತಾನು ಮುಂಬಯಿ ಬಿಡಲು ವಿಶೇಷ ಕೋರ್ಟಿಗೆ ಅರ್ಜಿ ನೀಡಿ ಅನುಮತಿ ನೀಡಬೇಕು ಇಂತಹ ಅರ್ಜಿಯ ಬಗೆಗೆ 48 ಗಂಟೆಗಳ ಮೊದಲು ಸಿಬಿಐಗೆ ತಿಳಿಸಬೇಕು. ಆದ್ದರಿಂದ ಸಮಯಾವಕಾಶ ನೀಡಿ ಎಂದೆಲ್ಲ ಸಮಯಾವಕಾಶಕ್ಕಾಗಿ ನೆವ ಹೂಡುತ್ತಿದ್ದಾನೆ.

ಈ ನಡುವೆ ಪ್ರಧಾನ ಮಂತ್ರಿಗಳ ಜೊತೆಗೆ ಮಾತುಕತೆ ನಡೆಸಿದ ಟೇಪ್ ಇದೆ. ಅದನ್ನು ಸೂಕ್ತ ಸಮಯದಲ್ಲಿ ಬಯಲು ಪಡಿಸುತ್ತೇನೆ ಎಂಬ ಬೆದರಿಕೆ ಬೇರೆ. ಏನೇ ಇರಲಿ ಈ ಎಲ್ಲ ಬೆಳವಣಿಗೆಗಳ ಬಗೆಗೆ ಸ್ಪಷ್ಟ ತಿಳುವಳಿಕೆ ಬರಲು ಸ್ವಲ್ಪ ಸಮಯವೇ ಬೇಕಾದೀತು.

ಶೇರು ಹಗರಣ

'ಹತಾಶೆಯಿಂದ ರಾಜಿನಾಮೆ ನೀಡಿದೆ' ಎಂದ ಮಾಧವನ್

ಸಿಬಿಐನ ಮಾಜಿ ಉನ್ನತಾಧಿಕಾರಿ ಶ್ರೀ ಮಾಧವನ್ ಸಂಸದೀಯ ಸಮಿತಿಗೆ ಮತ್ತೊಂದು ಪತ್ರ ಬರೆದು ಸಿಬಿಐ ಬಹಳ ಒತ್ತಡದಲ್ಲಿ ಕೆಲಸ ಮಾಡಬೇಕಾಗುತ್ತದೆ. ರಾಜಕಾರಣಿಗಳಾರು ಶೇರು ಹಗರಣದಲ್ಲಿ ಪಾಲುದಾರರಲ್ಲವೆಂದು ಹೇಳಿಕೆ ನೀಡಬೇಕೆಂದು ತಮ್ಮ ಮೇಲೆ ಬಹಳ ಒತ್ತಡ ಬಂತು ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದು ಕಷ್ಟವಾಗಿ ರಾಜಿನಾಮೆ ನೀಡಿದೆ ಎಂದಿದ್ದಾರೆ.

ವಿಚಾರಣೆಯ ಆ ಹಂತದಲ್ಲಿ ಅಂತಹ ಹೇಳಿಕೆ ನೀಡುವುದು ಸಾಧ್ಯವಿಲ್ಲ ಎಂದೇ ತಾನು ಹೇಳಿದೆನೆಂದಿದ್ದಾರೆ ಅವರು. ಅಲ್ಲದೆ ಹಲವು ಮುಖ್ಯ ವ್ಯಕ್ತಿಗಳು ಈ ಹಗರಣದಲ್ಲಿ ಭಾಗಿಗಳು ಎಂಬ ಸೂಚನೆ ದೊರೆತಿದ್ದಾಗ ಇಂತ ಹೇಳಿಕೆ ನೀಡವುದು ತನ್ನ ಆತ್ಮಸಾಕ್ಷಿಗೆ ವಿರುದ್ಧವಾದದ್ದು ಎಂದಿದ್ದಾರೆ.

ಸಂಸದೀಯ ಸಮಿತಿಯಿಂದ ಸರ್ಕಾರಿ ಸಂಸ್ಥೆಗಳ ಪಾತ್ರದ ಖಂಡನೆ

ಶೇರು ಹಗರಣದ ವಿಚಾರಣೆ ನಡೆಸುತ್ತಿರುವ ಸಂಸದೀಯ ಸಮಿತಿ ತನ್ನ ವರದಿಯ ಕರಡಿನಲ್ಲಿ ಅದು ಬ್ಯಾಂಕುಗಳು ಮತ್ತು ಸರ್ಕಾರವನ್ನು ತೀವ್ರವಾಗಿ ಟೀಕಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯ ಎಚ್ಚರಿಕೆಯಿಂದ ತಮ್ಮ ಕರ್ತವ್ಯ ನಿರ್ವಹಿಸಿದ್ದರೆ ಇಂತಹ ದೊಡ್ಡ ಪ್ರಮಾಣದ ಹಗರಣ ಆಗುತ್ತಿರಲಿಲ್ಲವೆಂದಿದೆ ಅದು.

ಹಲವು ಮಂತ್ರಿಗಳು ಸಚಿವಾಲಯಗಳನ್ನು ದೂಷಿಸಿದೆ. ಮುಖ್ಯವಾಗಿ ನಮ್ಮ ಕರ್ನಾಟಕದ ಮಂತ್ರಿ ಶಂಕರಾನಂದರು ತೈಲ ಉದ್ಯಮ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ನಡೆದುಕೊಂಡ ರೀತಿಯನ್ನು ಅದು ಟೀಕಿಸಿದೆ.

ಭಾರತೀಯ ಸ್ಟೇಟ್ ಬ್ಯಾಂಕನ್ನು ಸಹ ಅದು ಟೀಕಿಸಿದೆ.

ವಿದೇಶೀ ಬ್ಯಾಂಕುಗಳ ಬಗ್ಗೆ ಬರೆಯುತ್ತ ವರದಿ ಈ ವಿದೇಶಿ ಬ್ಯಾಂಕುಗಳು ನಮ್ಮನ್ನು ಬಹಳ ಹಗುರವಾಗಿ ಪರಿಗಣಿಸಿವೆ ಎಂದಿದೆ. ಹಗರಣದಲ್ಲಿ ಮುಖ್ಯಪಾತ್ರ ವಹಿಸಿದ ಇವುಗಳು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲಿಸಲಿಲ್ಲ. ಭಾರತೀಯ ರಿಸರ್ವ್ ಬ್ಯಾಂಕೂ ಸಹ ತನ್ನ ನಿರ್ದೇಶನಗಳ ಪಾಲನೆಯಾಗುವಂತೆ ನೋಡಿಕೊಳ್ಳಲಿಲ್ಲ.



ಪಂಜಾಬ್‌ನಲ್ಲಿ ಪೊಲೀಸ್ 'ಭಯೋತ್ಪಾದನೆ'ಯ ಆರಂಭ

ಖಲಿಸ್ತಾನ್‌ವಾದಿಗಳಿಂದ ಜರ್ಝರಿತವಾಗಿದ್ದ ಪಂಜಾಬಿನಲ್ಲಿ ಭಯೋತ್ಪಾದಕರ ಹಾವಳಿ ಸ್ವಲ್ಪ ಕಡಿಮೆಯಾದಂತೆ ಕಂಡು ಬಂದ ಬೆನ್ನಲ್ಲೇ ಇನ್ನೊಂದು ರೀತಿಯ ಭಯೋತ್ಪಾದನೆ ಅಲ್ಲಿ ಆರಂಭವಾದಂತೆ ಕಾಣುತ್ತದೆ. ಅದೇ 'ಪೊಲೀಸ್ ಭಯೋತ್ಪಾದನೆ' ಇತ್ತೀಚಿನ ಹಲವಾರು ಪ್ರಕರಣಗಳು ಇದಕ್ಕೆ ಪುಷ್ಟಿ ನೀಡುತ್ತವೆ.

ಸಿಪಿಐ(ಎಂ) ಪಂಜಾಬ್ ರಾಜ್ಯ ಸಮಿತಿ ಸದಸ್ಯ ಹಾಗೂ ಭಟಿಂಡಾ ಘಟಕದ ಕಾರ್ಯದರ್ಶಿ ದರ್ಶನ್ ಮೆಹ್ರಾಜರನ್ನು ಜೂನ್ ಒಂದರಂದು ಒಬ್ಬ ಹೆಡ್‌ಕಾನ್ಸ್‌ಟೇಬಲ್ ಭಟಿಂಡಾದಲ್ಲಿ ತೀವ್ರವಾಗಿ ಹೊಡೆದು ಗಾಯಗೊಳಿಸಿದನು.

ಇಬ್ಬರು ವ್ಯಕ್ತಿಗಳ ನಡುವಿನ ಸಣ್ಣ ಜಗಳವೊಂದರ ಸಂಬಂಧದಲ್ಲಿ ಮಧ್ಯಸ್ಥಿಕೆಗಾಗಿ ಇತರ ಕೆಲವು ಜನರೊಂದಿಗೆ ಮೆಹ್ರಾಜ್ ಪೊಲೀಸ್ ಠಾಣೆಗೆ ಹೋದಾಗ ಅವರ ಮೇಲೆ ಪೊಲೀಸರೇ ಆಕ್ರಮಣ ನಡೆಸಿದರು.

ವಿವಾದದಲ್ಲಿ ಒಳಗೊಂಡ ಇಬ್ಬರೂ ವ್ಯಕ್ತಿಗಳಿಂದ ಹಣ ಕಿತ್ತುಕೊಳ್ಳುವುದು ಹೆಡ್‌ಕಾನ್ಸ್‌ಟೇಬಲ್ ಸುರ್ಜೀತ್‌ಸಿಂಗ್‌ನ ಉದ್ದೇಶವಾಗಿತ್ತು. ಆದ್ದರಿಂದ ಆತ ಕಾ. ಮೆಹ್ರಾಜ್‌ರ ಪ್ರಾಮಾಣಿಕ ಮಧ್ಯಸ್ಥಿಕೆಯನ್ನು ವಿರೋಧಿಸಿದ. ಸಹೋದ್ಯೋಗಿ ಮೆಹಫೂಜ್ ಮತ್ತು ಹೋಂಗಾರ್ಡ್ ಬಲ್ಕಾರ್‌ಸಿಂಗ್‌ನ ನೆರವಿನಿಂದ ಮೆಹ್ರಾಜ್‌ರನ್ನು ಸಿಕ್ಕಾಪಟ್ಟೆ ಹೊಡೆದನು. ಪರಿಸ್ಥಿತಿ ಎಷ್ಟು ವಿಕೋಪಕ್ಕೆ ಹೋಗಿತ್ತೆಂದರೆ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಸಕಾಲದಲ್ಲಿ ಮಧ್ಯಪ್ರವೇಶ ಮಾಡದಿದ್ದರೆ ಮೆಹ್ರಾಜ್ ಸತ್ತೇ ಹೋಗುತ್ತಿದ್ದರು.

ಪಕ್ಷದ ಪಂಜಾಬ್ ರಾಜ್ಯಸಮಿತಿ ಕಾರ್ಯದರ್ಶಿ ಮಂಗತ್ ರಾಮ್ ಪಸ್ಲಾ ಈ ಘಟನೆಯನ್ನು ಕಟುವಾಗಿ ಖಂಡಿಸಿದ್ದಾರೆ. ಪೊಲೀಸ್ ಅಧಿಕಾರಿಗಳು ಗೌರವಾನ್ವಿತ ಹಾಗೂ ಮುಗ್ಧ ಜನರ ಮೇಲೆ ದೌರ್ಜನ್ಯ ಎಸಗುತ್ತಿರುವುದಕ್ಕೆ ಇದು ಇನ್ನೊಂದು ಉದಾಹರಣೆಯಾಗಿದೆ ಎಂದು ಅವರು ಹೇಳಿದ್ದಾರೆ.

ಮೆಹ್ರಾಜ್ ಮೇಲಿನ ದೌರ್ಜನ್ಯವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಮುಖ್ಯಮಂತ್ರಿ ಬೆಯಾಂತ್ ಸಿಂಗ್ ಮತ್ತು ಸಂಬಂಧಪಟ್ಟ ಇತರ ಅಧಿಕಾರಿಗಳನ್ನು ಪಸ್ಲಾ ಆಗ್ರಹಪಡಿಸಿದ್ದಾರೆ.

ಸುರ್ಜಿತ್ ಪತ್ರ

ಈ ನಡುವೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಪಂಜಾಬ್ ಮುಖ್ಯಮಂತ್ರಿ ಬೆಯಾಂತ್‌ಸಿಂಗ್‌ಗೆ ಒಂದು ಪತ್ರ ಬರೆದು ಗ್ರಾಮಸ್ಥರ ಮೇಲೆ ಮುಂದುವರಿದ ಆಕ್ರಮಣದತ್ತ ಗಮನಸೆಳೆದಿದ್ದಾರೆ.

ಫಿರೋಜ್‌ಪುರ ಜಿಲ್ಲೆಯ ಫಜಿಲ್ಕಾ ತಹಸೀಲಿನ ಜಲಾಲಾಬಾದ್ ಪೊಲೀಸ್ ಠಾಣೆ ಸಿಬ್ಬಂದಿಗಳ ಅಮಾನವೀಯ ವರ್ತನೆಗಳ ಬಗ್ಗೆ ಜೂನ್ ಒಂದರ ಪತ್ರದಲ್ಲಿ ಸುರ್ಜಿತ್ ವಿವರಗಳನ್ನು ನೀಡಿದ್ದಾರೆ. ಇಡೀ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಹಾಗೂ ಅಕ್ಷಮ್ಯ ಅಪರಾಧಗಳನ್ನು ನಡೆಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

ಜಲಾಲಾಬಾದ್ ಪೊಲೀಸ್ ಠಾಣೆಯ ಸಿಬ್ಬಂದಿಗಳು ಎಸಗಿದ ದುಷ್ಟ ಕೃತ್ಯಗಳ ವಿವರ ಇಲ್ಲಿದೆ.

ಜಲಾಲಾಬಾದ್ ಠಾಣೆಯ ನಾಲ್ವರು ಪೊಲೀಸರು ಮೇ ತಿಂಗಳ ನಾಲ್ಕರ ರಾತ್ರಿ ಜಲಾಬಾದ್ ಪೊಲೀಸ್‌ಠಾಣೆ ವ್ಯಾಪ್ತಿಯ ಮೌಜಮ್ ಗ್ರಾಮಕ್ಕೆ . ತೆರಳಿದ್ದರು. ಆಗ ಅವರು ಪೊಲೀಸ್ ಸಮವಸ್ತ್ರ ಧರಿಸಿರಲಿಲ್ಲ. ಈ ಅಪರಿಚಿತರು ಭಯೋತ್ಪಾದಕರಿರಬೇಕು ಎಂದು ತಪ್ಪಾಗಿ ತಿಳಿದ ಗ್ರಾಮಸ್ಥರು ಅವರನ್ನು ಹಿಡಿದುಕೊಂಡರು. ಮೌಜಮ್ ಗ್ರಾಮ ಈ ನಾಲ್ವರು ಪೊಲೀಸ್‌ರ ವ್ಯಾಪ್ತಿಗೆ ಬರುವ ಪ್ರಕರಣವೇ ಅಲ್ಲ.

ಮೇ ನಾಲ್ಕರಂದು ಈ ಪೊಲೀಸರು ಗ್ರಾಮಸ್ಥರ ಕೈಗೆ ಸಿಕ್ಕಿಬಿದ್ದರು. ಮರುದಿನ ನಡೆದದ್ದು ಪೊಲೀಸರ ದೌರ್ಜನ್ಯದ ರುದ್ರ ತಾಂಡವ. ಮೇ ಐದರ ಮುಂಜಾನೆಯೇ ಪೊಲೀಸರ ಒಂದು ದೊಡ್ಡ ಪಡೆಯೇ ಗ್ರಾಮದ ಮೇಲೆ ಎರಗಿತು. ಗ್ರಾಮಸ್ಥರನ್ನು ಸಿಕ್ಕಾಪಟ್ಟೆ ಥಳಿಸಲಾಯಿತು. ಮೂವರು ತಲೆಗಳಿಗೆ ಗಂಭೀರ ಗಾಯಗಳಾಗಿವೆ. ಅನೇಕ ಜನರಿಗೆ ಗಾಯಗಳಾಗಿವೆ.

ಪೊಲೀಸರ ಈ ರಾಕ್ಷಸೀ ಕೃತ್ಯಗಳಿಂದ ಜನರು ಸಹಜವಾಗಿಯೇ ಆಕ್ರೋಶಗೊಂಡಿದ್ದಾರೆ ಎಂದು ಸುರ್ಜಿತ್ ತಿಳಿಸಿದ್ದಾರೆ. ಪೊಲೀಸ್ ದೌರ್ಜನ್ಯವನ್ನು ವಿರೋಧಿಸಲು ಸಿಪಿಐ(ಎಂ), ಸಿಪಿಐ ಮತ್ತು ಬಿಎಸ್‌ಪಿಗಳು ಜಂಟಿಯಾಗಿ ವ್ಯವಸ್ಥೆಗೊಳಿಸಿದ್ದ ಸಭೆಗಳಲ್ಲಿ ಜನರು ಭಾರೀ ಸಂಖ್ಯೆಯಲ್ಲಿ ನೆರೆದಿದ್ದರು.

ಡಿಎಸ್ಪಿಯಿಂದಲೇ ಬೆದರಿಕೆ

ಈ ಸಭೆಗಳ ನಂತರ ಕ್ರಿಯಾಸಮಿತಿಯೊಂದನ್ನು ರಚಿಸಲಾಯಿತು. ಮೇ ಆರರಂದು ಸಂಸತ್‌ಸದಸ್ಯ ಡಾ. ಸೋಹನ್‌ಸಿಂಗ್ ಫಲ್ಕಸ್‌ವಾಲಾ ನೇತೃತ್ವದಲ್ಲಿ ಒಂದು ನಿಯೋಗ ತೆರಳಿದಾಗ ನಿಯೋಗವನ್ನು ಭೇಟಿ ಮಾಡಲು ನಿರಾಕರಿಸಿದ ಡಿ.ಎಸ್.ಪಿ. ಗ್ರೆವಾಲ್ ಎಂಬಾತ ನಿಯೋಗದ ಸದಸ್ಯರಿಗೆ ಬೆದರಿಕೆ ಹಾಕಿದ. ಪೊಲೀಸರ ವಿರುದ್ಧ ದೂರು ಹೇಳುವ ಧೈರ್ಯ ತೋರುವವರು ಭೀಕರ ಪರಿಣಾಮಗಳನ್ನು ಎದುರಿಸಬೇಕಾದೀತು ಎಂದು ಹೇಳಿದ.

ಅನಂತರ ಎಸ್‌ಡಿ.ಎಂ. ಮಧ್ಯಪ್ರವೇಶ ಮಾಡಿದಾಗಷ್ಟೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಡಿಎಸ್‌ಪಿ ಭರವಸೆ ನೀಡಿದರು.

ಆದರೆ ಮರುದಿನ ನಡೆದದ್ದೇ ಬೇರೆ. ಸುಮಾರು 150 ಪೊಲೀಸರು ಗ್ರಾಮದ ಮೇಲೆ ದಾಳಿ ನಡೆಸಿದರು. ಸಿಕ್ಕ ಸಿಕ್ಕವರನ್ನೆಲ್ಲಾ ಹಿಡಿದು ಚಚ್ಚಿದರು. ಹೆಂಗಸರು, ಮಕ್ಕಳು ಕೂಡಾ ಖಾಕಿಧಾರಿಗಳ ಲಾಠಿ ಏಟಿಗೆ ಒಳಗಾದರು. ಗಡ್ಡ ಮತ್ತು ಕೂದಲನ್ನು ಹಿಡಿದು ಜಗ್ಗಾಡಿ ಜನರ ಧಾರ್ಮಿಕ ಭಾವನೆಗಳನ್ನು ನೋಯಿಸಿದರು.

ಇಷ್ಟಕ್ಕೇ ನಿಲ್ಲದ ಧೂರ್ತರು ಮನೆಯೊಳಗಿನ ಸಾಮಾನು ಸರಂಜಾಮು-ಪಾತ್ರೆ ಪಗಡೆಗಳನ್ನು ನಾಶಪಡಿಸಿದರು. ಸುಮಾರು 100 ಜನರನ್ನು ಠಾಣೆಗೆ ಕರೆದುಕೊಂಡು ಹೋದರು.

ಮಧ್ಯಯುಗದ ಬರ್ಬರತೆ

ಮಧ್ಯಯುಗದ ಬರ್ಬರತೆಯನ್ನು ನೆನಪಿಸುವಂಥ ಕೃತ್ಯಗಳನ್ನು ನಡೆಸಿದ ಪೊಲೀಸರು ಗ್ರಾಮಸ್ಥರನ್ನು ಠಾಣೆಯಲ್ಲಿ ನಗ್ನಗೊಳಿಸಿ ಹೀನಾಯವಾಗಿ ಹೊಡೆದರು ಎಂದು ಸುರ್ಜಿತ್ ವಿವರಿಸಿದ್ದಾರೆ. ಅವರು ತೆವಳುವಂತೆ ಮಾಡಿ ಬರಿ ದೇಹದ ಮೇಲೆ ಬಿಸಿ ಮರಳನ್ನು ಸುರಿದರು. ಅಷ್ಟೇ ಅಲ್ಲದೆ ತೀಕ್ಷ್ಣ ಬೆಂಕಿಯ ಸುತ್ತ ಅವರನ್ನು ನಿಲ್ಲಿಸಿವರು.

ಸತತ ಕೆಲವು ದಿನಗಳು ನಡೆದ ಪೊಲೀಸ್ ಅತಿರೇಕವನ್ನು ಸುದೀರ್ಘವಾಗಿ ವಿವರಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಯಾವುದೇ ಒಂದು ನಾಗರಿಕ ಸಮಾಜದಲ್ಲಿ ಇಂಥ ಕೃತ್ಯಗಳಿಗೆ ಅವಕಾಶವಿರಬಾರದು ಎಂದಿದ್ದಾರೆ. ಮುಗ್ಧ ಜನರ ಮೇಲೆ ಈ ದೌರ್ಜನ್ಯ ಎಸಗಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮೌಜಮ್ ಗ್ರಾಮದ ಜನರು ಎಸಗಿದ ಅಪರಾಧವಾದರೂ ಏನು?

ದೇಶದ ಸಮಗ್ರತೆಯನ್ನು ಕಾಪಾಡುವ ಮನೋಭಾವವುಳ್ಳ ಅವರು ತಪ್ಪಾಗಿ ತಿಳಿದು ನಾಲ್ಕು ಮಂದಿ ಪೊಲೀಸರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಅಷ್ಟೆ. ಹಾಗೆ ನೋಡಲು ಹೋದರೆ ಈ ಪೊಲೀಸರಿಗೆ ಆ ಗ್ರಾಮದಲ್ಲಿ ಯಾವ ಕೆಲಸವೂ ಇರಲಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ, ವಿವಿಧ ಪ್ರಕರಣಗಳನ್ನು ಗಮನಿಸುವಾಗ ಪಂಜಾಬಿನಲ್ಲಿ ಪೊಲೀಸರೇ ಭಯೋತ್ಪಾದಕರಂತೆ ವರ್ತಿಸುತ್ತಿದ್ದಾರೆ.

ಭೂಮಾಲಿಕ ಗೂಂಡಾಗಳಿಂದ ಹತ್ಯೆ

ಬಿಹಾರದ ದರ್ಭಾಂಗ ಜಿಲ್ಲೆಯಲ್ಲಿ ಸಿಪಿಐ(ಎಂ) ಏರ್ಪಡಿಸಿದ್ದ ಕೃಷಿ ಕೂಲಿಗಾರರ ಒಂದು ಸಭೆಯ ಮೇಲೆ ಭೂಮಾಲಕರ ಗೂಂಡಾಗಳು ಆಕ್ರಮಣ ನಡೆಸಿ ಪಕ್ಷದ ಒಬ್ಬ ಕಾರ್ಯಕರ್ತನನ್ನು ಕೊಂದು ಹಾಕಿದರು. ಜೂನ್ ಎರಡರಂದು ನಿಶ್ಶಸ್ತ್ರ ಜನರ ಮೇಲೆ ಈ ಆಕ್ರಮಣ ನಡೆಯಿತು.

ಬಿಹಾರದ ಮುಂದುವರಿದಿರುವ ಭೂ ಚಳುವಳಿಯ ಅಂಗವಾಗಿ ದರ್ಭಾಂಗ ಜಿಲ್ಲೆಯ ಭವಾನಿಪುರ ಗ್ರಾಮದ ಭೂ ರಹಿತ ರೈತರು 16 ಬಿಘಾ ಅಕ್ರಮ ಭೂಮಿಯನ್ನು ವಶಪಡಿಸಿಕೊಂಡಿದ್ದರು. ಅದನ್ನು 150 ಮಂದಿ ಭೂರಹಿತ ಕೃಷಿಕರಿಗೆ ವಿತರಿಸಲಾಗಿತ್ತು. ಅಲ್ಲಿ ಅವರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು.

ಭೂಮಾಲಕರ ಸಶಸ್ತ್ರ ಗೂಂಡಾಗಳು ಮೇ 31 ರಂದು ಗ್ರಾಮದ ಮೇಲೆ ದಾಳಿ ಮಾಡಿ ರೈತರನ್ನು ಹೊಡೆದು ಗಾಯಗೊಳಿಸಿದರು. ಗುಡಿಸಲುಗಳನ್ನು ಸುಟ್ಟುಹಾಕಿದರು.

ಸಿಪಿಐ(ಎಂ) ನೇತೃತ್ವದಲ್ಲಿ ಜೂನ್ ಎರಡರಂದು ಪ್ರತಿಭಟನಾ ಸಭೆಯನ್ನು ಏರ್ಪಡಿಸಲಾಗಿತ್ತು. ಆಗ ಗೂಂಡಾಗಳು ನಡೆಸಿದ ದಾಳಿಯಲ್ಲಿ ಸಿಪಿಐ(ಎಂ) ಕಾರ್ಯಕರ್ತರ ರಾಮ್‌ಶರಣ್ ಚೌಪಾಲ್ ಮೃತಪಟ್ಟು ಇತರ ಅನೇಕರು ಗಾಯಗೊಂಡರು.

ಗೇರು ಕಾರ್ಮಿಕರ ಹೋರಾಟ

ಕೇರಳದ ಸಾವಿರಾರು ಗೇರು ಕಾರ್ಮಿಕರು ಕೊಲ್ಲಮ್‌ನದಲ್ಲಿರುವ ಗೇರು ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಗೆ ಇತ್ತೀಚೆಗೆ ಮುತ್ತಿಗೆ ಹಾಕಿ [illegible]ರು ಈ ಚಳವಳಿಯನ್ನು ನಡೆಸಲಾಯಿತು.

ಕೇರಳದಲ್ಲಿ ಎಸ್.ಎಫ್.ಐಗೆ ಜಯ

ಕೇರಳ ರಾಜ್ಯದ ಕೇರಳ ಮತ್ತು ಮಹಾತ್ಮಾ ಗಾಂಧಿ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ ಸಂಘಗಳಿಗೆ ನಡೆದ ಚುನಾವಣೆಗಳಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಸ್.ಎಫ್) ನೇತೃತ್ವದ ರಂಗ ಭರ್ಜರಿ ವಿಜಯಗಳಿಸಿದೆ. ಕೇರಳ ವಿವಿ ಸಂಘದ ಅಧ್ಯಕ್ಷ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಎಫ್.ಐ. ಅಭ್ಯರ್ಥಿಗಳಾದ ಟಿ. ಗೀತಾಕುಮಾರಿ ಮತ್ತು ಎಫ್.ನಹಾಸ್ ಚುನಾಯಿತರಾಗಿದ್ದಾರೆ. ಮಹಾತ್ಮಾ ಗಾಂಧಿ ವಿವಿಯಲ್ಲಿ ಕೂಡಾ ಈ ಎರಡೂ ಹುದ್ದೆಗಳು ಎಸ್.ಎಫ್.ಐ ಪಾಲಾಗಿದೆ. ಅಧ್ಯಕ್ಷರಾಗಿ ಪಿ. ಸಲೀಂ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಜಾರ್ಜ್ ವರ್ಗೀಸ್ ಜಯಭೇರಿ ಬಾರಿಸಿದ್ದಾರೆ.

ಕೇರಳ ವಿವಿ ಸಂಘದ ಮೂವರು ಉಪಾಧ್ಯಕ್ಷರು ಕೂಡಾ ಎಸ್.ಎಫ್.ಐ ನಾಯಕರು. ಅವರೆಂದರೆ ಎಸ್.ಶಿಬು, ಬಿ.ಎಸ್.ಸ್ಲೀನಾ ಮತ್ತು ಟಿ.ಎಸ್. ಷಹಾ. ಸಹ ಕಾರ್ಯದರ್ಶಿಗಳಾಗಿ ಎಸ್.ಶಿವದಾಸು (ಎಸ್.ಎಫ್.ಐ) ಮತ್ತು ಸಿ. ಜೋಜಿ (ಎಸ್. ಎಫ್.ಐ.) ಚುನಾಯಿತರಾಗಿದ್ದಾರೆ. ಈ ಸಂಘದ 15 ಸದಸ್ಯರ ಕಾರ್ಯಕಾರಿ ಸಮಿತಿಯಲ್ಲಿ 11 ಹಾಗೂ ಐದು ಸದಸ್ಯರ ಲೆಕ್ಕಪತ್ರ ಸಮಿತಿಯ ನಾಲ್ಕು ಸ್ಥಾನಗಳಲ್ಲಿ ಎಸ್.ಎಫ್.ಐ. ಜಯಗಳಿಸಿದೆ.

ಮಹಾತ್ಮಾ ಗಾಂಧಿ ವಿವಿ ಸಂಘದ 15 ಸದಸ್ಯರ ಕಾರ್ಯಕಾರಿ ಸಮಿತಿಯ ಎಂಟು, 7 ಜನರಲ್ ಸ್ಥಾನಗಳು ಎಸ್.ಎಫ್.ಐ ಪಾಲಾಗಿವೆ. ಮೂವರು ಉಪಾಧ್ಯಕ್ಷರ ಪೈಕಿ ಎರಡು ಸ್ಥಾನಗಳು ಎಸ್.ಎಫ್.ಐ. ರಂಗಕ್ಕೆ ದೊರಕಿವೆ.

ಈ ಎರಡೂ ವಿವಿ ವಿದ್ಯಾರ್ಥಿ ಸಂಘಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಬೆಂಬಲಿಸುವ ಕೆ.ಎಸ್.ಯು ರಂಗ ಮಣ್ಣು ಮುಕ್ಕಿದೆ.

●

ದ.ಕ. ಬಸ್ ಮಾಲಕರ ಬೆದರಿಕೆ ತಂತ್ರ: ಡಿ.ವೈ.ಎಫ್.ಐ ಖಂಡನೆ

ಮಂಗಳೂರು: ಒಂದು ವರ್ಷದ ಅವಧಿಯಲ್ಲಿ ಎರಡನೇ ಬಾರಿ ಪ್ರಯಾಣ ದರವನ್ನು ಏರಿಸಿರುವ ಬಸ್ ಮಾಲಕರು ಪ್ರಯಾಣಿಕರು ಪ್ರತಿಭಟನೆ ವ್ಯಕ್ತಪಡಿಸಿದಾಗ ಯಾವುದೇ ಮುನ್ಸೂಚನೆ ನೀಡದೆ ಅನಿರ್ದಿಷ್ಟಾವಧಿ ಬಸ್ ಬಂದ್‌ನಂತಹ ಬೆದರಿಕೆ ಕ್ರಮಕ್ಕೆ ಮುಂದಾಗುತ್ತಾರೆ. ಸಿಟಿ ಬಸ್ ಮಾಲಕರ ನೀತಿಯನ್ನು ಡಿ.ವೈ.ಎಫ್.ಐ ದ.ಕ. ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ. ಬಸ್‌ದರ ಏರಿಕೆಯ ವಿರುದ್ಧ ಎಲ್ಲಾ ವಲಯಗಳಿಂದ ತೀವ್ರ ಪ್ರತಿಭಟನೆ ವ್ಯಕ್ತವಾದಾಗ ಕೇವಲ 0.05 ಪೈಸೆಯನ್ನು ಇಳಿಸಿ ಜನಸಾಮಾನ್ಯರ ಕಣ್ಣಿಗೆ ಮಣ್ಣೆರಚಿದೆ. ಇದನ್ನು ಉಗ್ರವಾಗಿ ವಿರೋಧಿಸಿರುವ ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಸಮಿತಿಯು ದಿನಾಂಕ 6.6. 1993 ರಂದು ಸಭೆ ಸೇರಿ ಒಂದು ನಿರ್ಣಯವನ್ನು ಅಂಗೀಕರಿಸಿ ವರ್ಷಕ್ಕೆರಡು ಬಾರಿ ದರ ಪರಿಷ್ಕರಿಸುವ ಬದಲು ಕನಿಷ್ಠ 5 ವರ್ಷಕ್ಕೊಮ್ಮೆ ವಿವಿಧ ಸಂಘಟನೆಗಳೊಂದಿಗೆ ಚರ್ಚಿಸಿ ಪರಿಷ್ಕರಿಸಬೇಕು. ವಿದ್ಯಾರ್ಥಿ ಸಮುದಾಯಕ್ಕೆ ಹಳೆಯ ದರದಲ್ಲೇ ಬಸ್ ಪಾಸುಗಳನ್ನು ವಿತರಿಸಬೇಕು ಮತ್ತು ವಿದ್ಯಾರ್ಥಿ ಸಮುದಾಯಕ್ಕೆ ಇತರ ರಾಜ್ಯಗಳಲ್ಲಿ ಇರುವಂತೆ 70 ಶೇಕಡಾ ರಿಯಾಯಿತಿ ನೀಡಬೇಕೆಂದು ಒತ್ತಾಯಿಸಿದೆ.

ಕೆ. ಯಾದವ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಜರಗಿದ ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಅದು ತನ್ನ ಇನ್ನೊಂದು ನಿರ್ಣಯದಲ್ಲಿ ಕೊಂಕಣ ರೈಲ್ವೆ ಯೋಜನೆಯಡಿ ಸಂತ್ರಸ್ತರಿಗೆ ಉದ್ಯೋಗ ನೀಡದೆ ವಂಚಿಸುತ್ತಿರುವ ಸರಕಾರದ ನೀತಿಯನ್ನು ಖಂಡಿಸಿದೆ. ಮತ್ತು ಸಂತ್ರಸ್ತರ ಮನೆಯ ಕನಿಷ್ಠ ಓರ್ವನಿಗೆ ಯೋಜನೆಯಲ್ಲಿ ಉದ್ಯೋಗ ನೀಡಬೇಕೆಂದು ಒತ್ತಾಯಿಸಿದೆ.

ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಹಾಜರಿದ್ದು ಸೂಕ್ತ ಮಾರ್ಗದರ್ಶನ ನೀಡಿದರು. ಕಾರ್ಯದರ್ಶಿ ವಸಂತ ಆಚಾರಿ ಸ್ವಾಗತಿಸಿ ವಂದಿಸಿದರು

ಎಸ್.ಎಫ್.ಐ ಧರಣಿ

ತುಮಕೂರು : ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಬ್ಲಾಕ್‌ಮೇಲ್ ತಂತ್ರಗಳಿಗೆ ಬೆದರದಿರಲು ಹಾಗೂ 93-94 ರ ಸಾಲಿನಿಂದ ಪದವಿ ಪೂರ್ವ ಮಂಡಳಿಯವರು ಶೇಕಡ 50 ರಷ್ಟು ಏರಿಸಿರುವ ಶುಲ್ಕವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ತುಮಕೂರು ಜಿಲ್ಲಾಧಿಕಾರಿ ಕಛೇರಿ ಎದುರು ಎಸ್.ಎಫ್.ಐ. ವತಿಯಿಂದ 11ನೇ ಜೂನ್ 93 ರಂದು ಹನ್ನೊಂದು ಗಂಟೆಗೆ ಡಿಸಿ.ಯವರ ಮುಖೇನ ಮನವಿಯನ್ನು ಸಲ್ಲಿಸಲಾಯಿತು.

ಧರಣಿಗೆ ಮುನ್ನ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಧರಣಿ ಕುಳಿತಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಎಸ್.ಎಫ್.ಐ. ರಾಜ್ಯ ಸಮಿತಿ ಸದಸ್ಯರಾದ ಇ. ಬಸವರಾಜು, ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಎನ್. ಉಮೇಶ್ ಜಿಲ್ಲಾ ಸಮಿತಿ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿದರು. ವಿದ್ಯಾವಾಹಿನಿ ಕಾಲೇಜಿನ ಕು. ಶಶಿಕಲಾ ಮನವಿಯನ್ನು ಓದಿದರು. ಜಿಲ್ಲಾ ಸಮಿತಿ ಸದಸ್ಯ ಆನಂದ್ ನಾಯಕ ಸ್ವಾಗತಿಸಿದರು. ಜಿಲ್ಲಾ ಸಮಿತಿ ಸಹ ಕಾರ್ಯದರ್ಶಿ ಒ.ಬಿ. ರವಿ ವಂದಿಸಿದರು.

ಗಂಗಾವತಿಯಲ್ಲಿ ವಿದ್ಯಾರ್ಥಿಗಳ ಅಧ್ಯಯನ ಶಿಬಿರ

11 ನೇ ಜೂನ್ 93 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕೋಮು-ಸೌಹಾರ್ದತೆ ಮತ್ತು ಶಿಕ್ಷಣ ಉಳಿವಿಗಾಗಿ ಅಧ್ಯಯನ ಶಿಬಿರವನ್ನು ಗಂಗಾವತಿ ತಾಲೂಕು ಕಂದಾಯ ಭವನದಲ್ಲಿ ಏರ್ಪಡಿಸಲಾಗಿತ್ತು. ಧ್ವಜಾರೋಹಣವನ್ನು ಶ್ರೀಕಾಂ. ಪ್ರಭುಗೌಡ ಪಾಟೀಲ ಎಸ್.ಎಫ್.ಐ. ಜಿಲ್ಲಾಧ್ಯಕ್ಷ ನೆರವೇರಿಸಿದರು ಹಾಗೂ ಶಿಬಿರದ ಉದ್ಘಾಟನೆಯನ್ನು ಕಾಂ. ಪ್ರಕಾಶ್ ಕೆ.ಎಸ್. ಆರ್.ಟಿ.ಸಿ. ನೌಕರರ ಕಾರ್ಯದರ್ಶಿ ನೆರವೇರಿಸಿದರು. ಈ ದೇಶದಲ್ಲಿ ಜಾತಿ ಆಧಾರದ ಮೇಲೆ ಮುಗ್ಧ ಜೀವಿಗಳನ್ನು ಬಲಿ ತೆಗೆದುಕೊಳ್ಳುವ ಶಕ್ತಿಗಳ ವಿರುದ್ಧ ಇಡೀ ಜನತೆಗೆ ಮನವರಿಕೆ ಆಗುವ ರೀತಿಯಲ್ಲಿ ತಿಳಿಸುವ ಗುರುತರ ಜವಾಬ್ದಾರಿಯು ವಿದ್ಯಾರ್ಥಿ, ಯುವಜನತೆಯ ಮೇಲಿದೆ ಎಂದು ಹೇಳಿದರು. ಅದೇ ರೀತಿಯಾಗಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಾಂ. ಕೆ. ಪ್ರಕಾಶ ಕರ್ನಾಟಕ ರಾಜ್ಯ ಎಸ್.ಎಫ್.ಐ. ಸಹ ಕಾರ್ಯದರ್ಶಿ ಇವರು ಮಾತನಾಡುತ್ತಾ, ಕರ್ನಾಟಕದಲ್ಲಿ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಬೀದಿಪಾಲು ಮಾಡುವ ರೀತಿಯಲ್ಲಿದೆ. ಕೇಂದ್ರ ಸರ್ಕಾರ ಐ.ಎಂ.ಎಫ್. ಷರತ್ತುಗಳಿಗೆ ಒಪ್ಪಿ ಹಣ ತಂದು, ಆ ಹಣವನ್ನು ಪೋಲು ಮಾಡುವುದನ್ನು ನಿಲ್ಲಿಸಬೇಕು ಮತ್ತು ಪಿಯುಸಿ ಮಂಡಳಿಯು ಶುಲ್ಕವನ್ನು 50 ರಿಂದ 100 ರೂಪಾಯಿಗಳಿಗೆ ಹೆಚ್ಚಿಸಿದೆ. ಇದರ ವಿರುದ್ಧ ವಿದ್ಯಾರ್ಥಿಗಳು ಹಾಗೂ ಪಾಲಕರು ತಕ್ಷಣವೇ ಹೋರಾಟವನ್ನು ನಡೆಸಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಡಿ.ವೈ.ಎಫ್.ಐ. ತಾಲೂಕು ಉಪಾಧ್ಯಕ್ಷರಾದ ತಿಮ್ಮಪ್ಪ ವಜ್ರದಂಡಿ ಇವರು ಮಾತನಾಡುತ್ತಾ, ಯುವ ಜನ, ವಿದ್ಯಾರ್ಥಿಗಳು ಕೂಡಿ ಶೈಕ್ಷಣಿಕ ಮತ್ತು ನಿರುದ್ಯೋಗದ ಸಮಸ್ಯೆಗಳ ವಿರುದ್ಧವಾಗಿ ಹೋರಾಟ ಮಾಡಬೇಕೆಂದು ಮತ್ತು 1992 ಡಿಸೆಂಬರ್ 6 ರ ಅಯೋಧ್ಯಾ ಘಟನೆಯಿಂದ ಬಿಜೆಪಿ ತನ್ನ ರಾಜಕೀಯ ಲಾಭಕ್ಕಾಗಿ ಯುವ ಜನತೆಯನ್ನು ಕೊಲೆ ಮಾಡಿದೆ. ಇಂತಹ ಕೋಮುವಾದಿ ಪಕ್ಷದ ವಿರುದ್ಧ ಹೋರಾಟ ಮಾಡಬೇಕೆಂದು ತಿಳಿಸಿದರು.

ಸೆಪ್ಟೆಂಬರ್ 9 ರ "ಭಾರತ್ ಬಂದ್ "

ಯಶಸ್ವಿಗೊಳಿಸಲು ಉಡುಪಿ ಸಮಾವೇಶದ ನಿರ್ಧಾರ

ಉಡುಪಿ : ಕೇಂದ್ರ ಸರ್ಕಾರವು ಅಂತರ್‌ರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕಿನ ಒತ್ತಡಕ್ಕೆ ಮಣಿದಿದ್ದು ಅನುಸರಿಸುತ್ತಿರುವ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿ ನಮ್ಮ ಜನತೆಯ ಬದುಕಿಗೆ ಗಂಡಾಂತರವಾಗುತ್ತಿದೆ ಎಂದು ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಶ್ರೀ ಬಿ. ಮಾಧವ ತಿಳಿಸಿದರು.

ಅವರು ಉಡುಪಿಯ ಸಾಮೂಹಿಕ ಸಂಘಟನೆಗಳ ಕ್ರಿಯಾವೇದಿಕೆಯು ದಿನಾಂಕ 13ನೇ ಜೂನ್ 1993 ರಂದು ಉಡುಪಿಯ ಸತ್ಯಮೂರ್ತಿ ಸಭಾ ಭವನದಲ್ಲಿ ಏರ್ಪಡಿಸಲಾದ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸರಕಾರದ ಇಂದಿನ ನೀತಿಗಳಿಂದಾಗಿ ಕಾರ್ಮಿಕರ ಮತ್ತು ದುಡಿಯುವ ಜನರ ಮೇಲೆ ಯಾವ ರೀತಿಯ ಹೊರೆಗಳು ಬೀಳಲಿವೆ ದೇಶದ ಸ್ವಾತಂತ್ರ್ಯ ಮತ್ತು ಸಮಗ್ರತೆಗೆ ಗಂಡಾಂತರ ಕಾರಿಯಾದ ನೀತಿಗಳಿಂದಾಗಿ ರೂಪಾಯಿಯ ಅಪಮೌಲ್ಯವೂ ಸೇರಿದಂತೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಿಸಿ ನಮ್ಮ ಇಡೀ ಅರ್ಥವ್ಯವಸ್ಥೆಯನ್ನು ಹೇಗೆ ಸಾಲದ ದೋಣಿನೊಳಗೆ ದೂಡಲಾಗಿದೆ ಎಂಬುದನ್ನು ವಿವರಿಸಿದರು.

ಏಪ್ರಿಲ್ 15 ರ ನವದೆಹಲಿ ಸಮಾವೇಶದ ಬೇಡಿಕೆಗಳಾದ ಕಾರ್ಖಾನೆಗಳ ಮುಚ್ಚುವಿಕೆಯನ್ನು ನಿಲ್ಲಿಸಬೇಕು. ಸಾರ್ವಜನಿಕ ರಂಗದ ಖಾಸಗೀಕರಣ ನೀತಿ ಕೈಬಿಡಬೇಕು. ಕೃಷಿ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಹೆಚ್ಚಿಸುವ ಕೇಂದ್ರ ಶಾಸನ ಜಾರಿಗೊಳಿಸಬೇಕು.

ರಾಷ್ಟ್ರ ವಿರೋಧಿಯಾದ ಡಂಕೆಲ್ ಪ್ರಸ್ತಾವಗಳನ್ನು ತಿರಸ್ಕರಿಸಬೇಕು. ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿ ಅವರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಬೇಕು. ಭೂ ವಿತರಣೆಯನ್ನು ಮಾಡುವಾಗ ಗಂಡ ಹೆಂಡತಿ ಇಬ್ಬರ ಹೆಸರಲ್ಲಿ ಪಟ್ಟಾ ನೀಡಬೇಕು. ತೀವ್ರ ಸ್ವರೂಪದ ಭೂ ಸುಧಾರಣೆ ಜಾರಿಗೆ ತಂದು ಭೂಮಿಯನ್ನು ಭೂರಹಿತರಿಗೆ ವಿತರಣೆ ಮಾಡಬೇಕು. ರಸಗೊಬ್ಬರ ಸಬ್ಸಿಡಿಯನ್ನು ಮತ್ತೆ ನೀಡುವಂತಾಗಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು. ಸರಕಾರವೇ ಬೆಲೆ ಏರಿಕೆ ಮಾಡಿರುವುದನ್ನು ಕಡಿಮೆಮಾಡಬೇಕು. ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕಿನ ನಿರ್ಬಂಧಕ್ಕೆ ಒಳಗಾಗಿ ತಂದಿರುವ ಹೊಸ ಆರ್ಥಿಕ ನೀತಿ, ಕೈಗಾರಿಕಾ ನೀತಿಗಳನ್ನು ರದ್ದುಪಡಿಸಬೇಕು. ಮತ, ಧರ್ಮವನ್ನು ರಾಜಕೀಯ ಉದ್ದೇಶಗಳಿಗೆ ದುರ್ಬಳಕೆ ಮಾಡುವ ಕೋಮುವಾರು ಮತಾಂಧ ಪ್ರಚಾರಕರನ್ನು ನಿಷೇಧಿಸಬೇಕು ಎಂದು ಬೇಡಿಕೆಗಳನ್ನು ಬೆಂಬಲಿಸಲಾಯಿತು.

ಸಮಾವೇಶದ ಅಧ್ಯಕ್ಷತೆಯನ್ನು ವಿಮಾ ನೌಕರ ಸಂಘದ ಶ್ರೀ ಬಿ. ವಿ. ಆರ್. ಕಾಮತರು ವಹಿಸಿದ್ದರು. ಎ.ಐ.ಟಿ.ಯು.ಸಿ ಶ್ರೀ ಶಂಕರ ಸೆಟ್ಟಿಗಾರರು ಮಾತನಾಡಿದರು. ಪ್ರಾರಂಭದಲ್ಲಿ ಶ್ರೀ ಬಿ. ಮೋನಪ್ಪ ಸಾಲಿಯಾನರು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಡೇವಿಡ್ ಕರ್ಕಡ ಧನ್ಯವಾದಸಲ್ಲಿಸಿದರು.

ಈರಪ್ಪಾ ಮೋದಿಯವರ ನಿಧನಕ್ಕೆ ವಿಜಾಪುರ ಡಿ.ವೈ.ಎಫ್.ಐ ಶೋಕ

ಜಿಲ್ಲೆಯ ಜನಪ್ರಿಯ ಯುವಜನ ಮುಖಂಡ ಸದಾನಂದ ಮೋದಿಯವರ ತಂದೆಯವರಾದ ಶ್ರೀಯುತ ಈರಪ್ಪಾ ಮೋದಿಯವರು ಅನೇಕ ತಿಂಗಳುಗಳಿಂದ ರೋಗದಿಂದ ಬಳಲುತ್ತಿದ್ದರು. ದಿನಾಂಕ 12 ನೇ ಜೂನ್ 1993 ರಂದು ನಿಧನಾರಾಗಿದರು. ಅವರ ನಿಧನಕ್ಕೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ. ಎಫ್.ಐ) ಬಿಜಾಪುರ ಜಿಲ್ಲಾ ಘಟಕವು ತೀವ್ರ ಸಂತಾಪ ವ್ಯಕ್ತಪಡಿಸಿದೆಯೆಂದು ಜಿಲ್ಲಾ ಅಧ್ಯಕ್ಷರಾದ ಕಾಂ. ಮುನ್ನಸಾಬ ಕಲಾದಗಿ ಸಹಕಾರ್ಯದರ್ಶಿ ಎಮ್.ಎ. ಮೊಕಾಶಿಯವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಶ್ವಸಂಸ್ಥೆ-ಶಾಂತಿಪಾಲಕನೋ ಹಸ್ತಕ್ಷೇಪಕಾರನೋ



ವಿಶ್ವಸಂಸ್ಥೆಯ ಶಾಂತಿಪಾಲನಾ ಪಾತ್ರ ಹೆಚ್ಚೆಚ್ಚು ವಿವಾದಾಸ್ಪದವಾಗುತ್ತಿದೆ. ಶಾಂತಿ ಪಾಲನಾ ಪಾತ್ರವೋ, ದೇಶಗಳ ಆಂತರಿಕ ಕಲಹಗಳಲ್ಲಿ ಹಸ್ತಕ್ಷೇಪವೋ ಎಂಬ ಸಂದೇಹಕ್ಕೆಡೆಗೊಡುತ್ತಿದೆ. ಸೋಮಾಲಿಯಾದಲ್ಲಿ ಕಳೆದ ವಾರ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಯ 28 ಸೈನಿಕರು, ಅವರ ಮೇಲೆ ನಡೆದ ದಾಳಿಯಲ್ಲಿ ಸತ್ತಿದ್ದರು. ಈ ಸೈನಿಕರು ಪಾಕಿಸ್ತಾನಕ್ಕೆ ಸೇರಿದವರಾಗಿದ್ದರು. ಪಾಕಿಸ್ತಾನದ ಸೈನಿಕರ ಮೇಲೆ ದಾಳಿ ನಡೆಸಿದವರ ಮೇಲೆ ಪ್ರತಿದಾಳಿ ನಡೆಸಬೇಕೆಂದಿತ್ತು. ಇದನ್ನು ಭದ್ರತಾ ಸಮಿತಿ ಅನುಮೋದಿಸಿತ್ತು. ಇದಕ್ಕಾಗಿ ಅಮೇರಿಕನ್ ಪಡೆಗಳನ್ನು ಬಳಸಲು ಅಧ್ಯಕ್ಷ ಕ್ಲಿಂಟನ್ ನಿರ್ಧರಿಸಿದ್ದರು. ಭದ್ರತಾ ಸಮಿತಿ ನಿರ್ಣಯ ಉಪಚಾರಕ್ಕೆ ಮಾತ್ರ.

ವಿಶ್ವಸಂಸ್ಥೆ ಪಡೆಗಳ ಮೇಲೆ ದಾಳಿ ನಡೆಸಿದ್ದಾಗಿ ಸೋಮಾಲಿಯಾದ ಯಾವುದೇ ಗೆರಿಲ್ಲಾ ಗುಂಪು ಹೇಳಿಕೊಂಡಿಲ್ಲ. ಆದರೂ ಅಮೇರಿಕಾ, ಈ ದಾಳಿ ನಡೆಸಿದ್ದು ಜನರಲ್ ಅದೀದ್‌ನ ಗುಂಪು ಎಂದು ಏಕಪಕ್ಷೀಯವಾಗಿ ನಿರ್ಧರಿಸಿದೆ. ಜನರಲ್ ಅದೀದ್‌ನ ಗುಂಪು ಈ ಆಪಾದನೆಯನ್ನು ನಿರಾಕರಿಸಿದ್ದರೂ ಕೂಡಾ.

ಆದ್ದರಿಂದ ಅದೀದ್‌ನ ಪಡೆಗಳ ಮೇಲೆ ವಿಮಾನ ದಾಳಿ ಮಾಡಲು ವಿಶ್ವಸಂಸ್ಥೆಯ ಹೆಸರಿನಲ್ಲಿ ಅಮೇರಿಕ ನಿರ್ಧರಿಸಿದೆ. 3-4 ದಿನಗಳ ಸತತ ದಾಳಿ ನಡೆಸಿದೆ. ಜನರಲ್ ಅದೀದ್‌ನ ವಶದಲ್ಲಿರುವ ಮೊಗದಿಶುನ ಪ್ರದೇಶವನ್ನು ಸ್ಮಶಾನವಾಗಿಸಿದೆ. ಗುಡಾಣದ ಮೇಲೆ ದಾಳಿ ಮಾಡುತ್ತಿದ್ದೇವೆ ಎಂದು ಅಮೇರಿಕನ್ ಪಡೆಗಳು ಹೇಳಿಕೊಂಡಿದ್ದರೂ ಆ ಪ್ರದೇಶದಲ್ಲಿ ಕೆಲವು ವಾಹನಗಳು ಬಿಟ್ಟರೆ, ಯಾವ ಶಸ್ತ್ರಾಸ್ತ್ರಗಳು ಇರುವ ಬಗ್ಗೆ ವರದಿಯಾಗಿಲ್ಲ.

ವಿಶ್ವಸಂಸ್ಥೆಯ ಹೆಸರಲ್ಲಿ ಅಮೇರಿಕನ್ ಪಡೆಗಳ ಸತತ ದಾಳಿಯಿಂದ ಮೊಗದಿಶುವಿನ ನಾಗರಿಕರು ರೊಚ್ಚಿಗೆದ್ದಿದ್ದಾರೆ. ಈ ದಾಳಿಯ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ನಿಶಸ್ತ್ರರಾದ ಸುಮಾರು ಎರಡು ಸಾವಿರ ನಾಗರಿಕರು ಹೊಡೆಲೊಟೆರ ಬಳಿ ಬಂದಾಗ ವಿಶ್ವಸಂಸ್ಥೆಯ ಪಾಕಿಸ್ತಾನೀ ಪಡೆಗಳು ಅವರ ಮೇಲೆ ಗುಂಡಿನ ಸುರಿಮಳೆಗೈದರು. ಈ ಘಟನೆಯಲ್ಲಿ 20 ರಿಂದ 30 ಜನ ಸತ್ತಿದ್ದಾರೆ ಎಂದು ತಿಳಿದು ಬಂದಿದೆ. ಇದರಿಂದ ಸೋಮಾಲಿಯಾದ ಜನ ಇನ್ನಷ್ಟು ಹೆಚ್ಚು ರೊಚ್ಚಿಗೆದ್ದು ವಿಶ್ವಸಂಸ್ಥೆಯ ವಿರುದ್ಧ ದಿನೇ ದಿನೇ ಪ್ರದರ್ಶನಗಳು ನಡೆಯುತ್ತಿವೆ. ಸೋಮಾಲಿಯಾದಲ್ಲಿ ಆಂತರಿಕ ಯುದ್ಧದಿಂದ ತತ್ತರಿಸುತ್ತಿರುವ ಜನರಿಗೆ ಪರಿಹಾರದ ಬದಲು ವಿಶ್ವಸಂಸ್ಥೆ ಪಡೆಗಳು ಸೇಡಿನ ಪ್ರತಿದಾಳಿಗೆ ಇಳಿದಿವೆ. ಈ ದಾಳಿಯನ್ನು ಯುರೋಪಿನ ಹಲವು ದೇಶಗಳು ಖಂಡಿಸಿವೆ. ಇಂತಹ ದಾಳಿ ವಿಶ್ವಸಂಸ್ಥೆಯ ಮೇಲಿನ ವಿಶ್ವಾಸವನ್ನು ಕೆಡಿಸುವುದಾಗಿ ಹೇಳಿವೆ.

ರಶ್ಯಾದಲ್ಲಿ ಕಳ್ಳಭಟ್ಟಿ - ವೋಡ್ಕಾ ರಾಷ್ಟ್ರೀಕರಣ

ಕಳ್ಳಭಟ್ಟಿಯಿಂದಾಗುತ್ತಿರುವ ಅನಾಹುತಗಳನ್ನು ಗಮನಿಸಿ ಸರಕಾರ ವೋಡ್ಕಾ(ರಶ್ಯಾದ ಜನಪ್ರಿಯ ಮದ್ಯ)ದ ಉತ್ಪಾದನೆ ಹಾಗೂ ವಿತರಣೆಯನ್ನು ಸರಕಾರ ವಹಿಸಿಕೊಳ್ಳಬೇಕೆಂದು ನಿರ್ಧರಿಸಿದೆ.

ಕಳೆದ ವರ್ಷದ ಖಾಸಗೀಕರಣದ ಅಂಗವಾಗಿ ವೋಡ್ಕಾದ ಉತ್ಪಾದನೆ ಹಾಗೂ ವಿತರಣೆಯನ್ನು ಖಾಸಗೀಕರಿಸಲಾಗಿತ್ತು. ಆಗಿನಿಂದ ವೋಡ್ಕಾದ ಕಳ್ಳಭಟ್ಟಿ ಆರಂಭವಾಗಿದ್ದು ಹಲವಾರು ಸಾವು ನೋವುಗಳು ಆಗಿವೆ. ವಿದೇಶಗಳಿಂದ ತರಿಸಿದ ಕಲಬೆರಕೆ ಮದ್ಯಗಳು ಖಾಸಗಿ ಅಂಗಡಿಗಳಲ್ಲಿ ಮಾರಾಟವಾಗುತ್ತಿವೆ.

ಮಾರುಕಟ್ಟೆ ಆರ್ಥಿಕತೆ ಮುಕ್ತ ವ್ಯಾಪಾರದ ರಶ್ಯನ್ ಹರಿಕಾರ ಯೆಲ್ಟ್‌ಸಿನ್ ವೋಡ್ಕಾ ರಾಷ್ಟ್ರೀಕರಣ ಸುಗ್ರೀವಾಜ್ಞೆಗೆ ಸದ್ಯದಲ್ಲೇ ಸಹಿ ಹಾಕಲಿದ್ದಾರೆ. ಖಾಸಗೀಕರಣದ ಭೋ ಪರಾಕು ಹೇಳುವವರೇ ಗಮನಿಸಿ.

ಸ್ಪೇನ್‌ನಲ್ಲಿ ಸೋಶಲಿಸ್ಟ್ ಸರಕಾರ

ಸ್ಪೇನ್ ಪಾರ್ಲಿಮೆಂಟಿಗೆ ನಡೆದ ಇತ್ತೀಚಿನ ಚುನಾವಣೆಯಲ್ಲಿ ಸೋಶಲಿಸ್ಟರ ಸ್ಥಾನಗಳ ಸಂಖ್ಯೆ ಕಡಿಮೆಯಾಗಿ ಬಹುಮತ ಬರದಿದ್ದರೂ, ಅತೀ ದೊಡ್ಡ ಪಕ್ಷವಾಗಿ ಸರಕಾರ ರಚಿಸುವ ಹಾದಿಯಲ್ಲಿದೆ. 350 ಸದಸ್ಯರ ಪಾರ್ಲಿಮೆಂಟಿನಲ್ಲಿ ಸೋಶಲಿಸ್ಟ್ ಪಕ್ಷ 159 ಸೀಟು ಗಳಿಸಿದೆ. ಇದು ಕಳೆದ ಬಾರಿ ಗಳಿಸಿದ 175ಕ್ಕಿಂತ ಬಹಳ ಕಡಿಮೆ. ಪಕ್ಷ ಶೇಕಡಾ 39 ಮತ ಗಳಿಸಿ ನಾಲ್ಕನೇ ಬಾರಿ ಅಧಿಕಾರಕ್ಕೆ ಬಂದಿದೆ.

ವಿರೋಧ ಪಕ್ಷ ಪಾಪ್ಯುಲರ್ ಪಾರ್ಟಿ ಈ ಬಾರಿ ಆಳುವ ಪಕ್ಷಕ್ಕೆ ತೀವ್ರ ಸವಾಲೊಡ್ಡಿದ್ದು ಶೇ. 34.4 ಮತಗಳಿಸಿ 139 ಸೀಟು ಗಳಿಸಿದೆ. ಸೋಶಲಿಸ್ಟರಿಗೆ ಬಹುಮತವಿಲ್ಲದ್ದರಿಂದ ಅಲ್ಪಸಂಖ್ಯಾತ ಸರಕಾರ ರಚಿಸುವ ಸಾಧ್ಯತೆ ಇದೆ. ಇಲ್ಲವೆ 17 ಸೀಟು ಗಳಿಸಿರುವ ಸ್ಥಳೀಯ ಕ್ಯಾಟಲಾನ್ ಪಕ್ಷದೊಂದಿಗೆ ಸಮ್ಮಿಶ್ರ ಸರಕಾರ ರಚಿಸುವ ಸಾಧ್ಯತೆ ಇದೆ.

ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿರುವ ಸಂಯುಕ್ತ ಎಡರಂಗ ಶೇಕಡಾ 9.4 ಮತ ಗಳಿಸಿದೆ. ಹಾಗೂ 19 ಸೀಟು ಗಳಿಸಿದೆ. ಬಂಡವಾಳಶಾಹಿ-ಪರ ಸುಧಾರಣಾವಾದಿ ನೀತಿ ಅನುಸರಿಸುತ್ತಿರುವ ಸೋಶಲಿಸ್ಟ್ ಪಕ್ಷದೊಂದಿಗೆ ಚುನಾವಣೆಯಲ್ಲೂ ಅಮೇರಿಕಾ ಕೂಟ ರಚಿಸಲು ನಿರಾಕರಿಸಿದೆ. ಮೂರು ಅವಧಿಯಿಂದ ಅಧಿಕಾರದಲ್ಲಿರುವ ಸೋಶಲಿಸ್ಟ್ ಸರಕಾರದ ಮೇಲೆ ಆರ್ಥಿಕ ದುರ್ವ್ಯವಸ್ಥೆ ಭ್ರಷ್ಟಾಚಾರದ ತೀವ್ರ ಆಪಾದನೆಗಳಿದ್ದವು.

ಅಣ್ವಸ್ತ್ರ ಒಪ್ಪಂದದಿಂದ ಹಿಂತೆಗೆತ ಸ್ಥಗಿತ

ಈ ಹಿಂದೆ ಉತ್ತರ ಕೊರಿಯಾ ಅಣ್ವಸ್ತ್ರ ಪ್ರಸಾರ ನಿಷೇಧ ಒಪ್ಪಂದಕ್ಕೆ ಅನುಮತಿ ನೀಡಿತ್ತು. ಆ ಮೇಲೆ ಅಂತರ್‌ರಾಷ್ಟ್ರೀಯತೆಗೆ ಧಕ್ಕೆ ತರುವ ವರ್ತನೆಯಿಂದ ರೊಚ್ಚಿಗೆದ್ದು ಆ ಒಪ್ಪಂದದಿಂದ ಹಿಂತೆಗೆಯುವ ನಿರ್ಧಾರ ಮಾಡಿತ್ತು. ಅಮೇರಿಕಾದ ಜತೆ ಮಾತುಕತೆಗಳ ನಂತರ ಹಿಂತೆಗೆಯುವ ನಿರ್ಧಾರವನ್ನು ಸದ್ಯಕ್ಕೆ ಸ್ಥಗಿತಗೊಳಿಸಿದೆ.

ಮಾತುಕತೆಗಳಲ್ಲಿ ಸಾರ್ವಭೌಮತೆಗೆ ಗೌರವ ಕೊಡುವ ಹಸ್ತಕ್ಷೇಪ ಮಾಡದಿರುವ ಹಾಗೂ ಅಣ್ವಸ್ತ್ರ ಮತ್ತಿತರ ಅಸ್ತ್ರಗಳಿಂದ ಬಲ ಪ್ರಯೋಗ ಮಾಡದಿರುವ ಆಶ್ವಾಸನೆ ಅಮೇರಿಕ ಕೊಟ್ಟಿದೆ ಎನ್ನಲಾಗಿದೆ.

ಇರಾನ್‌ನಲ್ಲಿ ರಫ್‌ಸಂಜಾನಿ ಪುನಃ ಅಧ್ಯಕ್ಷ

ಇರಾನ್‌ನಲ್ಲಿ ಇತ್ತೀಚೆಗೆ ನಡೆದ ಅಧ್ಯಕ್ಷೀಯ ಚುನಾವಣೆಗಳಲ್ಲಿ ರಫ್‌ಸಂಜಾನಿ ಪುನಃ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಆದರೆ ಅವರಿಗೆ ಬಂದ ಮತ ಬಹಳಷ್ಟು ಕಡಿಮೆಯಾಗಿದೆ. ನಾಲ್ಕು ವರ್ಷಗಳ ಹಿಂದಿನ ಚುನಾವಣೆಯಲ್ಲಿ ಅವರು ಶೇಕಡಾ 95 ರಷ್ಟು ಮತ ಗಳಿಸಿದ್ದರೆ ಈ ಬಾರಿ ಅವರು ಗಳಿಸಿದ್ದ ಮತ ಶೇಕಡಾ 60.

ಇರಾನ್ ಚುನಾವಣೆಯಲ್ಲಿ ರಫ್‌ಸಂಜಾನಿ ಗೆದ್ದು ಸೋತಿದ್ದಾರೆ. ಏಕೆಂದರೆ ಅವರು ಗಳಿಸಿದ ಮತದಲ್ಲಿ ಆದ ತೀವ್ರ ಇಳಿತ. ಇರಾನ್ ಅಧ್ಯಕ್ಷ ಚುನಾವಣೆಯ ಅಭ್ಯರ್ಥಿಗಳನ್ನು ಧಾರ್ಮಿಕ ನಾಯಕರುಗಳ ಕೌನ್ಸಿಲ್ ಆಯ್ಕೆ ಮಾಡುತ್ತದೆ. ರಫ್‌ಸಂಜಾನಿಯ ವಿರುದ್ಧ ಸ್ಪರ್ಧಿಸಿದ್ದ ಅಭ್ಯರ್ಥಿಗಳು ದುರ್ಬಲ ಅಭ್ಯರ್ಥಿಗಳಾಗಿದ್ದರು. ಇದಲ್ಲದೆ ಮತದಾನದ ಸಂಖ್ಯೆಯಲ್ಲಿ ಆದ ತೀವ್ರ ಇಳಿತ. 14 ವರ್ಷದ ಇಸ್ಲಾಮಿಕ್ ಕ್ರಾಂತಿ ಮೇಲೆ ತೋರಿಸಿರುವ ಅವಿಶ್ವಾಸ ಮತ, ಎಂದು ಅರ್ಥೈಸಲಾಗುತ್ತಿದೆ. ಈ ಬಾರಿ ಮತದಾನ ಶೇಕಡಾ 60ರಷ್ಟಾಗಿತ್ತು. ಶೇಕಡಾ 60 ರಷ್ಟು ಆದ ಮತದಾನದಲ್ಲಿ ಶೇ. 60 ಮತಗಳನ್ನು ಗಳಿಸಿದ ರಫ್‌ಸಂಜಾನಿಯವರ ಜಯ ಇಸ್ಲಾಮಿಕ್ ಕ್ರಾಂತಿಯ ಸೋಲು ಅಲ್ಲದೆ ಇನ್ನೇನಲ್ಲ. ಬಹಿರಂಗವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಕಿರಿಚಾಡುವ ಇಸ್ಲಾಮಿಕ್ ಸರಕಾರ ಗುಟ್ಟಾಗಿ ಪಾಶ್ಚಿಮಾತ್ಯ ದೇಶಗಳೊಂದಿಗೆ ಸಂಬಂಧ ಬೆಳೆಸಲು ಪ್ರಯತ್ನಿಸುತ್ತಿದೆ.

●

ಮನ್ನುಗ್ಗುತ್ತಿರುವ ದೇಶದಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟು

ಜಪಾನಿ ಸರ್ಕಾರ ಪತನ

ಪ್ರಧಾನ ಮಂತ್ರಿ ಕೀಚಿ ಮಿಯೊಜಾವಾರವರ ಸರ್ಕಾರದ ವಿರುದ್ಧ ವಿರೋಧ [illegible]ಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ಜಪಾನಿ ಪಾರ್ಲಿಮೆಂಟು ಅಂಗೀಕರಿಸಿದೆ. ಆಳುವ ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿ (ಎಲ್‌ಡಿಪಿ)ಗೆ 274 ರ ಬಹುಮತ ವಿದ್ದರೂ ಅವಿಶ್ವಾಸ ನಿರ್ಣಯ ಪಾಸಾಗಿದೆ. ವಿರೋಧಪಕ್ಷಗಳ ಒಟ್ಟು ಸಂಖ್ಯೆ 215 ಆಗಿದ್ದರೂ, ಅವಿಶ್ವಾಸ ನಿರ್ಣಯದ ಪರವಾಗಿ 255 ಹಾಗೂ ವಿರುದ್ಧವಾಗಿ 220 ಮತಗಳು ಬಿದ್ದಿದ್ದವು. ಇದು ಸಾಧ್ಯವಾಗಿದ್ದು 39 ಆಳುವಪಕ್ಷ ಎಲ್‌ಡಿಪಿ ಸದಸ್ಯರು ವಿರೋಧ ಪಕ್ಷಗಳ ಅವಿಶ್ವಾಸ ನಿರ್ಣಯಕ್ಕೆ ಮತ ನೀಡಿದ್ದರಿಂದ ಹಾಗೂ 16 ಸದಸ್ಯರು ಮತದಾನದಲ್ಲಿ ಭಾಗವಹಿಸದ್ದರಿಂದ.

ಆಳುವ ಪಕ್ಷ ಎಲ್‌ಡಿಪಿ ಎದುರಿಸುತ್ತಿರುವ ಈ ರಾಜಕೀಯ ಬಿಕ್ಕಟ್ಟು ಅತ್ಯಂತ ತೀವ್ರವಾದದ್ದು. 1955 ರ ನಂತರ ಎರಡನೇ ಬಾರಿಗೆ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವೊಂದಕ್ಕೆ ಜಯವಾಗಿದೆ. ಎಲ್.ಡಿ.ಪಿಯಲ್ಲಿ ಗುಂಪುಗಾರಿಕೆ, ಭಿನ್ನಮತೀಯ ಚಟುವಟಿಕೆ ಹಿಂದಿನಿಂದಲೂ ಸಾಮಾನ್ಯವಾಗಿದ್ದರೂ ವಿರೋಧಪಕ್ಷಗಳ ಅವಿಶ್ವಾಸ ನಿರ್ಣಯಕ್ಕೆ ಮತನೀಡುವಷ್ಟು ದೂರ ಹೋದದ್ದು ಇದೇ ಮೊದಲು.

ಅವಿಶ್ವಾಸ ನಿರ್ಣಯದ ನಂತರ ಪ್ರಧಾನಮಂತ್ರಿಗಳು ಪಾರ್ಲಿಮೆಂಟು ವಿಸರ್ಜನೆಗೆ ಶಿಫಾರಸು ಮಾಡಿದ್ದು ಜುಲೈ 18 ರಂದು ಚುನಾವಣೆಗಳನ್ನು ಘೋಷಿಸಿದ್ದಾರೆ. ಈ ಚುನಾವಣೆ ತಾರೀಖು ಬಹಳ ಗಮನಾರ್ಹವಾಗಿದೆ. ಇದು ಟೋಕಿಯೋದಲ್ಲಿ ನಡೆಯಲಿರುವ ಜಿ-7 ಶೃಂಗಸಭೆ (7 ಅಭಿವೃದ್ಧಿ ಹೊಂದಿದ ದೇಶಗಳ ಗುಂಪು) 9 ದಿನಗಳ ನಂತರ ನಡೆಯಲಿದೆ. ಅದು ಮಾತ್ರವಲ್ಲ ಈ ತಾರೀಕಿಗೆ ಇನ್ನೊಂದು ಮಹತ್ವವಿದೆ. ಭಾರಿ ಭ್ರಷ್ಟಾಚಾರ ಹಾಗೂ ತೆರಿಗೆಗಳ್ಳತನದ ಆಪಾದನೆ ಎದುರಿಸುತ್ತಿರುವ ಪಕ್ಷದ ಮಾಜಿ ಉಪಾಧ್ಯಕ್ಷ ಹಾಗೂ ತೆರೆಮರೆಯಿಂದ ಪ್ರಧಾನಮಂತ್ರಿಗಳನ್ನು ಕುಣಿಸುತ್ತಿದ್ದ ಕಾನೆಮಾರು ವಿರುದ್ಧ ವಿಚಾರಣೆ ಆರಂಭವಾಗುವ 4 ದಿನಗಳ ಮೊದಲು ಚುನಾವಣಾ ತಾರೀಖು ಇದೆ.

ಹೆಚ್ಚು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಂತೆ ಜಪಾನಿನಲ್ಲಿ ಪ್ರಮುಖ ಪಕ್ಷಗಳಿಗೆ ದೊಡ್ಡ ಪ್ರಬಲ ಕಂಪನಿಗಳು ದೊಡ್ಡ ರೀತಿಯಲ್ಲಿ ದಂಡಿಗೆ ಕೊಡುವುದು ಹಾಗೂ ಆಳುವ ಪಕ್ಷಗಳ ನಾಯಕರು ಭ್ರಷ್ಟಾಚಾರದಲ್ಲಿ ತೊಡಗುವುದು ಸರ್ವೇಸಾಮಾನ್ಯವಾಗಿತ್ತು. ಆದರೆ ಕಳೆದ 40 ವರ್ಷಗಳಿಂದ ಸತತವಾಗಿ ಆಳುತ್ತಿರುವ ಎಲ್.ಡಿ.ಪಿ. ಪಕ್ಷದಲ್ಲಿ ಭ್ರಷ್ಟಾಚಾರ ಎಷ್ಟು ತೀವ್ರವಾಗಿದೆಯೆಂದರೆ ಯಾವುದೇ ಪ್ರಮುಖ ನಾಯಕ ಇದರಿಂದ ಮುಸಿಬಳಿಸಿಕೊಳ್ಳದವರು ಇಲ್ಲ. ಗುಂಪುಗಾರಿಕೆ ಸಹ ಇದರ ನೇರ ಫಲ.

ಈಗ ಹೆಚ್ಚುಕಡಿಮೆ ಎಲ್‌ಡಿಪಿ ಪಕ್ಷ ಒಡೆದಿದೆ. 'ಅವಿಶ್ವಾಸ ನಿರ್ಣಯದ ವಿರುದ್ಧ ಮತ ನೀಡಿದವರ ವಿರುದ್ಧ ಯಾವ ಕ್ರಮಕ್ಕೆಗೊಳ್ಳಬೇಕೆಂದು ಪಕ್ಷದ ನಾಯಕತ್ವ ನಿರ್ಧರಿಸಲಾಗದ ಸ್ಥಿತಿಯಲ್ಲಿದೆ. ಈ ನಡುವೆ ಮಾಜಿ ಅರ್ಥಮಂತ್ರಿ ನಾಯಕತ್ವದಲ್ಲಿ 35 ಜನ ಭಿನ್ನಮತೀಯರ ಗುಂಪು ಪಕ್ಷದಿಂದ ಹೊರ ನಡೆದು ಹೊಸ ಪಕ್ಷ ಸ್ಥಾಪಿಸುವ ಪ್ರಯತ್ನ ಮಾಡುತ್ತಿದೆ.

ಕಂಬೋಡಿಯಾದಲ್ಲಿ ತಾತ್ಕಾಲಿಕ ಸರ್ಕಾರಕ್ಕಾಗಿ ಒಪ್ಪಂದ

ಕಂಬೋಡಿಯಾದಲ್ಲಿ ಚುನಾವಣೆ ನಂತರ ರಾಜಕೀಯ ಅನಿಶ್ಚಿತತೆ ಕೊನೆಗೊಂಡು ತಾತ್ಕಾಲಿಕ ಸರ್ಕಾರಕ್ಕಾಗಿ ಪ್ರಮುಖ ಪಕ್ಷಗಳ ನಡುವೆ ಒಪ್ಪಂದವಾಗಿದೆ. ಸಂವಿಧಾನ ರಚಿಸುವ ಕೆಲಸವನ್ನು ಚುನಾಯಿತ 120 ಸದಸ್ಯರ ಸಂವಿಧಾನ ಸಭೆ ಆರಂಭಿಸಿದೆ. ಆಗಸ್ಟ್ 28 ಕ್ಕೆ ವಿಶ್ವಸಂಸ್ಥೆಯ ಪಾತ್ರ ಮುಗಿಯಲಿದ್ದು, ಆ ಹೊತ್ತಿಗೆ ತಾತ್ಕಾಲಿಕ ಸರ್ಕಾರವೊಂದನ್ನು ಫನ್‌ಸಿನ್‌ಪೆಕ್ ಪಕ್ಷ, ಸಿಪಿಪಿ ಪಕ್ಷಗಳು ಜಂಟಿಯಾಗಿ ರಚಿಸಲಿವೆ.

ಮಾಜಿ ರಾಜ ನರೊದಮ್ ಸಿಹನೌಕ್ ಸರ್ಕಾರದ ಮುಖ್ಯಸ್ಥರಾಗಿರುತ್ತಾರೆ. ಫನ್‌ಸಿನ್‌ಪೆಕ್ ಪಕ್ಷದ ಯುವರಾಜ ನರೋದಮ್ ರನರಿದ್ ಹಾಗೂ ಸಿಪಿಪಿ ಪಕ್ಷದ ನಾಯಕ ಪ್ರಸಕ್ತ ಪ್ರಧಾನಿ ಹುನ್ ಸೆನ್ ಉಪಮುಖ್ಯಸ್ಥರಾಗಿರುತ್ತಾರೆ. ಸಂವಿಧಾನ ರಚನೆಯ ಕಾರ್ಯದ ನಂತರ ಈ ವ್ಯವಸ್ಥೆ ಜಾರಿಗೆ ಬರುತ್ತದೆ.

ಇದಕ್ಕಿಂತ ಮೊದಲು ಅಧ್ಯಕ್ಷ ಸಿಹನೌಕ್‌ರ ಇನ್ನೊಬ್ಬ ಮಗ ಯುವರಾಜ ನರೋದಮ ಚಕ್ರಪೊಂಗ್ ನಾಯಕತ್ವದಲ್ಲಿ ಕಂಬೋಡಿಯಾದ 7 ಪ್ರಾಂತಗಳು ಪ್ರತ್ಯೇಕವಾಗುತ್ತವೆ ಎಂದು ಘೋಷಿಸಲಾಗಿತ್ತು.

ಆದರೆ ಸರ್ಕಾರ ಪುನಃ ತನ್ನ ಅಧಿಕಾರವನ್ನು ಸ್ಥಾಪಿಸುತ್ತಿದ್ದಂತೆ ಚಕ್ರಪೊಂಗ್ ಕಂಬೋಡಿಯಾ ಬಿಟ್ಟು ಹೋಗಿದ್ದಾರೆ ಎಂದು ವರದಿಯಾಗಿದೆ.

ಸಂವಿಧಾನಸಭೆ ಅಧ್ಯಕ್ಷ ಸಿಹನೌಕ್‌ರವರಿಗೆ ಹಲವಾರು ವಿಶೇಷ ಅಧಿಕಾರಿಗಳನ್ನು ನೀಡಿದೆ. ಕಂಬೋಡಿಯಾದ ಐಕ್ಯತೆ ಉಳಿಸಿಕೊಳ್ಳಲು ಇಂತಹ ಅಧಿಕಾರಗಳು ಅಗತ್ಯವೆಂದಿದೆ.

ವಿಶ್ವಸಂಸ್ಥೆಯ ಇನ್ನೊಂದು ಹಾಸ್ಯಾಸ್ಪದ ಕಾರ್ಯಾಚರಣೆ

ಸೋಮಾಲಿಯಾದಲ್ಲಿ ವಿಶ್ವಸಂಸ್ಥೆಯ ಹೆಸರಿನಲ್ಲಿ ಅಮೇರಿಕ ನಡೆಸಿದ ಸೈನಿಕ ಕಾರ್ಯಾಚರಣೆಯ ಮೂಲಕ ಅದಕ್ಕೆ ತೀವ್ರ ಮುಖಭಂಗವಾಗಿದೆ. ನಾಲ್ಕೈದು ದಿನಗಳ ಕಾಲ ನಡೆದ ವಿಮಾನ ಪಡೆಗಳಿಂದ ಬಾಂಬುದಾಳಿ ಇತ್ಯಾದಿಗಳ ಕೊನೆಯಲ್ಲಿ, ಇಡೀ ಕಾರ್ಯಾಚರಣೆಯ ಉದ್ದೇಶವೇನು ಎಂದು ಎಲ್ಲರೂ ಕೇಳುವಂತಾಗಿದೆ.

ಜನರಲ್ ಅದೀದ್ ಮೊಗದಿಶ್‌ನ ಮನೆ ಹಾಗೂ ಸುತ್ತಮುತ್ತ ಪ್ರದೇಶದಲ್ಲಿ ಭಾರೀ ಬಾಂಬುದಾಳಿ ನಡೆಸಿದ ವಿಶ್ವಸಂಸ್ಥೆ ಪಡೆಗಳಿಂದ ತೀವ್ರ ಹಾನಿಯಾಗಿದೆ. 60 ಕ್ಕೂ ಹೆಚ್ಚು ಜನರು ಸತ್ತಿದ್ದಾರೆ ಎನ್ನಲಾಗಿದೆ. ಅಮೇರಿಕದ ಉದ್ದೇಶ ವಿದ್ದುದ್ದು ಜನರಲ್ ಅದೀದ್‌ನನ್ನು ಸೆರೆಹಿಡಿಯುವುದು ಎನ್ನಲಾಗಿದೆ. ಆದರೆ ಬಾಂಬುದಾಳಿನಂತರ ಆ ಪ್ರದೇಶವನ್ನು ಹಾಗೂ ಅವರ ಮನೆಯನ್ನು ಸುತ್ತುವರಿದಿರುವ ಸೈನಿಕರಿಗೆ ಏನು ಮಾಡಲಾಗಿಲ್ಲ. ಜನರಲ್ ಅದೀದ್ ಕಾರ್ಯಾಚರಣೆ ಆರಂಭವಾಗುವ ಮೊದಲೇ ಮರೆಯಾಗಿದ್ದರು ಎನ್ನಲಾಗಿದೆ. ಮುಖಭಂಗದಿಂದ ತಪ್ಪಿಸಿಕೊಳ್ಳಲು ಅಧ್ಯಕ್ಷ ಕ್ಲಿಂಟನ್ ಕಾರ್ಯಾಚರಣೆ ಸಫಲವಾಗಿದೆ ಎಂದು ಹೇಳಿಕೊಂಡಿದ್ದಾರೆ. ಜನರಲ್ ಅದೀದ್‌ರ ಮನೆ ಹಾಗೂ ಆ ಪ್ರದೇಶವನ್ನು ನಿರ್ನಾಮ ಮಾಡಿ, 60 ಕ್ಕೂ ಹೆಚ್ಚು ಜನರನ್ನು ಕೊಲ್ಲುವುದು ಉದ್ದೇಶವಾಗಿದ್ದರೆ ಮಾತ್ರ ಕಾರ್ಯಾಚರಣೆ ಸಫಲವಾಗಿದೆ ಎನ್ನಬಹುದು. ಆದರೆ ಈ ಕಾರ್ಯಾಚರಣೆ ಬರೇ ಪ್ರತೀಕಾರದ ಕ್ರಮ, ಅಮೇರಿಕದ ತೋಳ್ಬಲ ಪ್ರದರ್ಶಿಸುವ ಕ್ರಮ. ಇದರಿಂದ ವಿಶ್ವಸಂಸ್ಥೆಯ ಬಗ್ಗೆ ವಿಶ್ವಾಸ, ಗೌರವವನ್ನು ಸೋಮಾಲಿಯಾ ಜನ ಕಳೆದುಕೊಂಡಿದ್ದಾರೆ. ಇದರಿಂದ ಸೋಮಾಲಿಯಾದ ಸಮಸ್ಯೆಗಳು ಉಲ್ಬಣಗೊಳ್ಳಲಿವೆ.

●

ನೇಪಾಳಿ ಕಮ್ಯುನಿಸ್ಟ್ ನಾಯಕರ ಕೊಲೆ ಪಿತೂರಿಗಾರರು ಯಾರು?

ಇದುವರೆಗೆ ಅಪಘಾತದಿಂದ ಎಂದು ತಿಳಿಯಲಾಗಿದ್ದ ನೇಪಾಳಿ ಕಮ್ಯುನಿಸ್ಟ್ ನಾಯಕರ ಸಾವು ವಿಷಪೂರಿತವಾಗಿಯೂ ಕೊಲೆ ಎಂದು ಹಲವು ತನಿಖಾ ವರದಿಗಳಿಂದ ಸ್ಪಷ್ಟವಾಗುತ್ತಿದೆ.

ಕೊಲೆಗಾರ ಜೀಪ್ ಡ್ರೈವರ್‌ನೇ ಎಂದೂ ಹೆಚ್ಚು ಕಡಿಮೆ ಸಿದ್ಧವಾಗಿದೆ.

ನೇಪಾಳಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮದನ್ ಭಂಡಾರಿ ಹಾಗೂ ಪೊಲಿಟ್ ಬ್ಯೂರೋ ಸದಸ್ಯ ಜೀವರಾಜ್ ಆಶ್ರಿತ್ ಸಂಶಯಾಸ್ಪದ ರೀತಿಯಲ್ಲಿ ಅಪಘಾತದಿಂದ ಸತ್ತಿದ್ದರು ಎಂದು ಹಿಂದೆ ವರದಿಯಾಗಿತ್ತು. ಈ ಬಗ್ಗೆ ನೇಪಾಳ ಸರಕಾರವಲ್ಲದೆ ಕಮ್ಯುನಿಸ್ಟ್ ಪಕ್ಷ ಹಾಗೂ ನೇಪಾಳಿ ಮಾನವಹಕ್ಕುಗಳ ಕಮಿಷನ್ ತಮ್ಮ ಪ್ರತ್ಯೇಕ ತನಿಖಾ ಸಮಿತಿಗಳನ್ನು ನೇಮಿಸಿದ್ದರು.

ಡ್ರೈವರ್ ಅಮರ್‌ಲಾಮಾನ ಹೇಳಿಕೆ ಹಲವಾರು ವಿರೋಧಾಭಾಸಗಳಿಂದ ಕೂಡಿತ್ತು ಎಂದು ತನಿಖಾ ವರದಿಗಳು ತಿಳಿಸಿವೆ. ಅವನ ಪ್ರಕಾರ ಜೀಪ್‌ನ ಡೋರ್ ಕಿತ್ತುಹೋಗಿ ಒಳಗಿದ್ದ ಮದನ್ ಜತೆ ನದಿಗೆ ಬಿತ್ತು. ತನಗೂ ಎದೆ ಹಾಗೂ ಬೆನ್ನಿನಲ್ಲಿ ತೀವ್ರ ಗಾಯಗಳಾಗಿವೆ ಎಂದಿದ್ದ. ಆದರೆ ವೈದ್ಯಕೀಯ ವರದಿಗಳ ಪ್ರಕಾರ ಆತನಿಗೆ ಯಾವುದೇ ಪ್ರಕಾರದ ಗಾಯಗಳಾಗಿದ್ದು ಕಂಡು ಬಂದಿಲ್ಲ. ಅಲ್ಲದೆ ಜೀಪ್‌ನ ತಪಾಸಣೆ ನಡೆಸಿದಾಗಲೂ ಅದರ ಡೋರ್ ಕಿತ್ತು ಹೋದದ್ದು ಕಂಡು ಬಂದಿಲ್ಲ. ಅಪಘಾತದ ನಂತರ ಆತ ನಾರಾಯಣಘಾಟ್‌ನಲ್ಲಿ ಊಟ ಮಾಡಲು ಕೊಟ್ಟ ನೋಟುಗಳು ಒದ್ದೆಯೂ ಆಗಿರಲಿಲ್ಲ. ತಾನು ಅಪಘಾತದಲ್ಲಿ ನದಿಗೆ ಬಿದ್ದಿದ್ದು ಎಷ್ಟೋ ಕಷ್ಟದಿಂದ ಬದುಕಿ ಬಂದೆ ಎಂದು ಹೇಳಿದ್ದಕ್ಕೆ ಏನೂ ಆಧಾರ ಕಂಡುಬಂದಿಲ್ಲ. ಒಬ್ಬ ಪ್ರತ್ಯಕ್ಷದರ್ಶಿ ಅಪಘಾತದ ಸಮಯದಲ್ಲಿ ಡ್ರೈವರ್ ದಡದ ಬಂಡೆಯ ಹತ್ತಿರವೇ ನಿಂತಿದ್ದು ನೋಡಿದ್ದಾನಂತೆ.

ಡ್ರೈವರ್ ಅಮರ್ ಲಾಮಾ ಪಕ್ಷದ ಸದಸ್ಯನಾಗಿದ್ದರೂ ಒಂದು ತಿಂಗಳ ರಜೆಯ ನಂತರ ಆತ ಕೆಲಸಕ್ಕೆ ಹಾಜರಾಗಿದ್ದ. ಕಳೆದ ಆರು ತಿಂಗಳಲ್ಲಿ ವಿಚಿತ್ರವಾಗಿ ವರ್ತಿಸುತ್ತಿದ್ದ ಎಂದು ಹೇಳಲಾಗಿದೆ. ಆತ ಈಗ ಜೈಲಿನಲ್ಲಿದ್ದಾನೆ.

ಕೊಲೆಗಾರ ಅಮರ್‌ಲಾಮಾ ಎಂದು ಹೆಚ್ಚು ಕಡಿಮೆ ಸಿದ್ಧವಾಗಿದೆ. ಆದರೆ ಕೊಲೆಯ ಹಿಂದೆ [illegible] ಮಾಡಿದವರು ಯಾರು? ಆತನನ್ನು ಕೊಲೆಗೆ ಪ್ರೇರೇಪಿಸಿದವರು ಯಾರು? ಇದು ತಮ್ಮ ನೆಚ್ಚಿನ ನಾಯಕರನ್ನು ಕಳೆದುಕೊಂಡಿರುವ ನೇಪಾಳದ ದುಡಿಯುವ ಜನತೆ ಕೇಳುತ್ತಿರುವ ಪ್ರಶ್ನೆ.

KRNM/BGS-405 MAG(2) PRB DECR 319-78/79

ಜುಲೈ 14 ರ ಮುಷ್ಕರದ ದಾರಿಯಲ್ಲಿ

ಅಸಂಘಟಿತ ಕಾರ್ಮಿಕರಿಗೆ ಅಸಂಖ್ಯಾತ ಅನ್ಯಾಯಗಳು

- ವಿ.ಜಿ.ಕೆ. ನಾಯರ್

ಅಸಂಘಟಿತ ವಲಯಗಳ ಕಾರ್ಮಿಕರ ಹೋರಾಟ ಮೈಗೂಡಿಸಿಕೊಳ್ಳುತ್ತಿದೆ. ಬೆಂಗಳೂರಿನಲ್ಲೂ, ಮಂಗಳೂರಿನಲ್ಲೂ ಚಟುವಟಿಕೆಗಳು ಆರಂಭವಾಗಿವೆ. ಒಂದು ಲಕ್ಷ ಕಾರ್ಮಿಕರಿಂದ ಸಹಿ ಸಂಗ್ರಹಿಸುವ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ನಿನ ಕರೆ ಜ್ಯಾರಿಯಾಗುತ್ತಿದೆ. ಬೆಂಗಳೂರು ಜಿಲ್ಲಾ ಸಮಿತಿಯ ಮುತುವರ್ಜಿಯಿಂದ ಕೆಲವು ಪ್ರದೇಶಗಳಲ್ಲಿ ಸಹಿ ಸಂಗ್ರಹಣಾ ಆಂದೋಲನ ಭರದಿಂದ ಸಾಗಿದೆ. ಸಹಿ ಸಂಗ್ರಹಣಾ ಕಾಲದಲ್ಲಿ ನಮ್ಮ ಸಂಗಾತಿಗಳ ಗಮನಕ್ಕೆ ಬಂದ ಒಂದು ಸಂಗತಿಯೆಂದರೆ ಅಗರಬತ್ತಿ ಉದ್ದಿಮೆಯಲ್ಲಿ ದಿನಕ್ಕೆ ರೂ. 16.78 ದರದಲ್ಲಿ ತುಟ್ಟಿಭತ್ಯೆ ನೀಡಬೇಕಾಗಿದ್ದರೂ ಬೆಂಗಳೂರಿನಲ್ಲಿ ಯಾವ ಅಗರಬತ್ತಿ ಮಾಲಿಕನೂ ಇದನ್ನು ಕೊಡುತ್ತಿಲ್ಲ. ಬೆಂಗಳೂರು ನಗರದಲ್ಲಿ ಒಟ್ಟು ಸುಮಾರು ಒಂದು ಲಕ್ಷ ಹತ್ತು ಸಾವಿರ ಅಗರಬತ್ತಿ ಕಾರ್ಮಿಕರಿದ್ದಾರೆ. ಅಂದರೆ ನಗರದ ಅಗರಬತ್ತಿ ಮಾಲಿಕರು ಪ್ರತಿದಿನ ಈ ಕಾರ್ಮಿಕರಿಗೆ 18 ಲಕ್ಷ ರೂ.ಗಳ ವಂಚನೆ ಮಾಡುತ್ತಿದ್ದಾರೆ. ಕನಿಷ್ಟ ಕೂಲಿಯನ್ನು ಜ್ಯಾರಿಮಾಡಬೇಕಾಗಿರುವ ಸರಕಾರೀ ಅಧಿಕಾರಿಗಳೇ ಇದರಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂದು ಈ ಮಾಲಕರಿಗೆ ಸಲಹೆ ನೀಡಿ ಈ ಅಪರಾಧ ಸತತವಾಗಿ ನಡೆಯುವಂತೆ ಮಾಡುತ್ತಿದ್ದಾರೆ. ಸಿಐಟಿಯುವಿನ ಪ್ರಚಾರಾಂದೋಲನದಿಂದಾಗಿ ಕಾರ್ಮಿಕರಿಗೆ ಈಗ ತಮ್ಮ ಹಕ್ಕುಗಳ ಅರಿವಾಗುತ್ತಿದೆ. ಅದಕ್ಕಾಗಿ ಅವರು ಸಂಘಟಿತರಾಗುತ್ತಿದ್ದಾರೆ.

ಹಲ್ಲೆ ಮಾಡಿದ ಮ್ಯಾನೇಜರ್ ಬಂಧನ

ಉಡುಪು ಉದ್ಯಮಕ್ಕೆ ಬೆಂಗಳೂರು ನಗರ, ಬೆಂಗಳೂರು ಉತ್ತರ ಹಾಗೂ ದಕ್ಷಿಣ ತಾಲೂಕುಗಳನ್ನು ಒಳಗೊಂಡ ಪ್ರದೇಶದಲ್ಲಿ ನಿಗದಿತವಾದ ಕನಿಷ್ಟ ಕೂಲಿ ನಿಪುಣರಲ್ಲದ ಕಾರ್ಮಿಕರಿಗೆ 852 ರೂ, ಅರೆನಿಪುಣ ಕಾರ್ಮಿಕರಿಗೆ 972ರೂ ಹಾಗೂ ನಿಪುಣ ಕಾರ್ಮಿಕರಿಗೆ 1011ರೂ ಎಂದಿದ್ದರೂ, ಬೆಂಗಳೂರಿನ ಉಡುಪು ಕಾರ್ಮಿಕರಿಗೆ ದೊರೆಯುವ ಸಂಬಳ 500-600 ರೂ. ಮಾತ್ರ. ಕನಿಷ್ಟ ಕೂಲಿಯನ್ನು ಕೊಡಬೇಕಾಗಿ ಬಂದ ಒಬ್ಬ ಮಾಲಕ ಅದನ್ನು ಕೊಡುವ ಬದಲು ತನ್ನ ಉದ್ದಿಮೆಯ ಕೆಲಸ ಕಾರ್ಯಗಳನ್ನು ನಿಲ್ಲಿಸುವ ಘೋಷಣೆ ಮಾಡಿ ಕಾನೂನು ಬಾಹಿರವಾಗಿ 250 ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರನ್ನು ಬೀದಿಗೆಸೆದ. ಒಂದು ಉಡುಪು ಕಾರ್ಖಾನೆಯ ಹೊರಗೆ ಸಹಿ ಸಂಗ್ರಹ ಮಾಡುತ್ತಿದ್ದ ಒಬ್ಬ ಸಿಐಟಿಯು ಕಾರ್ಯಕರ್ತರ ಮೇಲೆ ಫ್ಯಾಕ್ಟರಿಯ ಪ್ರೊಡಕ್ಷನ್ ಮ್ಯಾನೇಜರ್ ಹಲ್ಲೆ ಮಾಡಿದ. ನಮ್ಮ ಸ್ಥಳೀಯ ಕಾರ್ಯಕರ್ತರು ತಕ್ಷಣ ಒಂದು ಪ್ರತಿಭಟನಾ ಮತಪ್ರದರ್ಶನ ನಡೆಸಿದರು. ಪೋಲೀಸರು ಆ ಮ್ಯಾನೇಜರರನ್ನು ಬಂಧಿಸಬೇಕಾಯಿತು. ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿಸಲು ಸಾಧ್ಯತೆಗಳ ಬಗ್ಗೆ ಬೇರೆಡೆಗಳಲ್ಲಿರುವ ಸಿಐಟಿಯು ಕಾರ್ಯಕರ್ತರ ಗಮನಕ್ಕೆ ತರಲು ಈ ಸಂಗತಿಗಳನ್ನು ವರದಿ ಮಾಡುತ್ತಿದ್ದೇವೆ.

ಮಾಲಕರ ಬುಡಮೇಲು ಮಾಡುವ ಪ್ರಯತ್ನ

ಇತ್ತೀಚೆಗೆ ರಾಜ್ಯದಲ್ಲಿ ಕನಿಷ್ಟ ಕೂಲಿ ಸಲಹಾ ಸಮಿತಿ ಎರಡು ಬಾರಿ ಸಭೆ ಸೇರಿತ್ತು. ಮೇ 25-26, 1993ರಂದು ಬೆಂಗಳೂರಿನಲ್ಲಿ ಸೇರಿದ ಸಭೆ ಪ್ಲಾಂಟೇಶನ್‌ಗಳಲ್ಲಿನ ಬಡಗಿ ಸಿಬ್ಬಂದಿಯೇತರ ಕೆಲಸ ಮಾಡುವವರು, ಅರಣ್ಯ, ಜಿನ್ನಿಂಗ್, ಮಡಿಕೆ ಉದ್ದಿಮೆ, ಅಕ್ಕಿ ಒಟ್ಟಿನ ಬೇಳೆಯ ಗಿರಣಿಗಳು ಮುಂತಾದೆಡೆ ಕಾರ್ಮಿಕರ ಕೂಲಿಯ ಬಗ್ಗೆ ತೀರ್ಮಾನಿಸಿತು. ಈ ಹಿಂದೆ ಆಗಸ್ಟ್ 31, 1990ರಲ್ಲಿ ಕೂಲಿ ಬಡತನ ಮಟ್ಟಕ್ಕಿಂತ ಕೆಳಗಿರಬಾರದು ಎಂದು ಮಾಡಿದ ನಿರ್ಧಾರಕ್ಕೆ ಕಟ್ಟು ಬಿದ್ದು ಸಮಿತಿ ಈ ಎಲ್ಲಾ ಉದ್ದಿಮೆಗಳಲ್ಲಿ ನಿಪುಣರಲ್ಲದ ಕಾರ್ಮಿಕರಿಗೆ 1309 ಪಾಯಿಂಟನಲ್ಲಿ 37.55 ರೂ. ಕನಿಷ್ಟ ಕೂಲಿಯಿರಬೇಕು ಎಂದು ಮತ್ತೊಮ್ಮೆ ಸರ್ವಾನುಮತದಿಂದ ಶಿಫಾರಸು ಮಾಡಿತು. 1309 ಪಾಯಿಂಟಿನ ಮೇಲೆ 3.5 ಪೈಸೆ 4 ಹಾಗೂ 5 ಪೈಸೆ ದರದಲ್ಲಿ ತುಟ್ಟಿಭತ್ಯೆ ನೀಡಬೇಕೆಂದೂ ಶಿಫಾರಸು ಮಾಡಿತು. ಸರಕಾರ ಈ ಸರ್ವಾನುಮತದ ಶಿಫಾರಸನ್ನು ಒಪ್ಪಿ ನೋಟಿಫೈ ಮಾಡುತ್ತದೋ ಎಂಬುದನ್ನು ಕಾದು ನೋಡಬೇಕು.

ಮತ್ತೆ ಇದೇ ಜೂನ್ 15-16ರಂದು ಸಭೆ ಸೇರಿದ ಸಲಹಾ ಸಮಿತಿ ಸರ್ವಾನುಮತದ ನಿರ್ಣಯಗಳಿಗೆ ಬರಲು ಸಾಧ್ಯವಾಗಿಲ್ಲ. ಹೋಟೆಲ್, ಏಲಕ್ಕಿ ಮಲೆ, ಮುದ್ರಣ ಉದ್ದಿಮೆಗಳಲ್ಲಿ ಕನಿಷ್ಟ ಕೂಲಿ ನಿಗದಿ ಪಡಿಸುವ ಕರಡು ನೋಟಿಫಿಕೇಶನ್ನು ಚರ್ಚೆಗೆ ಎತ್ತಿಕೊಂಡಿತು. ಇಲ್ಲಿ ಕನಿಷ್ಟ ದಿನ ಕೂಲಿ 1309 ಪಾಯಿಂಟಿನಲ್ಲಿ 37.55 ರೂ ಹಾಗೂ 3.5, 4, 5 ಪೈಸೆ ದರದಲ್ಲಿ ತುಟ್ಟಿಭತ್ಯೆ ಬಗ್ಗೆ ಈ ಹಿಂದೆ ಎಲ್ಲರ ಒಪ್ಪಿಗೆಯಂತೆ ತೀರ್ಮಾನವಾಗಿದ್ದರೂ ಮಾಲಕರ ಪ್ರತಿನಿಧಿಗಳು ಹೋಟೆಲ್ ಕಾರ್ಮಿಕರಿಗೆ ನೀಡುವ ಊಟದ ಬಗ್ಗೆ ... ಯಲ್ಲಿ ಮುರಕೊಳ್ಳಬೇಕು (ನೋಟಿಫೈ ... ಕೂಲಿಯ ಶೇ. 30) ಎಂದು ಒತ್ತಾಯಪಡಿಸಿದರು. ಇದನ್ನು ಕಾರ್ಮಿಕರ ಸಂಘಗಳ ಪ್ರತಿನಿಧಿಗಳು ವಿರೋಧಿಸಿದರು. ನಂತರ ಎಲ್ಲಾ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ 908 ಪಾಯಿಂಟಿನಲ್ಲಿ 1250 ರೂ. ಕೂಲಿ ನಿಗದಿಪಡಿಸಬೇಕೆಂಬ ಒತ್ತಾಯವನ್ನು ಬೆಂಬಲಿಸಿದರು.

ಏಲಕ್ಕಿ ಮಲೆ ಮಾಲಕರ ಪ್ರತಿನಿಧಿಗಳು ತಾವೇ ಅರಣ್ಯ ಕಾರ್ಮಿಕರಿಗೆ ನೀಡಲು ಶಿಫಾರಸು ಮಾಡಿದ್ದ 37.55 ರೂ ನ್ನು ಶಿಫಾರಸು ಮಾಡಲು ಸಿದ್ಧರಿಲ್ಲವಾದ್ದರಿಂದ ಸರ್ವಾನುಮತದಿಂದ ನಿರ್ಣಯ ಸಾಧ್ಯವಾಗಲಿಲ್ಲ. ಏಲಕ್ಕಿ ಮಲೆಯಲ್ಲಿ 37.55ರೂ ಶೇ. ಒಪ್ಪಿಕೊಂಡರೆ ಇತರ ಪ್ಲಾಂಟೇಶನ್ ಕಾರ್ಮಿಕರಿಗೂ ಅದೇ ದರದಲ್ಲಿ ಕೊಡಬೇಕಾಗಬಹುದೆಂಬುದೇ ಮಾಲಕರ ಭಯ.

ನಿಜವಾಗಿ ಅವರೇ ಪ್ಲಾಂಟೇಶನ್ ಕಾರ್ಮಿಕರಿಗೆ ಹಾಗೂ ಬೀಡಿಕಾರ್ಮಿಕರಿಗೆ 908 ಪಾಯಿಂಟ್ ಮಟ್ಟದಲ್ಲಿ 23.50 ರೂ ದಿನಗೂಲಿ ಹಾಗೂ ನಂತರ ಪ್ರತಿ ಪಾಯಿಂಟಿಗೆ 3.5ಪೈಸೆ ತುಟ್ಟಿಭತ್ಯೆಗೆ 31-8-90ರ ಸಲಹಾ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಶಿಫಾರಸು ಮಾಡಿದ್ದರು. ಸರಕಾರ ಈ ಶಿಫಾರಸ್ಸನ್ನು ಒಪ್ಪಿಕೊಳ್ಳದೆ 976 ಪಾಯಿಂಟನಲ್ಲಿ 19.50 ರೂ. ಕನಿಷ್ಟ ಕೂಲಿ ಹಾಗೂ 2 ಪೈಸೆ ದರದಲ್ಲಿ ತುಟ್ಟಿಭತ್ಯೆ ಎಂದು ನೋಟಿಫೈ ಮಾಡಿತು. ಸಲಹಾ ಸಮಿತಿ ಶಿಫಾರಸಿನಂತೆ ನೋಟಿಫೈ ಮಾಡಿದ್ದರೆ ಅದೇ 1309 ಪಾಯಿಂಟಿನಲ್ಲಿ 37.55 ರೂ. ಆಗುತ್ತಿತ್ತು.

ಈಗ ಪ್ಲಾಂಟೇಶನ್ ಕಾರ್ಮಿಕರಿಗೂ ಅದೇ ದರ ಕೊಡಬೇಕಾಗಬಹುದು ಎಂಬ ನೆವದ ಮೇಲೆ (ಈಗ ತೋಟ ಕಾರ್ಮಿಕರಿಗೆ ನೋಟಿಫೈ ಆಗಿರುವ ಕನಿಷ್ಠಕೂಲಿ ತುಟ್ಟಿ ...) ತಾವು 908 ಪಾಯಿಂಟ್‌ನಲ್ಲಿ 23.55 ರೂಯೆಂದು ಶಿಫಾರಸು ಮಾಡಿದಾಗ ಅವರು ಪ್ರಾಮಾಣಿಕರಾಗಿರಲಿಲ್ಲ ಎಂಬುದನ್ನು ಬಯಲಿಗೆಳೆದಿದೆ.

ಇದು ಕಾರ್ಮಿಕ ಆಂದೋಲನದ ದೌರ್ಬಲ್ಯವನ್ನು ತೋರಿಸುತ್ತದೆ. ಸರ್ವಾನುಮತದ ಪ್ರಕಾರವೇ ಹೋದರೆ ಅದನ್ನು ಮಾಲಕರು ಬುಡಮೇಲು ಮಾಡುತ್ತಾರೆ.

ಆದ್ದರಿಂದ ಈಗ ಅಗತ್ಯವಾಗಿರುವುದು ನಮ್ಮ ಮೂಲಭೂತ ಹಕ್ಕುಗಳನ್ನು ಸ್ಥಾಪಿಸುವ ಹೋರಾಟ. ಕಾರ್ಮಿಕ ಆಂದೋಲನದಲ್ಲಿ ಒಗ್ಗಟ್ಟಿದ್ದರೆ ಒಂದು ವೈಜ್ಞಾನಿಕವಾಗಿ ಲೆಕ್ಕ ಹಾಕಿದ ಅಗತ್ಯ ಅಧಾರ ಕನಿಷ್ಟ ಕೂಲಿಗಾಗಿ ಹೋರಾಡುವ ನಿಲುವನ್ನು ತಳೆದರೆ ಅದನ್ನು ಈಡೇರಿಸಿಕೊಳ್ಳದಿರಲು ಕಾರಣವೇ ಇಲ್ಲ. ಅದೇ ರೀತಿ ನೋಟಿಫೈ ಮಾಡಿದ ಕೂಲಿಯನ್ನು ಜ್ಯಾರಿಗೆ ತರಿಸಲು ಹೋರಾಟ ಮಾಡಲು ಕಾರ್ಮಿಕರಲ್ಲಿ ಒಗ್ಗಟ್ಟಿದ್ದರೆ ಅವರು ಸಾಕಷ್ಟು ಮುನ್ನಡೆ ಸಾಧಿಸಲು ಸಾಧ್ಯ.

ಸಿಐಟಿಯು ಈ ವರ್ಷವೇ ಅಸಂಘಟಿತ ವಲಯದ ಕಾರ್ಮಿಕರ ಈ ಮುನ್ನಡೆ ಸಾಧಿಸಲು ಅಗತ್ಯ ಆಧಾರಿತ ಕನಿಷ್ಟ ಕೂಲಿ ಪಡೆಯಲು ನಿರ್ಧರಿಸಿದೆ.

ಬೆಂಗಳೂರಿನ ಮತ್ತು ಇತರೆಡೆ ನಡೆಯುತ್ತಿರುವ ಸಿದ್ಧತೆಗಳು ಹಾಗೂ ಮಾಲಕರ ಅಪ್ರಾಮಾಣಿಕ ನಿಲುವು ಬಯಲಾದುದನ್ನು ಎಲ್ಲಾ ಕಾರ್ಮಿಕರ ಬಳಿಗೆ ಒಯ್ಯಬೇಕು. ಅವರನ್ನು ಸಂಘಟಿಸಿ 1993ರ ಅಂತ್ಯದೊಳಗೆ ಅಸಂಗಟಿತ ಕಾರ್ಮಿಕರಿಗೆ ಅಗತ್ಯ ಆಧಾರಿತ ಕನಿಷ್ಟ ಕೂಲಿಯನ್ನು ಪಡೆಯಲು ಒಂದು ಶಕ್ತಿಶಾಲೀ ಹೋರಾಟವನ್ನು ಆರಂಬಿಸಲು ಎಲ್ಲಾ ಪ್ರಯತ್ನ ನಡೆಸಬೇಕು.

ಜುಲೈ 14ರ ಮುಷ್ಕರದ ಯಶಸ್ಸು ಈ ದಿಕ್ಕಿನಲ್ಲಿ ಇನ್ನೊಂದು ಹೆಜ್ಜೆಯಾಗಬೇಕು.

ಇತಿಹಾಸದೊಂದಿಗೆ ಹೆಜ್ಜೆ ಹಾಕಿದ ಇ.ಎಂ.ಎಸ್.

(ಐ.ಎನ್.ಎಸ್. ಸುದ್ದಿ)


ಸಿಪಿಐ(ಎಂ) ಹಿರಿಯ ಮುತ್ಸದ್ದಿ ಇ.ಎ. ಶಂಕರನ್ ನಂಬೂದರಿಪ್ಪಾಡ್‌ರವರಿಗೆ ಜೂನ್ 14ರಂದು 84 ವರ್ಷಗಳು ತುಂಬಿದವು. ಅಂದು ಕೇರಳದ ಪ್ರಮುಖ ದೈನಿಕಗಳು ಅವರ ಜೀವನ, ಸಾಧನೆ ಹಾಗೂ ಸರಳತೆಯ ಬಗ್ಗೆ ವಿವರವಾದ ವರದಿಗಳನ್ನು ಪ್ರಕಟಿಸಿದವು.

ಆದರೆ ಇಎಂಎಸ್‌ರವರಿಗೆ ಆ ದಿನ ಕೂಡಾ ಎಂದಿನ ಸರಳ ಕಾರ್ಯಕ್ರಮಗಳ ದಿನವಾಗಿತ್ತು. ಒಂದೇ ವ್ಯತ್ಯಾಸವೆಂದರೆ ಹಲವು ರಾಜಕೀಯ-ಸಾಮಾಜಿಕ ಮುಖಂಡರು ಅವರ ಮನೆಗೆ ಭೇಟಿಯಿತ್ತಿದ್ದರು.

ಅದರ ಹಿಂದಿನ ದಿನವೇ ಇಎಂಎಸ್ ಕೊಲ್ಲಂನಲ್ಲಿ ಡಿವೈಎಫ್‌ಐ ಮಹಿಳಾ ವಿಭಾಗದ ಒಂದು ಅಧ್ಯಯನ ಶಿಬಿರವನ್ನು ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಡಿವೈಎಫ್‌ಐ ಆಂದೋಲನದ 84 ಯುವಜನರು ಒಂದೊಂದು ಗುಲಾಬಿ ಹೂವನ್ನು ಅವರಿಗೆ ಹುಟ್ಟುಹಬ್ಬದ ಕಾಣಿಕೆಯಾಗಿ ನೀಡಿದರು. ಒಂದು ವಿಶಾಲ ನಗೆ ಬೀರಿ ಇಎಂಎಸ್ ಅವನ್ನು ಸ್ವೀಕರಿಸಿದರು.

ಮರು ದಿನ ಅಂದರೆ ಜೂನ್ 15ರಂದು ತಿರುವನಂತಪುರದಲ್ಲಿ "ಇತಿಹಾಸದೊಂದಿಗೆ ನಡೆದ ವ್ಯಕ್ತಿ" ಎಂಬ ಅವರ ಜೀವನ ಚರಿತ್ರೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಇ.ಕೆ.ನಯನಾರ್ ಬಿಡುಗಡೆ ಮಾಡಿದರು. ಒಂದು ಸಾರ್ವಜನಿಕ ಸಭೆಯಲ್ಲಿ ಪುಸ್ತಕದ ಒಂದು ಪ್ರತಿಯನ್ನು ಬಿಶಪ್ ಪೌಲೋಸ್ ಮಾರ್ ಪೌಲೋಸ್‌ರವರಿಗೆ ನೀಡುವ ಮೂಲಕ ಅದನ್ನು ಬಿಡುಗಡೆ ಮಾಡಿದರು.

ಈ ಸಭೆಯ ಅಧ್ಯಕ್ಷರಾಗಿದ್ದ ಪಿ.ಗೋವಿಂದಪಿಳ್ಳೆ ಇದು ಒಂದು ಹೊಸ ರೀತಿಯಲ್ಲಿ ಬರೆದ ಜೀವನ ಚರಿತ್ರೆ, ಏಕೆಂದರೆ ಇದೊಂದು ಬೌದ್ಧಿಕ ಜೀವನ ಚರಿತ್ರೆ ಎಂಧರು. ಒಬ್ಬ ಬುದ್ಧಿಜೀವಿಯಾಗಿ ಇಎಂಎಸ್‌ರ ವಿಕಾಸವನ್ನು ಇದು ತೋರ್ಪಡಿಸುತ್ತದೆ ಎಂದರು.



ಇಎಂಎಸ್ ಕೇರಳದ ರಾಜಕೀಯದಲ್ಲಿ ಮಾತ್ರವಲ್ಲ, ತತ್ವಶಾಸ್ತ್ರದ ಅಧ್ಯಯನ, ಅರ್ಥಶಾಸ್ತ್ರ ಸಾಹಿತ್ಯ ಚರಿತ್ರೆ, ಇತ್ಯಾದಿ ಎಲ್ಲಾ ರಂಗಗಳಲ್ಲೂ ಇದ್ದಾರೆ ಎಂದು ನಾಯನಾರ್ ಹೇಳಿದರು. ಭೂ ಮಾಲಕ ಕುಟುಂಬದಲ್ಲಿ ಜನಿಸಿದ ಅವರು ಕೃಷಿಕರ ಪ್ರಯೋಜನಕ್ಕಾಗಿ ಪಾಳೆಯಗಾರಿಕೆಯ ವಿರುದ್ಧ ಹೋರಾಡಲು ನೇತೃತ್ವ, ಸೈದ್ಧಾಂತಿಕ ಶಕ್ತಿಯನ್ನು ನೀಡಿದರು. ಒಂದು ದೈನಿಕ ಅವರನ್ನು ಕೇರಳದ ಮಹಾಪುರುಷ ಎಂದರು ವರ್ಣಿಸಿದೆ. ಆದರೆ ಅದು ಇಎಂಎಸ್‌ರವರ ಮೇಲೆ ಅಷ್ಟೊಂದು ಪ್ರಭಾರ ಬೀರಿದ ಸಿದ್ಧಾಂತದ ಬಗ್ಗೆ ಏನೂ ಹೇಳುವುದಿಲ್ಲ ಎಂದ ನಾಯನಾರ್ ಇಎಂಎಸ್ ಸ್ವಯಂವಿಮರ್ಶೆಯ ವ್ಯಕ್ತಿ'ಯಾಗಿದ್ದರೂ ತಾವು ಅಂಗೀಕರಿಸಿದ ಬದಲಾವಣೆಗಳನ್ನು ತಾವೇ ತಮ್ಮ ಲೇಖನಗಳ ಮೂಲಕ ವಿವರಿಸುತ್ತಿದ್ದರು ಎಂದರು.

ಇಎಂಎಸ್ ಬಹಳ ಟೀಕೆಗಳನ್ನು ಎದುರಿಸಿದ್ದಾರೆ. ಆದರೆ ಯಾವುದರಿಂದಲೂ ಉದ್ರೇಕಿತರಾಗಲಿಲ್ಲ. ಪ್ರತಿಯೊಂದು ಟೀಕೆಯನ್ನು ಸಹನೆಯಿಂದ ಅಧ್ಯಯನ ಮಾಡಿ ತರ್ಕಬದ್ಧವಾಗಿ ಆ ಟೀಕೆಯಲ್ಲಿ ಹೂರಣವಿಲ್ಲ ಎಂದು ವಿವರಿಸುತ್ತಿದ್ದರು. ಮಾರ್ಕ್ಸ್‌ವಾದ-ಲೆನಿನ್‌ವಾದ ಇಎಂಎಸ್‌ರವರ ತಾತ್ವಿಕ ಶಕ್ತಿ, ಕೇರಳದ ಹಾಗೂ ಭಾರತದ ನಿರ್ದಿಷ್ಟ ಸನ್ನಿವೇಶಕ್ಕೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಅನ್ವಯ ಅವರ ಪ್ರಮುಖ ಕೊಡುಗೆ ಎಂದು ನಾಯನಾರ್ ಹೇಳಿದರು.

ಬಿಷಪ್ ಪೌಲೋಸ್ ಭಾರತದ ಇಎಂಎಸ್ ಮಾತ್ರ ನನಗೆ ಗೊತ್ತು ಎಂದು ಮಾಸ್ಕೋದಲ್ಲಿ ಒಬ್ಬ ಟ್ಯಾಕ್ಸಿ ಚಾಲಕ ಹೇಳಿದುದನ್ನು ನೆನಪಿಸಿದರು. ಅವರ ವೈಯಕ್ತಿಕ ಜೀವನದ ಶುದ್ಧತೆ ಅತ್ಯಂತ ಅಸಾಮಾನ್ಯ ಎಂದರು. ಅವರನ್ನು ತಾನು ಒಬ್ಬ 'ರಾಜಕೀಯ ಪುರೋಹಿತ' ಎಂದು ಅತ್ಯಂತ ಗೌರವದಿಂದ ಕಾಣುವುದಾಗಿ ತಿಳಿಸಿದರು.

ಮೊದಲು ಭಾರತವನ್ನು ....

ಪುಟ 5ರಿಂದ

ಮತ್ತೊಬ್ಬ ಭಾಷಣಕಾರ ನ್ಯಾಯಶಾಸ್ತ್ರಜ್ಞರಾದ ಪ್ರೊ. ಬಶೀರ್ ಹುಸೇನ್ ಜಮಾತ್-ಎ-ಇಸ್ಲಾಮಿ ಹಾಗೂ ಆರ್.ಎಸ್.ಎಸ್‌ನ ನಡುವೆ ಬಹಳ ಮಿತ್ರತ್ವ ಇದೆ, ವಾಜಪೇಯಿಯವರು ಜನತಾ ಸರ್ಕಾರದಲ್ಲಿ ವಿದೇಶಾಂಗ ಮಂತ್ರಿಯಾಗಿದ್ದಾಗ ವಿದೇಶಗಳಿಗೆ ಕಳಿಸಿದ ಪ್ರತಿಯೊಂದು ನಿಯೋಗದಲ್ಲೂ ಕನಿಷ್ಠ ಒಬ್ಬ ಜಮಾತ್‌ನ ಪ್ರತಿನಿಧಿ ಇರುತ್ತಿದ್ದರು ಎಂದರು. ಮುಸ್ಲಿಮರ ತುಷ್ಟಿಕರಣ ನಡೆಯುತ್ತದೆ ಎಂಬುದು ಶುದ್ಧ ಸುಳ್ಳು ಎಂದು ಒತ್ತಿ ಹೇಳಿದರು. 'ರಾಮಮಂದಿರವನ್ನು ಅಲ್ಲೇ ಕಟ್ಟಬೇಕು' ಎಂಬುದಕ್ಕೆ ತಾನೂ ಸಹಿಹಾಕಿದ್ದೇನೆ ಎಂಬ ವರದಿ ಶುದ್ಧ ಸುಳ್ಳು ಎಂದು ಹೇಳಿದ ಅವರು ಕಾರಂತರ ಪತ್ರಿಕಾ ಸಮ್ಮೇಳನದಲ್ಲಿ ಈ ಸುಳ್ಳನ್ನು ಹೇಳಲಾಯಿತಂತೆ ಎಂದು ಹೇಳಿದರು. ವಾಸ್ತವವಾಗಿ ಸೈಯದ್ ಶಹಾಬುದ್ದೀನ್ ತಮ್ಮ ಐ.ಎಫ್.ಎಸ್. ಹುದ್ದೆ ಬಿಟ್ಟು ರಾಜಕೀಯಕ್ಕೆ ಬರಲು ಕೂಡಾ ವಾಜಪೇಯಿಯವರೇ ಕಾರಣ ಎಂಬ ಸಂಗತಿಯತ್ತ ಕಾಂ. ಯೆಚೂರಿಯವರು ಸಭಿಕರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸಭಿಕರ ಗಮನ ಸೆಳೆದರು.

ಸಭಿಕರ ಇತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸೀತಾರಾಂ ಯೆಚೂರಿಯವರು ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಸಮಾನ ನಾಗರಿಕ ಸಂಹಿತೆ' ಎಂಬುದು ಅಗತ್ಯವಾದರೂ ವಿವಿಧ ಅಲ್ಪಸಂಖ್ಯಾತ ಗುಂಪುಗಳಿಗೆ ತಮ್ಮ ಹಿತಾಸಕ್ತಿಗಳ ರಕ್ಷಣೆಯಾಗುತ್ತದೆ ಎಂಬ ವಿಶ್ವಾಸ ಮೂಡಿದಾಗಲೇ ಇದು ಸಾಧ್ಯ ಎಂದರು. ಆ ಪ್ರಕ್ರಿಯೆ ನಡೆಯುತ್ತಿದ್ದಾಗಲೇ ಕೋಮುವಾದಿಗಳೇ ಅವರಲ್ಲಿ ಮತ್ತೆ ಅಭದ್ರತೆಯ ಭಾವನೆ ಮೂಡಿಸಿ 'ಸಮಾನ ನಾಗರಿಕ ಸಂಹಿತೆ' ರೂಪುಗೊಳ್ಳದಂತೆ ತಡೆಯುತ್ತಿದ್ದಾರೆ. ಇನ್ನೊಂದೆಡೆ ವಾಸ್ತವವಾಗಿ ಈ ರೀತಿಯ ಸಮಾನ ಶಾಸನವನ್ನು ಈ ಹಿಂದೂ ಕೋಮುವಾದಿ ಶಕ್ತಿಗಳೇ ಹಿಂದೂ ಕೋಡ್ ಬಿಲ್‌ನ್ನು ವಿರೋಧಿಸುವ ಮೂಲಕ ವಿರೋಧಿಸಿದ್ದರು ಎಂಬ ಅಂಶದತ್ತ ಅವರು ಸಭಿಕರ ಗಮನ ಸೆಳೆದರು.

ಬಿಜೆಪಿಯ ಬೆಳವಣಿಗೆಗೆ ತಮ್ಮ ಕಾಂಗ್ರೆಸ್-ವಿರೋಧದಿಂದಾಗಿ ಎಡಪಕ್ಷಗಳೂ ಅವಕಾಶ ನೀಡಲಿಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಹಿಂದೆ ಕಾಂಗ್ರೆಸ್-ವಿರುದ್ಧ ಬಿಜೆಪಿಯೂ ಸೇರಿದಂತೆ ಸರ್ವವ್ಯಾಪೀ ವಿರೋಧೀ ಒಕ್ಕಟ್ಟಿನ ಪ್ರಯತ್ನಗಳನ್ನು ಎಡಪಕ್ಷಗಳು ವಿರೋಧಿಸಿದಾಗ ಕಾಂಗ್ರೆಸ್ ಏಜೆಂಟರು ಎಂಬ ಟೀಕೆಯೂ ಬಂದಿತ್ತು ಎಂದು ನೆನಪಿಸಿದರು. ಎಡಪಕ್ಷಗಳು ವಾಸ್ತವವಾಗಿ ಬಿಜೆಪಿಯ ಬೆಳವಣಿಗೆಯನ್ನು ವಿಳಂಬಗೊಳಿಸಿದರು ಎಂದು ಅವರು ವಿವರಿಸಿದರು.

'ಜಾತ್ಯಾತೀತತೆ ಹಾಗೂ ಶಾಸನಬದ್ಧ ಆಳ್ವಿಕೆಯ ವೇದಿಕೆ'ಯ ಪರವಾಗಿ ಆರಂಭದಲ್ಲಿ ಗೋಪಾಲಗೌಡರು ಭಾಷಣಕಾರರ ಪರಿಚಯ ಮಾಡಿಕೊಟ್ಟರು. ನಾಗಮೋಹನ್‌ದಾಸ್ ಸ್ವಾಗತ ಭಾಷಣ ಮಾಡಿದರು. ಹೇಮಲತಾ ಅವರು ವಂದನಾರ್ಪಣೆ ಮಾಡಿದರು. ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿದ್ದ ವೇದಿಕೆಯ ಅಧ್ಯಕ್ಷ ಕೋ.ಚೆನ್ನಬಸಪ್ಪನವರು ವ್ಯಕ್ತಪಡಿಸಿದ 'ಸತ್ಯದ ಧ್ವನಿ ರಾಜ್ಯದ ಎಲ್ಲಾ ಮೂಲೆಗಳನ್ನು ಮುಟ್ಟುತ್ತದೆ' ಎಂಬ ಆಶಾಭಾವನೆ ಸಭಿಕರೆಲ್ಲರಲ್ಲೂ ಸಮಾರಂಭ ಮುಗಿಯುವ ವೇಳೆಗೆ ಮೂಡಿದಂತಿತ್ತು.

ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ಶಾಸಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್